**GOVERNMENT OF KARNATAKA**

**KARNATAKA LOKAYUKTA**

No.LOK/DE/126/2015/ARE-5

Multi Storied Building,
Dr.B.R.Ambedkar Veedhi,
Bengaluru-560 001
Date: 27th February 2023

## RECOMMENDATION

Sub:-Departmental inquiry against;
Smt. Rajamma A. Chowdareddy, the then Secretary, Bangalore Development Authority, Bengaluru – Reg.

Ref:- 1) Govt. Order No.ಸಿಆಸುಇ 27 ಕೆಇವಿ 2015, Bengaluru dated 27/2/2015 .

2) Nomination order No.LOK/DE/126/2015 Bengaluru dated 11/3/2015 of Lokayukta, State of Karnataka, Bengaluru

3) Inquiry Report dated 23/1/2023 of Additional Registrar of Enquiries-5, Karnataka Lokayukta, Bengaluru

----

The Government by its order dated 27/2/2015 initiated the disciplinary proceedings against Smt. Rajamma A. Chowdareddy, the then Secretary, Bangalore Development Authority, Bengaluru (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.LOK/DE/126/2015 Bengaluru dated 11/3/2015 nominated the Additional Registrar of Enquiries-5, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by her.

3. The gist of the charge framed against the DGO Smt. Rajamma A. Chowdareddy, the then Secretary, Bangalore Development Authority, Bengaluru is as follows:-

"One Sri Nagendra S/o. Gundappa, resident of NO.37, Valagerahalli, Shivanapalya, Kengeri Post, Bengaluru was the owner of land bearing Sy. No. 24/13 of Valagerahalli Village. In the said land an area of 4 ½ Guntas was utilized by the Bangalore Development Authority in the year 2002, without there being any acquisition and compensation paid. Therefore, he was entitled for 50% i.e., 2450 square feet of site in lieu of portion of his land being utilized by Bangalore Development Authority. The said Nagendra filed an Application before the Authority in the year 2008, but the same did not yield any result.

So also, in the lands bearing Sy. No. 163/6, 118/1 belonging to one Smt. Parvathamma, an extent of 25 Guntas was acquired by Bangalore Development Authority in the year 2000-2002 for formation of Sir M. Visvesvaraya Layout and the said Smt. Parvathamma was entitled for site measuring 30' x 40' in lieu of acquisition of her land under Promotional Scheme.

Since the above two persons were not given the benefits by the Bangalore Development Authority, they approached Sri N. Basavaraja S/o. Nanjundappa, No.1782, 'C' Block, Sahakaranagara, Bengaluru 560092 (Complainant) for getting their works done. They had also executed an Authority deed in favour of said N. Basavaraja on 16/1/2014

and 17/1/2014 for getting their works done. Thereafter, the said Sri N. Basavaraja approached the DGO for doing the said works and the DGO demanded bribe amount. Finally, on 22/4/2014 when the Complainant met the DGO, the DGO demanded bribe of Rs.10.00 Lakhs and after negotiation, the same was reduced to Rs.8.00 Lakhs. Finally, the Complainant agreed to pay Rs.6.00 Lakhs in respect of the work of Sri Nagendra and Rs.1.00 Lakh in respect of the work of Smt. Parvathamma. Thus, the DGO has demanded a total sum of Rs.7.00 Lakhs for getting the works of Sri Nagendra and Smt. Parvathamma done.

Unwilling to pay the bribe amount, the Complainant approached the Lokayukta Police, City Division, Bengaluru and lodged a complaint on 25/4/2014, which was registered in Cr. No. 16/2014 of Bengaluru City Lokayukta Police Station. Thereafter when the trap operation was conducted on 25/4/2014, the DGO again demanded and accepted bribe amount of Rs.7.00 Lakhs from the Complainant in her chamber and was caught hold of by the Lokayukta Police.

The bribe amount was seized from the possession of the DGO under a Mahazar and the conversation held between the DGO and the Complainant was identified by her higher officer i.e., Sri Sham Bhat, the then Commissioner, Bangalore Development Authority.

Thus, the DGO, being a Government Servant by demanding and accepting bribe amount of

Rs.7.00 Lakhs from the Complainant for doing an official favour, has failed to maintain absolute integrity and devotion to duty and thereby acted in a manner unbecoming of Government Servant in violation of Rule 3(1)(i) to (iii) of the Karnataka Civil Services (Conduct) Rules, 1966."

4. In support of the charge, the Presenting Officer has examined four witnesses, namely Sri Basavaraju S/o. Nanjundappa (Complainant); Sri Srinivasa S/o. Rama (Panch Witness); Sri M. Narayana S/o. Devaiah (Investigating officer); and Sri Sham Bhat, the then Commissioner, Bengaluru Development Authority as PWs 1 to 4 and has marked documents as Exhibits P1 to P18. The inquiry officer has considered the evidence on record, including the important evidence of PW-1 – Complainant and other witnesses who have spoken in support of the Mahazar drawn and recovery made, and has rightly held that the evidence on record establish the charge leveled against the DGO. In a recent judgment of the Hon'ble Supreme Court of India in the case of Neeraj Dutta Vs. State (Govt. of NCT of Delhi), reported in 2022 SCC Online SC 1724, the Hon'ble Supreme Court has held that "if there is an offer to pay by the bribe giver without there being any demand from the public servant and the latter simply accepts the offer and receives the illegal gratification, it is a case of acceptance as per Section 7 of the Act. In such a case, there need not be a prior demand by the public servant." The Inquiry Officer (Additional Registrar of Enquiries-5) on proper appreciation of oral and documentary evidence has held that the Disciplinary Authority

has proved the above charge against DGO Smt. Rajamma A. Chowdareddy, the then Secretary, Bangalore Development Authority, Bengaluru.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per service particulars furnished by the Accountant General in letter dated 18/6/2014, the DGO is due to retire from service on 31/8/2025.

7. Having Regard to the nature of charge (demand and acceptance of bribe) proved against DGO Smt. Rajamma A. Chowdareddy, the then Secretary, Bangalore Development Authority, Bengaluru, it is recommended to the Government for imposing penalty of Compulsory retirement from service on DGO Smt. Rajamma A. Chowdareddy.

8. Action taken in the matter shall be intimated to this Authority.

Connected records are enclosed herewith.

27/2/22

**(JUSTICE B.S.PATIL)**
Lokayukta,
State of Karnataka,
Bengaluru

<u>ಕರ್ನಾಟಕ ಲೋಕಾಯುಕ್ತ</u>

ಸಂಖ್ಯೆ: ಲೋಕ್/ಎಆರ್‌ಇ-5/ಇಎನ್‌ಕ್ಯೂ-126/2015

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 23.01.2023

**<u>ವಿಚಾರಣಾ ವರದಿ</u>**

**ವಿಷಯ:** (1) ಶ್ರೀಮತಿ ರಾಜಮ್ಮ ಎ.ಚೌಡರೆಡ್ಡಿ, ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ವಿರುದ್ಧದ ಇಲಾಖಾ ವಿಚಾರಣೆ.

**ಉಲ್ಲೇಖ:** (1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 27 ಕೆಇವಿ 2015, ಬೆಂಗಳೂರು ದಿ: 27.02.2015
(2) ಗೌರವಾನ್ವಿತ ಲೋಕಾಯುಕ್ತರ ನಾಮಿನೇಷನ್ ಆದೇಶ ಸಂಖ್ಯೆ:ಲೋಕ್/ಡಿಇ/126/2015 ಬೆಂಗಳೂರು ದಿ: 11.03.2015.

*****

1) ಶ್ರೀಮತಿ ರಾಜಮ್ಮ ಚೌಡರೆಡ್ಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಜನವರಿ 2014 ರಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಹೂಡಲಾಗಿರುತ್ತದೆ. (ಮುಂದೆ ಇವರನ್ನು ಆಪಾದಿತೆ ಸರ್ಕಾರಿ ನೌಕರ(ಆ.ಸ.ನೌ)/ಆಪಾದಿತೆ ಎಂದು ಓದಿಕೊಳ್ಳಲಾಗುವುದು).

2) ಮೇಲೆ ನಮೂದಿಸಿದ ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಉಲ್ಲೇಖ(2)ರ ಗೌರವಾನ್ವಿತ ಲೋಕಾಯುಕ್ತರ ಆದೇಶ ಸಂಖ್ಯೆ: :ಲೋಕ್/ಡಿಇ/126/2015 ದಿ:11.03.2015 ರಡಿಯಲ್ಲಿ ಅಪರ ನಿಬಂಧಕರು, ವಿಚಾರಣೆಗಳು-5 ಇವರಿಗೆ ದೋಷಾರೋಪಣೆಯನ್ನು ರಚಿಸಿ ಇವರ ವಿರುದ್ಧ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ನಾಮನಿರ್ದೇಶನವಾಗಿರುತ್ತದೆ. ಇದರನ್ವಯ ಹಿಂದಿನ ಅಪರ ನಿಬಂಧಕರು ವಿಚಾರಣೆಗಳು-05 ದೋಷಾರೋಪಣೆಯನ್ನು ರಚಿಸಿ ಆರೋಪಣೆ ವಿವರ, ಆರೋಪಣೆಯ ವಿಷಯ ಮತ್ತು ಇವುಗಳನ್ನು ಸಮರ್ಥಿಸುವ ದಸ್ತಾವೇಜುಗಳನ್ನು ನಮೂದಿಸಿ ಈ ಆರೋಪಣೆಗಳಿಗೆ ಸಂಬಂಧಿಸಿದಂತೆ ಇವುಗಳ ನಕಲುಗಳನ್ನು ಆಪಾದಿತೆಗೆ ಕಳುಹಿಸಿ ಅವರನ್ನು ಹಾಜರಾಗಲು ಹಾಗೂ ಅವರ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

3) ಆ.ಸ.ನೌ ಇವರ ವಿರುದ್ಧ ಈ ಕೆಳಕಂಡಂತೆ ಅನುಬಂಧ-1ರಲ್ಲಿ ದೋಷಾರೋಪಣೆ ಪಟ್ಟಿ ಇದ್ದು ಅನುಬಂಧ-2ರಲ್ಲಿ ದೋಷಾರೋಪಣೆ ಪಟ್ಟಿಯಲ್ಲಿ ಆಪಾದನೆಯ ವಿವರಗಳು ಈ ಕೆಳಗಿನಂತಿರುತ್ತದೆ:

**ANNEXURE NO.I**

**CHARGE**

That you DGO by name Smt.Rajamma.A Chowdareddy, Secretary, BDA, Bangalore while working in the said capacity one Sri Nagendra s/o.Gundappa resident of No.37, Valagerahalli, Shivanapalya Kengeri Post, Bangalore 560 060, who is the owner of land Sy.No.24/13 of Valagerahalli Village and in the said land an area measuring 4 and half guntas land was used by the BDA in the year 2002 which was not acquired and compensation was not paid and 50% i.e. free site measuring 2450 sqft. was to be paid and he has filed an application before the BDA in the year 2008 but it was in vain and so also one Smt.Parvathamma who is the owner of land Sy.No.163/6, 118/1 measuring to the extent of 0.25 guntas was acquired in the year 2000-2002 for formation of Sir.M.Vishweswariah layout and said Smt.Parvathamma also under the promotional scheme is entitled to receive the site measuring 30' x 40' but to those two persons free sites were not given and therefore both the said persons met with the Complainant Sri.N.Basavaraja S/o.Nanjundappa , No.1782, C block, Sahakaranagara, Bangalore - 92 for getting the work done and executed the authority deed on 16.1.2014 and 17.1.2014 in his favour for getting the work done and thereafter the said Complainant approached you the DGO for doing the said work of the said persons and you demanded the bribe amount and finally on 22.4.2014 when the Complainant met with you the DGO for doing the work of said persons, you DGO has demanded the bribe of Rs.10 lakhs and thereafter reduced to Rs.8 lakhs and finally Complainant agreed to pay Rs.6 lakhs for doing the work of Nagendra and Rs.1 lakh for doing the work of Smt.Parvathamma and totally you have demanded the bribe of Rs.7 lakhs for disposal of the files of the said persons and said

conversation was recorded in the mobile and the Complainant not willing to pay the said bribe amount approached the Lokayukta Police Bangalore City Division, and lodged the complaint on 25.4.2014 which was registered in Cr.No.16/2014 for the offences punishable under Section 7, 13(1)(d) read with Section 13(2) of the Prevention of Corruption Act, 1988 and on 25.4.2014 while you DGO was demanding and accepting the bribe amount of the Rs.7 lakhs from the Complainant in your office chamber you were caught hold by the Lokayukta police and amount was seized under mahazar and your voice recorded in the voice recorder was identified by your higher officer Sri.Shambhat, Commissioner BDA Bangalore and the Investigation officer after investigation has submitted the final report; and thereby you DGO has failed to maintain absolute integrity and devotion to duty, and caused dereliction of duty and acted in a manner of unbecoming of a Government Servant and thereby committed official misconduct as enumerated u/s 3(1)(i) to (iii) of Karnataka Civil Service (Conduct ) Rules 1966.

**ANNEXURE NO.II**

**STATEMENT OF IMPUTATIONS OF MISCONDUCT**

This is an investigation taken up suo-moto by Hon'ble Lokayukta under Section 7(2) of the Karnataka Lokayukta Act, 1984 on the basis of the material placed by the Police Inspector, Karnataka Lokayukta, City Division, Bangalore, in Cr.No.16/2014 of Bangalore City Lokayukta Police Station, for the offence punishable u/s 7,13(1)(d) r/w 13(2) of Prevention of Corruption Act 1988 on the complaint filed by Sri N.Basavaraja Bin Nanjundappa, r/o No.1783, C Block, Sahakaranagar, Bangalore.92 (hereinafter referred as complainant), making allegations of demand for illegal gratification by Smt.Rajamma.A. Chowdareddy, Secretary, BDA, Bangalore, (hereinafter referred to as 'respondent' ) for showing an official favour and the respondent was caught red handed while receiving the said bribe amount of Rs.7 lakhs being the bribe amount and the tainted

amount was recovered from the respondent and was arrested and released on bail.

The brief facts of the case are that the lands of one Sri Nagendra and Smt.B.Parvathamma was utilized by the BDA and in lieu of said land, they were entitled for 50% free land and they had submitted application. In this regard, complainant approached the respondent on several occasions for which the respondent demanded to pay the bribe amount of Rs.7 lakhs in total to get his work done.

Since the complainant was not willing to pay the bribe amount, he approached the Police Inspector, Karnataka Lokayukta, City Division, Bangalore [hereinafter referred to as 'Investigating Officer' in short 'I.O.' on 25.4.2014, and lodged a complaint against the respondent, on the basis of which the I.O registered a case in Cr. No. 16/2014 for the offences punishable under Section 7, 13(1)(d) read with Section 13(2) of the Prevention of Corruption Act, 1988.

After registering the case, I.O. secured two panch witnesses and conducted pre-trap formalities under an entrustment mahazar, a successful trap was laid wherein the respondent was caught red handed while demanding and accepting the bribe amount from complainant and the bribe amount was recovered from the possession of the respondent.

The facts and materials collected by the I.O. during the course of investigation prima facie shows that the respondent being a public servant has not maintained absolute integrity and devotion to duty and thereby acted in a manner unbecoming of a Public Servant, by demanding and accepting illegal gratification of Rs. 7 lakhs from the complainant to show an official favour and thereby the respondent has committed a grave misconduct.

Therefore the respondent was called upon to furnish her reply to the observation note. The respondent has submitted reply denying the allegations. On careful perusal of the reply furnished by the respondent, the reply appears to be not acceptable as except

denial of allegations, no material is placed in support of her contention.

Since said facts and material on record prima facie show that DGO has committed dereliction of duty which amounts to official misconduct under Rule 3(1) (ii) & (iii) of the KCS (Conduct) Rules, 1966 and the report of the Hon'ble Lokayukta u/s 12(3) of Karnataka Lokayukta Act was made to the Competent Authority to initiate proceedings against the said DGO. Accordingly, the Competent Authority has initiated Disciplinary Proceedings against DGO and entrusted the enquiry to the Hon'ble Lokayukta u/r 14-A of KCS (CC&A) Rules 1957. Hence the charge.

4) ಆ.ಸ.ನೌ ರವರು ದಿ: 20.6.2015 ರಲ್ಲಿ ಅಪರ ನಿಬಂಧಕರು ವಿಚಾರಣೆಗಳು–5 ಇವರ ಮುಂದೆ ಹಾಜರಾಗಿರುತ್ತಾರೆ. ಹಾಗೂ ತಮ್ಮ ಪರವಾಗಿ ವಕೀಲರನ್ನು ನೇಮಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿಸಲಾಗಿದ್ದು, ಶ್ರೀ ವೈಆರ್‌ಎಸ್ ವಕೀಲರನ್ನು ತಮ್ಮ ಪರವಾಗಿ ನೇಮಕಮಾಡಿಕೊಂಡಿರುತ್ತಾರೆ. ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆ.ಸ.ನೌ.ರವರು ತಾವು ಯಾವುದೇ ತಪ್ಪನ್ನು ಮಾಡಿರುವುದಿಲ್ಲವೆಂದು, ವಿಚಾರಣೆಯಾಗಬೇಕೆಂದು ಹೇಳಿರುತ್ತಾರೆ.

5) ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯನ್ನು ದಿ:8/10/2015 ಸಲ್ಲಿಸಿರುತ್ತಾರೆ. ಇವರು ತಮ್ಮ ಲಿಖಿತ ಹೇಳಿಕೆಯಲ್ಲಿ ತಮ್ಮ ವಿರುದ್ಧ ಆಪಾದಿಸಿರುವಂತೆ ತಾವು ಯಾವುದೇ ಲಂಚದ ಹಣವನ್ನು ಕೇಳಿರುವುದಿಲ್ಲ ಹಾಗೂ ಪಡೆದಿರುವುದಿಲ್ಲವೆಂದು ಹೇಳಿ, ತಮ್ಮ ವಿರುದ್ಧ ಮಾಡಿರುವ ಆರೋಪಣೆಯನ್ನು ಸುಳ್ಳೆಂದು ಅಲ್ಲಗೆಳೆದಿರುತ್ತಾರೆ. ಈ ನಡುವೆ ಆಸ.ನೌ.ರವರು ಇವರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಮಾಡಿರುವ ದೋಷಾರೋಪಣೆಯನ್ನು ಘನ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಈ ಆ.ಸ.ನೌ.ರವರು ಹೂಡಿದ್ದ ಪ್ರಕರಣವು 2021 ರಲ್ಲಿ ವಜಾ ಆಗಿರುತ್ತದೆ.

6) ಆ.ಸ.ನೌ.ರವರ ವಿರುದ್ಧ ಇರುವ ಆರೋಪಗಳನ್ನು ರುಜುವಾತು ಪಡಿಸಲು ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ 4 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಂಡಿದ್ದು, ದೂರುದಾರರಾದ ಶ್ರೀ ಬಸವರಾಜ್ ಇವರನ್ನು ಪ್ರಾ.ಸಾ.1 ಎಂದು, ನೆರಳು ಸಾಕ್ಷಿ ಶ್ರೀ ಶ್ರೀನಿವಾಸ್ ಇವರನ್ನು ಪ್ರಾ.ಸಾ.2 ಎಂದು ತನಿಖಾಧಿಕಾರಿಯಾದ ಶ್ರೀ ಎಂ.ನಾರಾಯಣ,

ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರನ್ನು ಪ್ರಾ.ಸಾ.3 ಎಂದು, ಆ.ಸ.ನೌ. ಇವರ ಮೇಲಾಧಿಕಾರಿಯಾದ ಅಂದರೆ ಅಂದಿನ ಬಿ.ಡಿ.ಎ. ಆಯುಕ್ತರಾದ ಶ್ರೀ ಶ್ಯಾಮ್‌ಭಟ್ಟ ಇವರನ್ನು ಪ್ರಾ.ಸಾ.4 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ನಿ.ಪಿ.1ರಿಂದ ನಿ.ಪಿ.18 ದಾಖಲೆಗಳನ್ನು ನಿಶಾನಿಸಿಕೊಂಡಿರುತ್ತಾರೆ.

ನಿ.ಪಿ.1: ದೂರುದಾರರು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರಿಗೆ ಸಲ್ಲಿಸಿದ ದೂರು.

ನಿ.ಪಿ.2: ಶ್ರೀ ನಾಗೇಂದ್ರ ಇವರು ದೂರುದಾರರಿಗೆ ಕೊಟ್ಟ ಅಧಿಕಾರ ಪತ್ರ

ನಿ.ಪಿ.3: ಶ್ರೀಮತಿ ಬಿ.ಪಾರ್ವತಮ್ಮ ಕೋಂ ಎಂ. ಮಲ್ಲಿಕಾರ್ಜುನಯ್ಯ ಉಲ್ಲಾಳು ಗ್ರಾಮ ಇವರು ದೂರುದಾರರಿಗೆ ಕೊಟ್ಟ ಅಧಿಕಾರ ಪತ್ರ.

ನಿ.ಪಿ.4: ಪ್ರಾಯೋಗಿಕ ಪಂಚನಾಮೆ

ನಿ.ಪಿ.5: ಟ್ರಾಪ್ ಪಂಚನಾಮೆ

ನಿ.ಪಿ.6: ಫಿರ್ಯಾದುದಾರರ ಹೇಳಿಕೆ

ನಿ.ಪಿ.6(ಎ): ನಿ.ಪಿ.6 ರಲ್ಲಿನ ಫಿರ್ಯಾದುದಾರರ ಹೇಳಿಕೆಯ ಭಾಗ

ನಿ.ಪಿ.7: ಫಿರ್ಯಾದುದಾರರು ಹಾಜರು ಪಡಿಸಿದ ನೋಟಿನ ನಂಬರುಗಳ ವಿವರ

ನಿ.ಪಿ.8; ಆಪಾದಿತೆ ಹಾಗೂ ಫಿರ್ಯಾದುದಾರರ ನಡುವೆ ನಡೆದ ಸಂಭಾಷಣೆಯ ಧ್ವನಿ ಮುದ್ರಣವನ್ನು ಲಿಪೀಕರಿಸಿರುವ ಭಾಗ.

ನಿ.ಪಿ.9: ತನಿಖಾಧಿಕಾರಿ, ಪೊಲೀಸ್ ಉಪಾಧೀಕ್ಷರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಾಕ್ಷಿದಾರರನ್ನು ಕಳುಹಿಸಲು ಕೋರಿ ಜಂಟಿ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರಿಗೆ ಬರೆದ ಪತ್ರ.

ನಿ.ಪಿ.10: ತನಿಖಾಧಿಕಾರಿ ಪೊಲೀಸ್ ಉಪಾಧೀಕ್ಷರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಾಕ್ಷಿದಾರರನ್ನು ಕಳುಹಿಸಲು ಕೋರಿ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಬರೆದ ಪತ್ರ.

ನಿ.ಪಿ.11: ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ಸಂಬಂಧಪಟ್ಟ ಕಡತಗಳು.

ನಿ.ಪಿ.12; ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ಸಂಬಂಧಪಟ್ಟ ಕಡತಗಳು.

ನಿ.ಪಿ.12(A): ಪ್ರಾ.ಸಾ.4 ರವರು ದಿ:25.4.2014 ರಂದು ಸಲ್ಲಿಸಿದ ವರದಿ

ನಿ.ಪಿ.13: ಆಪಾದಿತೆಯ ಸಮಜಾಯಿಷಿ ದಿ: 25.4.2014

ನಿ.ಪಿ.14: ಶ್ರೀ ಕೆ.ಚಿಕ್ಕಯ್ಯ ಇವರು ನೀಡಿರುವ ಹೇಳಿಕೆ.

ನಿ.ಪಿ.15: ತನಿಖಾಧಿಕಾರಿಯು ಅಡಿಷನಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದಿ: 12.5.2014 ರಲ್ಲಿ ಸಲ್ಲಿಸಿದ ಪತ್ರ.

ನಿ.ಪಿ.16: ಲೋಕೋಪಯೋಗಿ ಇಲಾಖೆಯವರು ತಯಾರಿಸಿರುವ ಕೃತ್ಯ ನಡೆದ ಸ್ಥಳದ ನಕ್ಷೆ

ನಿ.ಪಿ.17: ರಾಸಾಯನಿಕ ವಿಶ್ಲೇಷಣೆಯ ವರದಿ

ನಿ.ಪಿ.18: ಸರ್ಕಾರದಿಂದ ಆಪಾದಿತೆಯನ್ನು ಅಭಿಯೋಜನೆಗೆ ಒಳಪಡಿಸಲು ನೀಡಿರುವ ಅಭಿಯೋಜನಾ ಮಂಜೂರಾತಿ ಆದೇಶ

7) ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷ್ಯ ವಿಚಾರಣೆಯು ಮುಕ್ತಾಯವಾದ ನಂತರ ಆ.ಸ.ನೌ.ರವರ ಎರಡನೇ ಮೌಖಿಕ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು ಆ.ಸ.ನೌ.ರವರು ತಮ್ಮ ಪರವಾಗಿ ತಮ್ಮನ್ನು ವಿಚಾರಣೆ ಮಾಡಿಕೊಳ್ಳುತ್ತೇನೆಂದು ಹೇಳಿರುತ್ತಾರೆ. ಆ.ಸ.ನೌ.ರವರು ತಮ್ಮ ಪರವಾಗಿ ತಮ್ಮನ್ನು ಡಿ.ಡಬ್ಯ್ಯು-1 ಎಂದು ವಿಚಾರಣೆ ಮಾಡಿಕೊಂಡಿದ್ದು, ನಿ.ಡಿ.1 ರಿಂದ ನಿ.ಡಿ. 16ರವರೆಗೆ ದಾಖಲೆಗಳನ್ನು ನಿಶಾನಿಸಿಕೊಂಡಿರುತ್ತಾರೆ, ನಂತರ ಇವರ ಪರವಾಗಿ ಸಾಕ್ಷಿ ವಿಚಾರಣೆಯು ಮುಕ್ತಾಯವಾಗಿರುತ್ತದೆ.

ನಿ.ಡಿ.1: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.5ರವರ ಸಾಕ್ಷ್ಯ

ನಿ.ಡಿ-2: ಪ್ರಕರಣದ ಕಚ್ಚಾನಕ್ಷೆ

ನಿ.ಡಿ-3: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.12ರವರ ಸಾಕ್ಷ್ಯ

ನಿ.ಡಿ-4: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.8 ರವರ ಸಾಕ್ಷ್ಯ

ನಿ.ಡಿ.5: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಆಗಿರುವ ನ್ಯಾಯಾಲಯದ ತೀರ್ಪಿನ ದೃಢೀಕೃತ ನಕಲು.

ನಿ.ಡಿ.6: ಪಾರ್ವತಮ್ಮನವರ ಕಡತಕ್ಕೆ ಸಂಬಂಧಿಸಿದಂತೆ ಬಿಡಿಎ ಉಪ ಕಾರ್ಯದಶಿ-4ರವರು ದಿ:26.09.2016ರಂದು ನೀಡಿರುವ ಹಿಂಬರಹ.

ನಿ.ಡಿ.7: ನಾಗೇಂದ್ರರವರ ಕಡತಕ್ಕೆ ಸಂಬಂಧಿಸಿದಂತೆ ಬಿಡಿಎ ಉಪ ಕಾರ್ಯದರ್ಶಿ-4 ರವರು ದಿ:17.10.2016ರಂದು ನೀಡಿರುವ ಹಿಂಬರಹ.

ನಿ.ಡಿ.8: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 5 ರವರು (ಚಾ.ಸಾ.2) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.9 : ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 9 ರವರು (ಚಾ.ಸಾ.8) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.10: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 12 ರವರು (ಚಾ.ಸಾ.37) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.11 :- ಗಂಗುಲಪ್ಪ ಇವರ ವಿರುದ್ಧ ಕ್ರೈ.ನಂ. 16/2011 ರಲ್ಲಿ ದಾಖಲಾಗಿದ್ದ ದೂರಿನ ಪ್ರತಿ, ಪ್ರ.ವ.ವ. ಪ್ರತಿ ಮತ್ತು ದೋಷಾರೋಪಣೆ ಪಟ್ಟಿಯ ಪ್ರತಿ. ( ಒಟ್ಟು 7 ಹಾಳೆಗಳು).

ನಿ.ಡಿ.12 :- ಚಂದ್ರಶೇಖರ ಇವರ ವಿರುದ್ಧ ಕ್ರೈ.ನಂ. 47/2010 ರಲ್ಲಿ ದಾಖಲಾಗಿದ್ದ ದೂರಿನ ಪ್ರತಿ, ಮತ್ತು ದೋಷಾರೋಪಣೆ ಪಟ್ಟಿಯ ಪ್ರತಿ. ( ಒಟ್ಟು 13 ಹಾಳೆಗಳು).

ನಿ.ಡಿ.13 :- ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 1 ರವರು (ಚಾ.ಸಾ.5) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.14 :- ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 3 ರವರು (ಚಾ.ಸಾ.4) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.15 :- ದಿ: 27.2.2018ರ ಕರ್ನಾಟಕ ಸರ್ಕಾರದ ಅಧಿಸೂಚನೆಯ ಪ್ರತಿ. (4 ಹಾಳೆಗಳು).

ನಿ.ಡಿ.16 :- ವಿಶೇಷ ಸಿಸಿ ನಂ. 345/2014 ರ ಪ್ರಕರಣದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಂತೆ ಸರ್ಕಾರದ ಗೃಹ ಇಲಾಖೆಯು ನಿರ್ಧರಿಸಿ ಅಪರ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಬರೆದಿದ್ದ ದಿ: 31.1.2020 ರ ಪತ್ರದ ಪ್ರತಿ.

8) ಆ.ಸ.ನೌ.ರವರ ಪರ ಸಾಕ್ಷಿ ವಿಚಾರಣೆ ಮುಕ್ತಾಯವಾದ ನಂತರ ಉಭಯತ್ರರ ವಾದವಿವಾದವನ್ನು ಕೇಳಲಾಯಿತು. ಇದನ್ನು ಪರಿಶೀಲಿಸಿ ದೋಷಾರೋಪಣೆಯ ಆಧಾರದ ಮೇಲೆ ಕೆಳಕಂಡ ಅಂಶಗಳನ್ನು ಅವಗಾಹನೆಗೆ ತೆಗೆದುಕೊಳ್ಳಲಾಗಿದೆ.

(i) ಆ.ಸ.ನೌ.ರವರು ರೂ.10,00,000/-ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ನಂತರ ಕಡಿಮೆ ಮಾಡಿ ರೂ.6,00,000/- ಗಳನ್ನು ಹಾಗೂ ರೂ.1,00,000/-ಗಳನ್ನು ಒಟ್ಟು ರೂ.7,00,000/-ಗಳ ಲಂಚದ ಹಣವನ್ನು ಪ್ರಾಸಾ.1- ದೂರುದಾರರಿಂದ ದಿ: 22.4.2014 ರಂದು ಕೇಳಿರುತ್ತಾರೆಂದು ಶಿಸ್ತು ಪ್ರಾಧಿಕಾರವು ರುಜುವಾತು ಪಡಿಸಿರುತ್ತದೆಯೇ ?

(ii) ಆ.ಸ.ನೌ.ರವರು ರೂ.7,00,000-00 ಲಂಚದ ಹಣವನ್ನು ಪ್ರಾಸಾ.1-ದೂರುದಾರರಿಂದ ದಿ:25.4.2014 ರಂದು ಪಡೆದುಕೊಂಡಿದ್ದಾರೆಂದು ಶಿಸ್ತುಪ್ರಾಧಿಕಾರವು ರುಜುವಾತು ಪಡಿಸಿರುತ್ತದೆಯೇ?

9) ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಿರುವ ಸಾಕ್ಷ್ಯ, ಆ.ಸ.ನೌ.ರವರ ಪರವಾದ ಸಾಕ್ಷ್ಯವನ್ನು, ದಾಖಲೆಗಳನ್ನು ಪರಿಶೀಲಿಸಿದ್ದು, ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರಣಗಳಿಗಾಗಿ ಅಂಶ-1 ಮತ್ತು 2ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಕಾರಣಗಳು**

10) **ಅಂಶ-1 ಮತ್ತು ಅಂಶ-2** :

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರು ದಿ: 25.4.2014 ರಂದು ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇಲ್ಲಿನ ಪೊಲೀಸ್ ಉಪಾಧೀಕ್ಷರಿಗೆ ದೂರು ನೀಡಿದ್ದು ಈ ದೂರನ್ನು ಠಾಣಾ ಮೊಕದ್ದಮೆ ಸಂಖ್ಯೆ: 16/2014 ರಲ್ಲಿ ಭ್ರಷ್ಟಾಚಾರ ನಿಷೇಧ ಕಾಯಿದೆ ಕಲಂ 7 ರಡಿಯಲ್ಲಿ ದಾಖಲು ಮಾಡಿಕೊಂಡಿರುವುದು ಕಂಡುಬರುತ್ತದೆ. ಈ ದೂರಿನ ದೂರುದಾರರು ತಮಗೆ ಪರಿಚಯವಿದ್ದ ಶ್ರೀಮತಿ ಪಾರ್ವತಮ್ಮ ಇವರಿಗೆ ಉಲ್ಲಾಳು ಗ್ರಾಮದ ಸರ್ವೆ ನಂ. 163/6 ಹಾಗೂ 118/1 ರಲ್ಲಿ 25 ಗುಂಟೆ ಜಮೀನು ಇದ್ದು ಇದನ್ನು ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣಕ್ಕಾಗಿ 2000-02ರಲ್ಲಿ ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆಂದು ಇದಕ್ಕೆ ಪ್ರೋತ್ಸಾಹದಾಯಕ ಯೋಜನೆಯನ್ವಯ 30 x 40 ಅಡಿ ನಿವೇಶನಕ್ಕೆ ಅರ್ಹರಿದ್ದಾರೆಂದು ಹಾಗೂ ಅದೇ ರೀತಿ ಬೆಂಗಳೂರು ಉತ್ತರ ತಾಲ್ಲೂಕು ವಳಗೇರಿ ಹಳ್ಳಿ ಗ್ರಾಮದ ಸರ್ವೆನಂ. 24/13 ರಲ್ಲಿ ನಾಗೇಂದ್ರ ಅವರಿಗೆ ಸೇರಿದ 4½ ಗುಂಟೆ ಜಮೀನನ್ನು ಭೂ ಸ್ವಾಧೀನವಿಲ್ಲದೇ ಈ ಜಾಗವನ್ನು ಬಿ.ಡಿ.ಎ ರವರು 2002 ರಲ್ಲಿ ಉಪಯೋಗಿಸಿಕೊಂಡಿರುತ್ತಾರೆಂದು, ಇದಕ್ಕೆ ಕಾನೂನು ಪ್ರಕಾರ ಪರಿಹಾರ ನೀಡಿರುವುದಿಲ್ಲವೆಂದು ಹಾಗೂ ಈ ವಿಸ್ತೀರ್ಣದ ಶೇ 50% ರಷ್ಟು ಅಂದರೆ 2450 ಅಡಿ ಜಾಗವನ್ನು ನಾಗೇಂದ್ರರವರಿಗೆ ಉಚಿತವಾಗಿ ನೀಡಬೇಕಾಗಿರುತ್ತದೆಂದು, ಈ ಬಗ್ಗೆ 2008 ರಲ್ಲಿ ಅರ್ಜಿ ಸಲ್ಲಿಸಿದ್ದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಲವಾರು ಬಾರಿ ತಮ್ಮನ್ನು ಕಛೇರಿಗೆ ಸುತ್ತಾಡಿಸುತ್ತಿದ್ದಾರೆಂದು ಹೇಳಿ ಇದರನ್ವಯ ದೂರುದಾರರ

ಸಹಾಯ ಕೋರಿದ್ದು , ಅವರುಗಳ ಅಧಿಕಾರ ಪತ್ರವನ್ನು ಅಂದರೆ ನಾಗೇಂದ್ರ ರವರು 16.1.2014 ರಂದು ಹಾಗೂ ಪಾರ್ವತಮ್ಮ ರವರು 17.1.2014 ರಂದು ತಮಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆಂದು ದೂರುದಾರರು ತಮ್ಮ ದೂರಿನಲ್ಲಿ ಹೇಳಿರುತ್ತಾರೆ ಹಾಗೂ ತಾವು ಇವರುಗಳ ಕಡತ ಬಗ್ಗೆ ಸಾಕಷ್ಟು ಸಲ ಬಿ.ಡಿ.ಎ. ಕಛೇರಿಯಲ್ಲಿ ವಿಚಾರಿಸಿದ್ದು ಇವರುಗಳ ಕಡತವು ಅಂದರೆ ನಾಗೇಂದ್ರರವರ ಕಡತವು 2.4.2014 ರಂದು ಹಾಗೂ ಪಾರ್ವತಮ್ಮರವರ ಕಡತವು ದಿ:4.4.2014 ರಂದು ಆ.ಸ.ನೌರವರ ಬಳಿ ಬಂದಿರುತ್ತದೆಂದು ಈ ಕಡತವು ಒಂದು ವಾರದಲ್ಲಿ ವಿಲೇವಾರಿಯಾಗಬೇಕಾಗಿತ್ತೆಂದು ಆದರೆ ವಿಲೇವಾರಿಯಾಗಿರುವುದಿಲ್ಲವೆಂದು ನಮೂದಿಸಿರುತ್ತಾರೆ. ನಂತರ ತಾವು 22.4.2014 ರಂದು ಈ ಕಡತಗಳ ಬಗ್ಗೆ ಕೇಳಲು ಆ.ಸ.ನೌ.ರವರ ಬಳಿ ಹೋಗಿ ವಿಚಾರಿಸಿದ್ದು ನಾಗೇಂದ್ರರವರ ಕಡತವನ್ನು ಮುಂದಕ್ಕೆ ಕಳುಹಿಸಲು ರೂ.10,00,000/- ರೂಗಳ ಲಂಚದ ಹಣವನ್ನು ಬೇಡಿಕೆ ಇಟ್ಟಿದ್ದು ತಾವು ಅಷ್ಟೊಂದು ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದ್ದು, ಅದಕ್ಕೆ 8 ಲಕ್ಷ ರೂಗಳೆಂದು ಮೆಲ್ಲಗೆ ಕೇಳಿದ್ದು, ಅದಕ್ಕೆ ಅವರು ಅಷ್ಟು ಆಗುವುದಿಲ್ಲವೆಂದು ಹೇಳಿದಾಗ 6 ಲಕ್ಷ ರೂ ಕೊಡಲು ಒಪ್ಪಿರುತ್ತೇನೆ ಎಂದು ಹಾಗೂ ಪಾರ್ವತಮ್ಮನವರ ಕಡತಕ್ಕೆ ರೂ.1 ಲಕ್ಷಕ್ಕೆ ಒಪ್ಪಿರುತ್ತಾರೆಂದು ಒಟ್ಟು ರೂ.7.00 ಲಕ್ಷಗಳನ್ನು ಕೊಟ್ಟರೆ ವಿಲೇಮಾಡುವುದಾಗಿ ಹೇಳಿ ಕಡತಗಳನ್ನು ಅವರ ಬಳಿಯೇ ಇಟ್ಟುಕೊಂಡಿರುತ್ತಾರೆಂದು ತಮ್ಮ ದೂರಿನಲ್ಲಿ ನಮೂದಿಸಿರುತ್ತಾರೆ. ದೂರುದಾರರು ಮುಂದುವರೆದು ತಮ್ಮ ದೂರಿನಲ್ಲಿ ತನ್ನ ಮತ್ತು ಶ್ರೀಮತಿ ರಾಜಮ್ಮರವರ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರಿಕಾರ್ಡ್ ಮಾಡಿಕೊಂಡಿರುತ್ತೇನೆಂದು ನಮೂದಿಸಿರುತ್ತಾರೆ. ತಮಗೆ ಹಾಗೂ ಶ್ರೀಮತಿ ಪಾರ್ವತಮ್ಮ ಹಾಗೂ ನಾಗೇಂದ್ರರವರಿಗೆ ಲಂಚ ನೀಡಲು ಇಷ್ಟವಿಲ್ಲದ್ದರಿಂದ ಈ ದೂರನ್ನು ಸಲ್ಲಿಸುತ್ತಿದ್ದೇವೆಂದು ಹಾಗೂ ಮೊಬೈಲ್‌ನಲ್ಲಿ ರಿಕಾರ್ಡ ಮಾಡಿಕೊಂಡಿದ್ದ ಸಂಭಾಷಣೆಯ ಸಿ.ಡಿ.ಯನ್ನು ಹಾಜರುಪಡಿಸಿರುತ್ತೇನೆಂದು ತಮ್ಮ ದೂರಿನಲ್ಲಿ ನಮೂದಿಸಿರುವುದು ಹಾಗೂ ಅಧಿಕಾರ ಪತ್ರವನ್ನು ಸಹ ಹಾಜರುಪಡಿಸಿರುತ್ತೇನೆಂದು ನಮೂದಿಸಿರುವುದು ಕಂಡುಬರುತ್ತದೆ.

11) ಈ ದೂರಿಗೆ ಸಂಬಂಧಿಸಿದಂತೆ ದೂರುದಾರರು ತಮ್ಮ ಸಾಕ್ಷ್ಯದಲ್ಲಿ ಪಾರ್ವತಮ್ಮ ಮತ್ತು ನಾಗೇಂದ್ರ ರವರ ಜಮೀನುಗಳ ವಿಷಯಕ್ಕೆ ಅಂದರೆ ನಿವೇಶನದ ವಿಷಯಕ್ಕೆ ಸಂಬಂಧಿಸಿದಂತೆ ಬಿಡಿಎ ಯಿಂದ ಕ್ರಮ ತೆಗೆದುಕೊಳ್ಳುವಂತೆ ತಮಗೆ ಪೂರ್ಣವಾಗಿ ವಹಿಸಿದ್ದರೆಂದು ಸದರಿ ಅಧಿಕಾರ ಪತ್ರವನ್ನು ನಿ.ಪಿ.2 ಮತ್ತು 3 ಎಂದು

ಗುರುತಿಸಿಕೊಂಡಿರುತ್ತಾರೆ. ಹಾಗೂ ಇವರು ತಮ್ಮ ಸಾಕ್ಷ್ಯದಲ್ಲಿ ತಾವು ಈ ವಿಷಯಕ್ಕೆ ಸಂಬಂಧಿಸಿದಂತೆ ಬಿಡಿಎ ಕಚೇರಿಗೆ ಹೋಗಿದ್ದಾಗ, ಆಪಾದಿತರಾದ ಶ್ರೀಮತಿ ರಾಜಮ್ಮ ಚೌಡರೆಡ್ಡಿ, ಬಿಡಿಎ ಕಾರ್ಯದರ್ಶಿ ಇವರ ಹತ್ತಿರ 2014ರ ಏಪ್ರಿಲ್ ಮೊದಲ ವಾರದಲ್ಲಿ ಪಾರ್ವತಮ್ಮ ಮತ್ತು ನಾಗೇಂದ್ರ ಇವರಿಗೆ ಸಂಬಂಧಿಸಿದ ಕಡತಗಳು ಬಂದಿದ್ದವೆಂದು ಹೇಳಿರುತ್ತಾರೆ. ಹಾಗೂ ಸದರಿ ಬಿಡಿಎನಲ್ಲಿ ಹಣ ಕೊಡದೆ ಕೆಲಸ ಆಗುವುದಿಲ್ಲವೆಂದು ಹೇಳಿದ್ದರಿಂದ ಹಾಗೂ ಶ್ರೀನಿವಾಸ್ ಎಂಬುವವರ ಪರಿಚಯ ಸಹ ಆಗಿತ್ತೆಂದು ಹೇಳಿರುತ್ತಾರೆ. ತಾನು ಈ ದೂರು ಸಲ್ಲಿಸಿದಕ್ಕೆ 4 ದಿನ ಮುಂಚಿತವಾಗಿ ಆಪಾದಿತರನ್ನು ಖುದ್ದಾಗಿ ಭೇಟಿ ಮಾಡಿದೆನೆಂದು ಆಗ ಶ್ರೀನಿವಾಸ್ ಸಹ ಬಂದಿದ್ದರೆಂದು ಈ ಕಡತ ವಿಷಯಕ್ಕೆ ಶ್ರೀನಿವಾಸ್ ಸಹ ಮಾತಾನಾಡಿದ್ದು, ಆಗ ಆ.ಸ.ನೌ ಇವರು ರೂ.6.00 ಲಕ್ಷಗಳು ಎಂದು ಹೇಳಿದ್ದು , ಇದನ್ನು ತಾನು ಕೇಳಿಸಿಕೊಂಡೆನೆಂದು ನುಡಿದಿರುತ್ತಾರೆ. ಆಗ ಶ್ರೀನಿವಾಸ್ ರೂ.7.00 ಲಕ್ಷಗಳು ಎಂದು ಆ.ಸ.ನೌ.ರವರು ತಿಳಿಸಿದ್ದರೆಂದು ಹೇಳಿದ್ದು, ಆಗ ಆ.ಸ.ನೌ. ರವರು 6.00 ಲಕ್ಷಗಳು ಎಂದು ಹೇಳಿದರು ಎಂದು ತಾನು ಶ್ರೀನಿವಾಸ್‌ಗೆ ಹೇಳಿದೆನೆಂದು ಆಗ ಆ.ಸ.ನೌ.ರವರ ಎದುರಿಗೆ 6.00 ಲಕ್ಷಗಳು ಹೇಳಿದರಲ್ಲಾ ಎಂದು ಹೇಳಲಾಗಿ ಸದರಿ ಶ್ರೀನಿವಾಸ್ 6.00 ಲಕ್ಷಗಳು ಅಲ್ಲ 7.00 ಲಕ್ಷರೂಪಾಯಿಗಳು ಎಂದು ನನಗೆ ಆಪಾದಿತೆಯ ಎದುರು ತಿಳಿಸಿದರು ಎಂದು ಹೇಳಿರುತ್ತಾರೆ.

12) ದೂರುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ.ಸ.ನೌ.ರವರಿಗೆ ಈ ರೀತಿ ಹಣ ಕೊಡಲು ತಮಗೆ ಇಷ್ಟವಿಲ್ಲದ ಕಾರಣ ತಾನು ಆ.ಸ.ನೌ.ರವರು ಹಣ ಕೇಳುತ್ತಿರುವ ಸಂಗತಿಯನ್ನು ತಾನು ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ತಿಳಿಸಿದೆನೆಂದು ಅವರು ಸಹ ಹಣ ಕೊಡಲು ಇಷ್ಟವಿಲ್ಲದ ಕಾರಣ ದೂರು ಕೊಡಲು ತಿಳಿಸಿದರೆಂದು ನುಡಿದಿರುತ್ತಾರೆ. ಮುಂದುವರೆದು ಹೇಳುತ್ತಾ , ತಾನು ದಿ: 25.04.2014ರಂದು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆಂದು ಹಾಗೂ ದೂರಿಗೆ ಸಂಬಂಧಪಟ್ಟಂತೆ ತನ್ನ ಮತ್ತು ಆಪಾದಿತ ನಡುವೆ ನಡೆದ ಸಂಭಾಷಣೆಯನ್ನು ತನ್ನ ಮೊಬೈಲು ಫೋನಿನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದು ಇದರ ಸಿಡಿಯನ್ನು ಸಹ ತಾನು ತನ್ನ ದೂರಿನ ಜೊತೆ ಲಗತ್ತಿಸಿ ಕೊಟ್ಟಿರುತ್ತೇನೆಂದು ಹಾಗೂ ಪಾರ್ವತಮ್ಮ ಮತ್ತು ನಾಗೇಂದ್ರಪ್ಪ ತನಗೆ ನೀಡಿದ್ದ ಅಧಿಕಾರ ಪತ್ರವನ್ನು ಸಹ ದೂರಿನ ಜೊತೆ ಕೊಟ್ಟಿರುತ್ತೇನೆಂದು ನುಡಿದಿರುತ್ತಾರೆ ಹಾಗೂ ಈ ದೂರನ್ನು ನಿ.ಪಿ.1

ಎಂದು ತಮ್ಮ ಸಹಿಯನ್ನು ನಿ.ಪಿ.1–ಎ ಎಂದು ಮತ್ತು ಅಧಿಕಾರ ಪತ್ರವನ್ನು ನಿ.ಪಿ. 2 ಮತ್ತು 3 ಎಂದು ಗುರುತಿಸಿಕೊಂಡಿರುತ್ತಾರೆ.

13) ಮುಂದುವರೆದು ಹೇಳುತ್ತಾ, ಪೊಲೀಸರು ಇಬ್ಬರು ಸರ್ಕಾರಿ ನೌಕರರನ್ನು ಠಾಣೆಗೆ ಕರೆಸಿದ್ದರು ಎಂದು ಹಾಗೂ ತಾನು ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ಕೊಡುವಾಗ ತಾನು ಮತ್ತು ಶ್ರೀನಿವಾಸ್ ರೂ.7 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದೆವೆಂದು ಇವುಗಳು ರೂ.1000/– ಮುಖಬೆಲೆಯ 700 ನೋಟುಗಳು ಆಗಿದ್ದವೆಂದು ಇವುಗಳನ್ನು ಪೊಲೀಸರ ಎದುರು ಹಾಜರುಪಡಿಸಿದಾಗ ನೋಟು ನಂಬರುಗಳನ್ನು ಮೊದಲು ಕೈ ಬರವಣಿಗೆಯಲ್ಲಿ ಬರೆದಿದ್ದು ನಂತರ ಬೆರಳಚ್ಚು ಮಾಡಿಸಿದರೆಂದು ನಂತರ ಈ ನೋಟುಗಳಿಗೆ ಪೊಲೀಸರು ಫಿನಾಪ್ತಲೀನ್ ಪುಡಿಯನ್ನು ಸವರಿದರು ಎಂದು ಇದನ್ನು 2 ಎನ್‌ವಲಪ್‌ನಲ್ಲಿ ಹಾಕಿ ಪಂಚರಾದ ಶ್ರೀನಿವಾಸ್ ಇವರ ಕೈಯಲ್ಲಿ ಕೊಟ್ಟರೆಂದು ಪಂಚರಾದ ಶ್ರೀನಿವಾಸ್ ತನಗೆ ಕೊಟ್ಟರೆಂದು ತಾನು ಇದನ್ನು ತನ್ನ ಪ್ಯಾಂಟಿನ ಜೇಬಿಗೆ ಇಟ್ಟುಕೊಂಡೆನು ಎಂದು ಹೇಳಿರುತ್ತಾರೆ. ಸದರಿ ಪಂಚರಾದ ಶ್ರೀನಿವಾಸ್‌ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದ್ದು ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆಂದು, ಪೊಲೀಸರು ತಮಗೆ ರೆಕಾರ್ಡರನ್ನು ಕೊಟ್ಟಿದ್ದು ಆಪಾದಿತರ ಕಛೇರಿಗೆ ಹೋದಾಗ ನಡೆಯುವ ಮಾತುಕತೆಯನ್ನು ಆ.ಸ.ನೌ. ಮತ್ತು ತನ್ನ ನಡುವೆ ನಡೆಯು ಮಾತುಕತೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ಹಾಗೂ ಆಪಾದಿತೆಯು ಹಣ ಕೇಳಿದಾಗ, 2 ಲಕೋಟೆಗಳಲ್ಲಿದ್ದ ಫಿನಾಪ್ತಲೀನ್ ಸವರಿದ ಹಣವನ್ನು ಅವರಿಗೆ ಕೊಡಬೇಕೆಂದು ನಂತರ ಕೈಯಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡುವಂತೆ ತನಗೆ ಪೊಲೀಸರು ತಿಳಿಸಿದ್ದರೆಂದು ಹೇಳಿರುತ್ತಾರೆ. ಈ ಬಗ್ಗೆ ಪಂಚನಾಮೆಯನ್ನು ಮಾಡಿದ್ದು ಇದನ್ನು ನಿ.ಪಿ.4 ಎಂದು ತಮ್ಮ ಸಹಿಯನ್ನು ನಿ.ಪಿ.4–ಎ ಎಂದು ಗುರುತಿಸಲಾಗಿರುತ್ತದೆಂದು ಹೇಳಿರುತ್ತಾರೆ. ತಾನು ಮತ್ತು ಪಂಚ ಶ್ರೀನಿವಾಸ್ ಪೊಲೀಸರ ವಾಹನದಲ್ಲಿ ಹಾಗೂ ಪೊಲೀಸರು ಹೋದೆವೆಂದು ಆಗ ಇನ್ನೊಬ್ಬ ಶ್ರೀನಿವಾಸ್ ಸಹ ಇದ್ದರೆಂದು ನುಡಿದಿರುತ್ತಾರೆ. ಪೊಲೀಸರು ಆಪಾದಿತೆ ಹಣ ಕೇಳಿದರೆ ಮಾತ್ರ ಹಣ ಕೊಡಬೇಕೆಂದು ತನಗೆ ತಿಳಿಸಿರುತ್ತಾರೆ.

14) ಎರಡು ಲಕೋಟೆಯಲ್ಲಿ ಈ 7.00 ಲಕ್ಷ ರೂಪಾಯಿಗಳು ಇದ್ದು ಎರಡು ಲಕೋಟೆಯ ಮೇಲೆ ಹಾಗೂ ನೋಟುಗಳ ಮೇಲೆ ಫಿನಾಪ್ತಲೀನ್ ಪೌಡರನ್ನು

ಸವರಿದ್ದರು ಹಾಗೂ ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ಪಂಚನಾಮೆಯನ್ನು ಮಾಡಿದ್ದು ಅದಕ್ಕೆ ತಾನು ಮತ್ತು ಸಾಕ್ಷಿದಾರರು ಸಹಿಯನ್ನು ಮಾಡಿರುತ್ತೇವೆಂದು, ಈ ಪಂಚನಾಮೆಯನ್ನು ಮಧ್ಯಾಹ್ನ 3 ಗಂಟೆಯಿಂದ ಸುಮಾರು 5 ಗಂಟೆಯವರೆಗೆ ಮಾಡಿರುತ್ತಾರೆಂದು, ಸಾಕ್ಷಿ ಸದರಿ ಪಂಚನಾಮೆಯನ್ನು ಗುರ್ತಿಸಿದ್ದು, ಇದನ್ನು ನಿ.ಪಿ.4 ಎಂದು ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿ.ಪಿ.4–ಎ ಎಂದು ಗುರ್ತಿಸಿಕೊಂಡರೆಂದು, ಪೊಲೀಸರು ತನ್ನ ಜೊತೆ ಪಂಚ ಶ್ರೀನಿವಾಸ್‌ರವರನ್ನು ಹೋಗುವಂತೆ ತಿಳಿಸಿದ್ದು ತಾನು ಮತ್ತು ಪಂಚ ಶ್ರೀನಿವಾಸ್ ಹಾಗೂ ಪೊಲೀಸರು ವಾಹನದಲ್ಲಿ ಬಿಡಿಎ ಕಛೇರಿ ಬಳಿ ಹೋದೆವೆಂದು ತಾವು ಬಿಡಿಎಯ ಕಛೇರಿಗೆ ಹೋದಾಗ ಸಂಜೆ 5–15 ಅಥವಾ 5–30 ಆಗಿತ್ತೆಂದು ತಾವು ಬಿಡಿಎ ಕಛೇರಿಯ ಬಳಿ ಹೋದಾಗ ಪೊಲೀಸರು ಆಪಾದಿತೆ ಹಣ ಕೇಳಿದರೆ ಮಾತ್ರ ಹಣ ಕೊಡಬೇಕೆಂದು ತನಗೆ ತಿಳಿಸಿದರು ಎಂದು ನುಡಿದಿರುತ್ತಾರೆ.

15) ತಾನು ಮತ್ತು ಶ್ರೀನಿವಾಸ್ ಬಿಡಿಎ ಕಛೇರಿಯ ಒಳಗಡೆ ಹೋಗಿದ್ದು ಪಂಚ ಶ್ರೀನಿವಾಸ್ ನನ್ನ ಹಿಂದೆ ಬರುತ್ತಿದ್ದು, ನಂತರ ತಾನು ಮತ್ತು ತನ್ನ ಪರಿಚಿತ ಮೇಲೆ ಹೇಳಿದ ಶ್ರೀನಿವಾಸ್ @ ಶೀನ ಆಪಾದಿತೆಯ ಕೊಠಡಿಯ ಬಳಿ ಆಪಾದಿತೆಯನ್ನು ಭೇಟಿ ಮಾಡಲು ಒಳಗಡೆ ಹೋದಾಗ ತನ್ನ ಮುಖ ನೋಡಿ ಕೆಲಸ ಆಗಿದೆ ಎಂದು ಹೇಳಿದರೆಂದು ಒಂದು ಕಡತ ನೋಡಿ ಸಹಿ ಮಾಡಿದ್ದು, ಇನ್ನೊಂದು ಕಡತಕ್ಕೆ ತಾವೇ ಸರಿಯಾಗಿ ಬರೆದು ತನ್ನ ಎದುರು ಸಹಿ ಮಾಡಿ ಶಿಫಾರಸ್ಸು ಮಾಡಿರುತ್ತೇನೆಂದು ಹೇಳಿದರೆಂದು ಹಾಗೂ ದಿನಾಂಕ ನಮೂದಿಸಿ ಕಳುಹಿಸಿದರೆಂದು, ಆಗ ತಾನು ಹಣವನ್ನು ಶ್ರೀನಿವಾಸ್ ಕೈಯಲ್ಲಿ ಕೊಟ್ಟಿದ್ದು, ಆಪಾದಿತೆಗೆ ಶ್ರೀನಿವಾಸ್ ಹಣ ನೀಡುತ್ತೇನೆಂದು ಟೇಬಲ್ ಪಕ್ಕ ಹೋಗಿದ್ದು ನಂತರ ಹಣ ನೀಡಿದ್ದೇನೆಂದು ಶ್ರೀನಿವಾಸ್ ಹೇಳಿದರು. ಆಗ ತಾನು ತನ್ನ ಮುಖವನ್ನು ಒರೆಸಿಕೊಂಡು ಪೊಲೀಸರಿಗೆ ಸನ್ನೆಯನ್ನು ಮಾಡಿದೆನೆಂದು, ತಕ್ಷಣವೇ ಪೊಲೀಸರು ಆಪಾದಿತೆಯ ಕೊಠಡಿಗೆ ಬಂದು ತಮ್ಮ ಗುರುತಿನ ಚೀಟಿಯನ್ನು ಆಪಾದಿತೆಗೆ ತೋರಿಸಿದರು ಎಂದು ನುಡಿದಿರುತ್ತಾರೆ.

16) ಪೊಲೀಸರು ತನ್ನನ್ನು ಈ ಬಗ್ಗೆ ವಿಚಾರಿಸಿದ್ದು ತಾನು ಮತ್ತು ಶ್ರೀನಿವಾಸ್ ಆಪಾದಿತೆಯವರ ಕೊಠಡಿಗೆ ಹೋಗಿದ್ದು, ಹಣವನ್ನು ಶ್ರೀನಿವಾಸ್ ಆಪಾದಿತೆಯವರ ಡ್ರಾಯರ್‌ಗೆ ಇಟ್ಟಿದ್ದನ್ನು ಹೇಳಿದರೆಂದು ನುಡಿದಿರುತ್ತಾರೆ.

17) ಪೋಲಿಸರು ಹಣದ ಬಗ್ಗೆ ಕೇಳಿದ್ದು ತಾನು ಮತ್ತು ಶ್ರೀನಿವಾಸ್ @ ಶೀನ ಹಣವನ್ನು ಆಪಾದಿತರ ಡ್ರಾಯರಿನಲ್ಲಿ ಇರುವ ಬಗ್ಗೆ ಶ್ರೀನಿವಾಸ್ @ ಶೀನ ತೋರಿಸಿದರು. ಪೊಲೀಸರ ನಿರ್ದೇಶನದ ಮೇರೆಗೆ ಈ ಹಣವನ್ನು ಮಹಿಳಾ ಪಂಚರಾದ ಶ್ರೀಮತಿ ಪ್ರಮೀಳರವರು ಆಪಾದಿತೆಯ ಟೇಬಲ್ ಡ್ರಾಯರಿನಿಂದ ತೆಗೆದಿರುತ್ತಾರೆಂದು, ನೋಟುಗಳ ನಂಬರುಗಳನ್ನು ಈ ಹಿಂದೆ ಬರೆದಿದ್ದ ನೋಟು ನಂಬರುಗಳಿಗೆ ತಾಳೆ ಮಾಡಿ ನೋಡಿದರೆಂದು ಅದು ತಾಳೆಯಾಗುತ್ತಿತ್ತೆಂದು ನಂತರ ಈ ಹಣವನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಪೊಲೀಸರು ನೀಡಿದ್ದ ರಿಕಾರ್ಡರಿಗೆ ಆಪಾದಿತೆ ಮತ್ತು ತಮ್ಮ ನಡುವೆ ನಡೆದ ಸಂಭಾಷಣೆಯನ್ನು ರಿಕಾರ್ಡ ಮಾಡಿದ್ದೆನೆಂದು ತಾನು ಪೊಲೀಸರಿಗೆ ಇದನ್ನು ಕೊಟ್ಟೆನೆಂದು ಮತ್ತೇ ಈ ಪ್ರಕರಣಕ್ಕೆ ಸಂಬಂಧಿಸಿದ ಎರಡು ಕಡತಗಳನ್ನು ಆಪಾದಿತರ ಕೊಠಡಿಯಲ್ಲಿ ಆಯುಕ್ತರಿಗೆ ಕಳುಹಿಸಲು ಇಟ್ಟಿದ್ದರೆಂದು ಅದನ್ನು ಸಹ ಪೊಲೀಸ್‌ರವರು ಆಪಾದಿತೆಯ ಸಹಾಯಕರಿಂದ ಈ ಕಡತವನ್ನು ತೆಗೆದುಕೊಂಡಿದ್ದರು ಎಂದು ನುಡಿದಿರುತ್ತಾರೆ.

18) ಬಿಡಿಎ ಆಯುಕ್ತರು ಅಲ್ಲಿಗೆ ಬಂದಿರುತ್ತಾರೆಂದು ಈ ದೂರಿನ ಬಗ್ಗೆ ಲೋಕಾಯುಕ್ತ ಪೊಲೀಸರು ಆಯುಕ್ತರ ಜೊತೆ ಮಾತನಾಡಿರುತ್ತಾರೆಂದು ಹಿರಿಯ ಅಧಿಕಾರಿಗಳು ಅಲ್ಲಿ ಇದ್ದುದರಿಂದ ತಾವು ಅಲ್ಲೇ ಪಕ್ಕದಲ್ಲಿಯೇ ಸಿಬ್ಬಂದಿಯವರ ಕೊಠಡಿಯಲ್ಲಿ ಇದ್ದೆವು ಎಂದು ಈ ಬಗ್ಗೆ ಬರವಣಿಗೆ ಮಾಡಿದ್ದು , ಇದು ಮುಗಿದಾಗ ರಾತ್ರಿ ಸುಮಾರು 2.00 ಗಂಟೆ ಆಗಿತ್ತೆಂದು, ಫಿರ್ಯಾದಿಯು ಸದರಿ ಮಹಜರನ್ನು ಗುರುತಿಸಿದ್ದು ಇದನ್ನು **ನಿ.ಪಿ.5** ಎಂದು ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು **ನಿ.ಪಿ.5ಎ** ಎಂದು ಗುರುತಿಸಲಾಯಿತು. ಆಪಾದಿತೆಯನ್ನು ಈ ಬಗ್ಗೆ ಪೊಲೀಸರು ಕೇಳಿದ್ದು, ಅವರ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ.

19) ನೆರಳು ಸಾಕ್ಷಿ ಶ್ರೀನಿವಾಸ್ ಇವರನ್ನು ಪ್ರಾಸಾ-2 ಎಂದು ವಿಚಾರಣೆ ಮಾಡಿದ್ದು ದಿ: 25.4.2014 ರಂದು ತಮ್ಮ ಮೇಲಾಧಿಕಾರಿಯವರು ತಮ್ಮನ್ನು ಲೋಕಾಯುಕ್ತ ಡಿವೈಎಸ್ಪಿ ನಾರಾಯಣ್ ಇವರನ್ನು ಭೇಟಿ ಮಾಡುವಂತೆ ತಿಳಿಸಿದ್ದು, ತಾವು ಪ್ರಕರಣ ಸಂಖ್ಯೆ: 16/2014 ಕ್ಕೆ ಸಂಬಂಧಿಸಿದಂತೆ ಡಿವೈಎಸ್ಪಿ ನಾರಾಯಣ್ ಭೇಟಿ ಮಾಡಿದೆನೆಂದು ಇನ್ನೊಬ್ಬ ಸಾಕ್ಷಿದಾರರಾದ ಶ್ರೀಮತಿ ಪ್ರಮೀಳ ಇವರು ಬಂದಿದ್ದರೆಂದು ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮನ್ನು ಸಾಕ್ಷಿಯಾಗಿ ಭಾಗವಹಿಸಲು ತಿಳಿಸಿದ್ದು, ತಾವು

ಒಪ್ಪಿಕೊಂಡಿರುತ್ತೇವೆ ಎಂದು ಹೇಳಿರುತ್ತಾರೆ. ಸಾಕ್ಷಿಯು ಮುಂದುವರೆದು ಹೇಳುತ್ತಾ, ಪ್ರಕರಣದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರೆಂದು ಹಾಗೂ ದೂರಿನ ಪ್ರತಿಯನ್ನು ತಮಗೆ ಓದಲಿಕ್ಕೆ ಕೊಟ್ಟಿದ್ದರೆಂದು ತಾವು ಇದನ್ನು ಓದಿನೋಡಿದೆವೆಂದು ಇದರಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ನಾಗೇಂದ್ರ ಇವರ ಜಮೀನು ಬಿಡಿಎ ರವರು ಸ್ವಾಧೀನಪಡಿಸಿಕೊಂಡಿದ್ದು, ಇವರುಗಳ ಕಡತಗಳು ಬಿಡಿಎನಲ್ಲಿ ಇತ್ತೆಂದು ಈ ಕಡತಗಳ ಬಗ್ಗೆ ವಿಚಾರಿಸಲು ಅಧಿಕಾರ ಪತ್ರವನ್ನು ಬಸವರಾಜುರವರಿಗೆ ಕೊಟ್ಟಿದ್ದರೆಂದು ಅವರು ಈ ಬಗ್ಗೆ ವಿಚಾರಿಸಿದಾಗ ಈ ಕಡತಗಳು ಬಿಡಿಎ ಕಾರ್ಯದರ್ಶಿಯವರಲ್ಲಿ ಇತ್ತೆಂದು ಸದರಿ ಬಸವರಾಜುರವರು ಬಿಡಿಎ ಕಾರ್ಯದರ್ಶಿಯವರನ್ನು ಈ ವಿಷಯವಾಗಿ ಭೇಟಿ ಮಾಡಿದ್ದು, ಆಗ ಆಪಾದಿತೆ ನಾಗೇಂದ್ರರವರ ಕಡತಕ್ಕೆ ಅಂದರೆ ಅದನ್ನು ಬರೆದು ಮಂಡಿಸಲು 10.00 ಲಕ್ಷರೂಪಾಯಿಗಳನ್ನು ಕೇಳಿದ್ದು ನಂತರ ಮಾತುಕತೆಯಲ್ಲಿ ಆಪಾದಿತೆಯು 6.00 ಲಕ್ಷರೂಪಾಯಿಗಳಿಗೆ ಒಪ್ಪಿಕೊಂಡರೆಂದು ಪಾರ್ವತಮ್ಮನವರ ಕಡತಕ್ಕೆ 1.00 ಲಕ್ಷರೂಪಾಯಿ ಕೊಡುವಂತೆ ಒಪ್ಪಿಕೊಂಡಿದ್ದು, ನಂತರ ಬಸವರಾಜುರವರು ಈ ವಿಷಯವನ್ನು ನಾಗೇಂದ್ರ ಮತ್ತು ಪಾರ್ವತಮ್ಮರವರಿಗೆ ತಿಳಿಸಿರುತ್ತಾರೆಂದು, ಅವರಿಬ್ಬರೂ ತಮಗೆ ಈ ರೀತಿ ಹಣ ಕೊಡಲು ಇಷ್ಟವಿಲ್ಲವೆಂದು ಬಸವರಾಜುರವರಿಗೆ ಹೇಳಿ, ಹೇಗಾದರೂ ಕೆಲಸ ಮಾಡಿಕೊಡಿ ಎಂದು ಅವರಿಬ್ಬರೂ ತಿಳಿಸಿದರೆಂದು ದೂರಿನಲ್ಲಿ ನಮೂದಾಗಿತ್ತೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಮುಂದುವರೆದು ಹೇಳುತ್ತಾ, ಸದರಿ ಬಸವರಾಜುರವರು ಈ ಬಗ್ಗೆ ಲೋಕಾಯುಕ್ತ ಪೋಲಿಸರಿಗೆ ದೂರು ಕೊಟ್ಟಿದ್ದು ಆಗ ತಮ್ಮ ಮೊಬೈಲಿನಲ್ಲಿ ಆಪಾದಿತೆ ಮತ್ತು ದೂರುದಾರ ಬಸವರಾಜುರವರ ನಡುವೆ ನಡೆದ ಸಂಭಾಷಣೆಯನ್ನು ದಾಖಲಿಸಿಕೊಂಡಿದ್ದು ಇದನ್ನು ಸಹ ಪೊಲೀಸರಿಗೆ ಅವರು ಕೊಟ್ಟಿರುತ್ತಾರೆಂದು, ಲೋಕಾಯುಕ್ತ ಪೊಲೀಸರು ಬಸವರಾಜುರವರು ನೀಡಿದ ಈ ದೂರಿನ ಮೇರೆಗೆ ಪ್ರಕರಣವನ್ನು ಆಪಾದಿತೆ ವಿರುದ್ಧ ದಾಖಲಿಸಿಕೊಂಡಿರುತ್ತಾರೆಂದು, ಈ ದೂರಿನಲ್ಲಿ ಈ ಎಲ್ಲಾ ಅಂಶಗಳು ನಮೂದಾಗಿದ್ದವು ಎಂದು ನುಡಿದಿರುತ್ತಾರೆ.

20) ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ, ಲೋಕಾಯುಕ್ತ ಡಿವೈಎಸ್‌ಪಿಯವರು ಬಸವರಾಜುರನ್ನು ಉದ್ದೇಶಿಸಿ ಆಪಾದಿತೆಗೆ ನೀಡಲು ಹಣ ತಂದಿದ್ದೀರಾ ಎಂದು ಕೇಳಲಾಗಿ ಬಸವರಾಜುರವರು 7 ಲಕ್ಷ ರೂಪಾಯಿಗಳನ್ನು ಹಾಜರುಪಡಿಸಿದರೆಂದು, ಇವುಗಳಲ್ಲಿ 1 ಸಾವಿರ ರೂಪಾಯಿಯ 700

ನೋಟುಗಳಿದ್ದವೆಂದು ಈ ನೋಟುಗಳ ಸಂಖ್ಯೆಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ ನೀಡುವಂತೆ ಅವರ ಸಿಬ್ಬಂದಿಯವರಿಗೆ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ದಾಖಲೆ ಮಾಡಿದ್ದು ಇದನ್ನು **ನಿ.ಪಿ.7** ಎಂದು ಗುರುತಿಸಿಕೊಂಡಿರುತ್ತಾರೆ. ಹಾಗೂ ಸಾಕ್ಷಿಯ ಕೊನೆ ಪುಟದ ಸಹಿಯನ್ನು ನಿ.ಪಿ.**7–ಎ** ಎಂದು ಗುರುತಿಸಿಕೊಂಡಿರುತ್ತಾರೆ.

21) ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ, ಲೋಕಾಯುಕ್ತ ಸಿಬ್ಬಂದಿಯವರು ಫಿನಾಪ್ತಲೀನ್ ಪೌಡರನ್ನು ಈ ನೋಟುಗಳಿಗೆ ಸವರಿರುತ್ತಾರೆಂದು ನೋಟುಗಳನ್ನು ಎರಡು ಲಕೋಟೆಗಳಿಗೆ ಹಾಕಿದ್ದು ಹಾಗೂ ಲಕೋಟೆಯ ಮೇಲ್ಭಾಗದಲ್ಲಿ ಫಿನಾಪ್ತಲೀನ್ ಪುಡಿಯನ್ನು ಸವರಿರುತ್ತಾರೆಂದು , ನೋಟುಗಳನ್ನು ತನ್ನ ಕೈಯಲ್ಲಿ ಕೊಟ್ಟಿದ್ದು ತಾನು ಅವುಗಳನ್ನು ಎರಡು ಲಕೋಟೆಯಲ್ಲಿ ಹಾಕಿರುತ್ತೇನೆಂದು ತಾನು ಬಸವರಾಜುರವರಿಗೆ ಈ ಎರಡು ಲಕೋಟೆಗಳನ್ನು ಕೊಟ್ಟಿದ್ದು ಅವರು ಅದನ್ನು ಪ್ಲಾಸ್ಟಿಕ್ ಕವರಿನಲ್ಲಿ ಇಟ್ಟುಕೊಂಡರು ಎಂದು ನುಡಿದಿರುತ್ತಾರೆ.

22) ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದ ಬಗ್ಗೆ ಹಾಗೂ ಅದನ್ನು 2 ಬಾಟಲುಗಳಲ್ಲಿ ಶೇಖರಿಸಿಟ್ಟ ಬಗ್ಗೆ ಹಾಗೂ ದ್ರಾವಣದ ಮಾದರಿಯನ್ನು ಒಂದು ಸೀಸೆಯಲ್ಲಿ ತೆಗೆದಿಟ್ಟಿರುತ್ತಾರೆಂದು ನಂತರ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಇವರ ಎರಡು ಕೈಗಳನ್ನು ಅದ್ದಿಸಿದ್ದು ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆಂದು ಹಾಗೂ . ಇದರ ಬಗ್ಗೆ ಡಿವೈಎಸ್ಪಿಯವರು ವಿವರಿಸಿ ಹೇಳಿರುತ್ತಾರೆಂದು, ಆ ದ್ರಾವಣವನ್ನು ಸಹ ಬೇರೆ ಸೀಸೆಯಲ್ಲಿ ಇಟ್ಟು ಮುದ್ರೆ ಹಾಕಿರುತ್ತಾರೆಂದು ನುಡಿದಿರುತ್ತಾರೆ.

23) ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ ನಂತರ ಬಸವರಾಜುರವರು ತಮ್ಮ ಮೊಬೈಲಿನಲ್ಲಿ ರಿಕಾರ್ಡ್ ಮಾಡಿದ್ದ ಸಂಭಾಷಣೆಯ ಸಿಡಿಯನ್ನು ಕೊಟ್ಟಿದ್ದು ಇದನ್ನು ಲ್ಯಾಪ್ ಟ್ಯಾಪ್‌ಗೆ ಹಾಕಿ ಇವರಿಗೆ ಕೇಳಿಸಿರುತ್ತಾರೆಂದು ಆ ಸಂಭಾಷಣೆಯನ್ನು ಅಂದರೆ ಆಪಾದಿತೆ ಮತ್ತು ಬಸವರಾಜುರವರ ನಡುವೆ ನಡೆದ ಸಂಭಾಷಣೆಯನ್ನು ಲಿಪೀಕರಣ ಮಾಡಿಸಿರುತ್ತಾರೆಂದು, ಇದರಲ್ಲಿ ಇನ್ನೊಂದು ಸಿಡಿಯನ್ನು ಕಾಪಿ ಮಾಡಿಕೊಂಡಿರುತ್ತಾರೆಂದು ಸದರಿ ಲಿಪಿಕರಣಕ್ಕೆ ಸಂಬಂಧಪಟ್ಟಂತೆ ತಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ, ಸಾಕ್ಷಿಯು ಗುರ್ತಿಸಿದ್ದ ದಾಖಲೆಯು ಇದು

**ನಿ.ಪಿ.8** ಎಂದು ಸಾಕ್ಷಿಯು ತನ್ನ ಸಹಿಗಳನ್ನು ಪ್ರತಿ ಪುಟದಲ್ಲೂ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ.8–ಎ ನಿ.ಪಿ.8–ಬಿ, ನಿ.ಪಿ.8–ಸಿ ಎಂದು ಗುರುತಿಸಿಕೊಂಡಿದ್ದು, ಇದನ್ನೇ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.

24) ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಲೋಕಾಯುಕ್ತ ಡಿವೈಎಸ್‌ಪಿಯವರು ದೂರುದಾರರಾದ ಬಸವರಾಜುರವನ್ನು ಉದ್ದೇಶಿಸಿ ಬಿಡಿಎ ಕಛೇರಿಗೆ ಹೋದಾಗ ಆಪಾದಿತೆ ಹಣಕ್ಕೆ ಡಿಮ್ಯಾಂಡ್ ಮಾಡಿದಾಗ ಎರಡು ಲಕೋಟೆಯಲ್ಲಿರುವ ಹಣವನ್ನು ಆಪಾದಿತೆಗೆ ನೀಡುವಂತೆ ಬಸವರಾಜುರವರಿಗೆ ತಿಳಿಸಿದ್ದು, ಆಪಾದಿತೆ ಲಕೋಟೆಯಲ್ಲಿರುವ ಹಣ ಪಡೆದುಕೊಂಡ ನಂತರ ಹೊರಗಡೆ ಬಂದು ಮುಖ ಒರೆಸಿಕೊಂಡು ಸನ್ನೆ ಮಾಡಬೇಕೆಂದು ತಿಳಿಸಿದರೆಂದು ಹಾಗೂ ನೀವು ಬಸವರಾಜುರವರ ಜೊತೆ ಹೋಗಬೇಕೆಂದು ಹೇಳಿದ್ದು, ನಂತರ ನೀವು ಆಪಾದಿತೆ ಕೊಠಡಿಯೊಳಗೆ ಹೋದರೆ ಅನುಮಾನ ಬರಬಹುದು ಎಂದು ನೀವು ಹೊರಗಡೆ ಇದ್ದು ಗಮನಿಸುವಂತೆ ತನಗೆ ತಿಳಿಸಿದರೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ಪ್ರಾಯೋಗಿಕ ಪಂಚನಾಮೆ ಮಾಡಿದ್ದು ಅದರ ಬಗ್ಗೆ ಈ ಸಾಕ್ಷಿಯು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದು, ಇದನ್ನು ನಿ.ಪಿ.4 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.4–ಬಿ ಎಂದು ಗುರುತಿಸಿಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾವುಗಳು 5 ಗಂಟೆಯ ಸಮಯದಲ್ಲಿ ಬಿಡಿಎ ಕಛೇರಿಗೆ ವಾಹನದಲ್ಲಿ ಹೊರಟೆವೆಂದು ಹಾಗೂ ಸಾಯಂಕಾಲ ಸುಮಾರು 5.30 ಗಂಟೆಗೆ ಬಿಡಿಎ ಕಛೇರಿಗೆ ತಲುಪಿರುತ್ತೇವೆಂದು ಆಗ ಡಿವೈಎಸ್‌ಪಿಯುವರು ಬಸವರಾಜುರವರಿಗೆ ಆಪಾದಿತೆ ಕೊಠಡಿಯ ಒಳಗಡೆ ಹೋಗುವುದಕ್ಕೆ ಮುಂಚಿತವಾಗಿ ವಾಯ್ಸ್ ರಿರ್ಕಾಡರನ್ನು ಆನ್ ಮಾಡಿಕೊಂಡು ಹೋಗುವಂತೆ ತಿಳಿಸಿದರೆಂದು ತಾನು ಬಸವರಾಜುರವರ ಜೊತೆ ಅಪಾದಿತೆಯ ಕೊಠಡಿಗೆ ಹೋಗಲು ಹೊರಟಿದ್ದಾಗ, ಬಸವರಾಜುರವರು ನೀವು ಕೊಠಡಿಯ ಒಳಗಡೆ ಬಂದರೆ ಆಪಾದಿತೆಗೆ ಅನುಮಾನ ಬರುತ್ತದೆಂದು ಹೇಳಿದ್ದರಿಂದ ತಾವು ಹೊರಗಡೆ ನಿಂತಿದ್ದೇವೆಂದು ಸುಮಾರು ಸಾಯಂಕಾಲ 6 ಗಂಟೆಗೆ ಬಸವರಾಜುರವರು ಆಪಾದಿತೆ ಕೊಠಡಿಯ ಒಳಗಡೆ ಹೋಗಿದ್ದು, ಸ್ವಲ್ಪ ಸಮಯದಲ್ಲೇ ಆಪಾದಿತೆಯ ಕೊಠಡಿಯ ಹೊರಗಡೆ ಶ್ರೀ ಬಸವರಾಜುರವರು ಬಂದಿದ್ದು, ತಮ್ಮ ಮುಖವನ್ನು ಕರ್ಚಿಫ್‌ನಿಂದ ಒರೆಸಿಕೊಂಡರೆಂದು ಆಗ ಲೋಕಾಯುಕ್ತ ಸಿಬ್ಬಂದಿ , ಪಂಚರಾದ ತಾವುಗಳು ಆಪಾದಿತೆಯ ಕೊಠಡಿಯ ಒಳಗಡೆ ಹೋದೆವು ಎಂದು ನುಡಿದಿರುತ್ತಾರೆ.

25) ಪ್ರಾ.ಸಾ–2ರವರು ಮುಂದುವರೆದು ಹೇಳುತ್ತಾ ಅಲ್ಲಿ ಬಿಡಿಎ ಕಾರ್ಯದರ್ಶಿ ಅಂದರೆ ಆಪಾದಿತೆಯು ಇದ್ದರೆಂದು ಚಿಕ್ಕಯ್ಯ ಎನ್ನುವವರು ಸಹ ಇದ್ದರೆಂದು ನುಡಿದಿರುತ್ತಾರೆ. ಹಾಗೂ ಡಿವೈಎಸ್‌ಪಿ, ಸಿಬ್ಬಂದಿಯವರೆಲ್ಲರೂ ಹಾಗೂ ತಾವು ಪಂಚರು ಒಳಗಡೆ ಹೋಗಿದ್ದು, ಡಿವೈಎಸ್‌ಪಿ ಯವರು ತಮ್ಮ ಪರಿಚಯವನ್ನು ಹೇಳಿ ಕಾರ್ಯದರ್ಶಿಯವರನ್ನು ಕೇಳಿದ್ದು, ಆಗ ಆಪಾದಿತೆ ತನ್ನ ಹೆಸರನ್ನು ಹೇಳಿ, ತಾನೇ ಬಿಡಿಎ ಕಾರ್ಯದರ್ಶಿ ಎಂದು ಹೇಳಿರುತ್ತಾರೆಂದು ನುಡಿದಿರುತ್ತಾರೆ.

26) **ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ, ಡಿವೈಎಸ್‌ಪಿಯವರು ತಮ್ಮ ಹೆಸರನ್ನು ಆಪಾದಿತೆಗೆ ಹೇಳಿರುತ್ತಾರೆಂದು ಆಗ ದೂರುದಾರರನ್ನು ಕುರಿತು ಆಪಾದಿತೆಯ ಕೊಠಡಿಯ ಒಳಗಡೆ ಏನು ನಡೆಯಿತು ಎಂದು ವಿಚಾರಿಸಲಾಗಿ, ಬಸವರಾಜುರವರು ತಾನು ಆಪಾದಿತೆಯ ಕೊಠಡಿಯ ಹೊರಗಡೆ ಸ್ವಲ್ಪ ಹೊತ್ತು ಇದ್ದು , ಒಳಗಡೆ ಹೋದೆನೆಂದು, ಅಲ್ಲಿ ಆಪಾದಿತೆಗೆ ತಾನು ತಂದಿದ್ದ ಹಣದ ಲಕೋಟೆಗಳನ್ನು ನೀವು ಹೇಳಿದಂತೆಯೇ ತಂದಿದ್ದೇನೆ ಎಂದು ಆಪಾದಿತೆಗೆ ಹೇಳಿ ಹಣದ ಲಕೋಟೆಗಳನ್ನು ಕೊಟ್ಟೆನೆಂದು ನಮ್ಮಗಳ ಎದುರು ಬಸವರಾಜುರವರು ಹೇಳಿದರು ಎಂದು ಪ್ರಾ.ಸಾ.2 ರವರು ನುಡಿದಿರುತ್ತಾರೆ. ಆ ಹಣದ ಲಕೋಟೆಗಳನ್ನು ಆಪಾದಿತೆಯು ತನ್ನ ಟೇಬಲ್ ಡ್ರಾದಲ್ಲಿ ಇಟ್ಟುಕೊಂಡರೆಂದು ಸಹ ಬಸವರಾಜುರವರು ಹೇಳಿದರು ಎಂದು ನುಡಿದಿರುತ್ತಾರೆ.** ಆನಂತರ ಬಸವರಾಜುರವರು ತಾನು ಆಪಾದಿತೆಯ ಕೊಠಡಿಯಿಂದ ಹೊರಗಡೆ ಬಂದು ಕರ್ಚೀಫ್‌ನಲ್ಲಿ ಮುಖ ಒರೆಸಿಕೊಂಡೆನೆಂದು ತಿಳಿಸಿದರು ಹಾಗೂ ತಾನು ಆಪಾದಿತೆಗೆ ಹಣ ನೀಡಿದ ನಂತರ ಅವರು ಸಂಬಂಧಪಟ್ಟ ಎರಡೂ ಕಡತಗಳಿಗೆ ಸಹಿ ಮಾಡಿದರೆಂದು ಒಂದು ಕಡತಕ್ಕೆ ಟಿಪ್ಪಣಿ ಸಹ ಬರೆದರು ಎಂದು ಬಸವರಾಜುರವರು ಹೇಳಿದರೆಂದು ಒಂದು ಲಕೋಟೆಯಲ್ಲಿ 5 ಲಕ್ಷರೂಪಾಯಿ ಇದ್ದು ಇನ್ನೊಂದು ಲಕೋಟೆಯಲ್ಲಿ 2 ಲಕ್ಷ ರೂಪಾಯಿ ಇತ್ತು ಎಂದು ನುಡಿದಿರುತ್ತಾರೆ.

27) **ಪ್ರಾ.ಸಾ.2** ರವರು ಮುಂದುವರೆದು ಹೇಳುತ್ತಾ, ನಂತರ ಪೊಲೀಸ್ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಸಿದ್ಧಪಡಿಸಿದ್ದು , ಅದರಲ್ಲಿ ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ತೆಗೆದಿದ್ದು ಉಳಿದ ದ್ರಾವಣವನ್ನು 2 ಬೌಲ್‌ಗಳಿಗೆ ಹಾಕಿರುತ್ತಾರೆ. 2 ಬೌಲುಗಳಲ್ಲಿ ಇದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆಪಾದಿತೆಯ ಬಲಗೈಯನ್ನು ಒಂದು ಬೌಲಿನಲ್ಲಿ ಅದ್ದಿಸಿದ್ದು , **ಬಲಗೈ ಅದ್ದಿಸಿದ್ದ**

**ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆಂದು ಇದನ್ನು ಒಂದು ಸೀಸೆಗೆ ಹಾಕಿ ಸೀಲು ಮಾಡಿರುತ್ತಾರೆಂದು** ನಂತರ ಇನ್ನೊಂದು ಬೌಲಿನಲ್ಲಿ ಇದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆಪಾದಿತೆಯವರ ಎಡಗೈ ಬೆರಳನ್ನು ಅದ್ದಿಸಿದಾಗ ಈ ದ್ರಾವಣವು ಯಾವುದೇ ಬಣ್ಣಕ್ಕೆ ತಿರುಗಲಿಲ್ಲವೆಂದು, ಹಾಗೂ ಇದನ್ನು ಸಹ ಒಂದು ಸೀಸೆಗೆ ಹಾಕಿ ಸೀಲು ಮಾಡಿರುತ್ತಾರೆಂದು ನುಡಿದಿರುತ್ತಾರೆ.

28) **ಪ್ರಾ.ಸಾ.2–ಪಂಚ ಶ್ರೀನಿವಾಸ ರವರು ಮುಂದುವರೆದು ಹೇಳುತ್ತಾ,** ನಂತರ ಲೋಕಾಯುಕ್ತ ಡಿವೈಎಸ್‌ಪಿಯವರು ಆಪಾದಿತೆಯನ್ನು ದೂರುದಾರರಾದ ಬಸವರಾಜುರವರು ಕೊಟ್ಟ ಹಣ ಎಲ್ಲಿ ಎಂದು ಕೇಳಲಾಗಿ, ಆಪಾದಿತೆಯು ಕವರ್‌ಗಳು ಡ್ರಾನಲ್ಲಿ ಇರುವುದಾಗಿ ತೋರಿಸಿದರೆಂದು, ಡಿವೈಎಸ್‌ಪಿಯವರು ಪಂಚ ಸಾಕ್ಷಿದಾರರಾದ ಪ್ರಮೀಳರವರಿಂದ ಸದರಿ ಹಣವನ್ನು ಡ್ರಾದಿಂದ ಹೊರತೆಗೆಯುವಂತೆ ತಿಳಿಸಿದರೆಂದು ಆಗ ಲೋಕಾಯುಕ್ತ ಸಿಬ್ಬಂದಿಯವರು ನೋಟು ನಂಬರುಗಳನ್ನು ಬರೆದುಕೊಂಡಿದ್ದ ಹಾಳೆಯನ್ನು ತಂದಿದ್ದು, ಇದನ್ನು ಆಪಾದಿತೆಯ ಡ್ರಾನಲ್ಲಿದ್ದ ಲಕೋಟೆಯಲ್ಲಿದ್ದ ಹಣದ ಜೊತೆ ಪರಿಶೀಲಿಸಿ ನೋಡಿದ್ದು , ಹಿಂದಿನ ಪಂಚನಾಮೆಯಲ್ಲಿ ಪಟ್ಟಿಮಾಡಿಕೊಂಡಿದ್ದ ನೋಟಿನ ನಂಬರಿಗೆ ಈ ನೋಟುಗಳ ನಂಬರುಗಳು ತಾಳೆಯಾದವೆಂದು ನುಡಿದಿರುತ್ತಾರೆ. ಆ ಹಣವನ್ನು ಬೇರೆ ಲಕೋಟೆಗೆ ಹಾಕಿ ಸೀಲು ಮಾಡಿ , ಸಹಿ ಪಡೆದುಕೊಂಡರೆಂದು ಹಾಗೂ ಆ ಲಕೋಟೆಗಳನ್ನು ಸೀಲು ಮಾಡಿರುತ್ತಾರೆಂದು ನುಡಿದಿರುತ್ತಾರೆ. ಡ್ರಾನಲ್ಲಿ ಲಕೋಟೆ ಇಟ್ಟಿದ್ದ ಸ್ಥಳವನ್ನು ಹತ್ತಿಯಿಂದ ಒರೆಸಿ , ಆ ಹತ್ತಿಯನ್ನು ಬೇರೆ ಕವರಿಗೆ ಹಾಕಿ ಸೀಲು ಮಾಡಿರುತ್ತಾರೆಂದು ಇನ್ನೊಂದು ಭಾಗದ ಹತ್ತಿಯನ್ನು ಹಾಗೆಯೇ ಲಕೋಟೆಯಲ್ಲಿ ಸ್ಯಾಂಪಲ್ ಎಂದು ಇಟ್ಟಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ಎರಡು ಕಡತಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು ಅದಕ್ಕೆ ನಾವುಗಳು ಸಹಿ ಮಾಡಿರುತ್ತೇವೆಂದು ನುಡಿದಿರುತ್ತಾರೆ.

29) **ಪ್ರಾ.ಸಾ.2–ಪಂಚ ಶ್ರೀನಿವಾಸ ರವರು ಮುಂದುವರೆದು ಹೇಳುತ್ತಾ, ದೂರುದಾರರಿಗೆ ಆಪಾದಿತೆಯ ಕೊಠಡಿಯೊಳಗೆ ಹಣ ಕೊಡಲು ಹೋದಾಗ ಅವರಿಬ್ಬರ ನಡುವಿನ ಸಂಭಾಷಣೆಯನ್ನು ವಾಯ್ಸ್ ರಿಕಾರ್ಡರ್‌ನಿಂದ ಕಂಪ್ಯೂಟರಿಗೆ ಹಾಕಿ ಸಿಡಿ ಮಾಡಿರುತ್ತಾರೆಂದು ಹಾಗೂ ಇದನ್ನು ಸಹ ಸೀಲು ಮಾಡಿರುತ್ತಾರೆಂದು ಹಾಗೂ ಸಿಡಿಯ ಇನ್ನೊಂದು ಕಾಪಿಯನ್ನು ಮಾಡಿರುತ್ತಾರೆಂದು ನುಡಿದಿರುತ್ತಾರೆ.**

30) **ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ,** ಮೊದಲು ದಾಖಲು ಮಾಡಿಕೊಂಡಿದ್ದ ಆಪಾದಿತೆಯ ಹಾಗೂ ದೂರುದಾರರ ನಡುವಿನ ಸಂಭಾಷಣೆಯ ಸಿಡಿಯನ್ನು ಮತ್ತು ದೂರುದಾರರು ಆಪಾದಿತೆಗೆ ಹಣ ಕೊಡುವಾಗ ದಾಖಲು ಮಾಡಿಕೊಂಡಿದ್ದ ಸಂಭಾಷಣೆಯ ಸಿ.ಡಿ.ಯನ್ನು ಬಿಡಿಎ ಆಯುಕ್ತರಿಗೆ ಕೇಳಿಸಿರುತ್ತಾರೆಂದು ಬಿಡಿಎ ಆಯುಕ್ತರು ಈ ಬಗ್ಗೆ ಒಂದು ವರದಿಯನ್ನು ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ.

31) **ಪ್ರಾ.ಸಾ.2 ರವರು ಮುಂದುವರೆದು ಹೇಳುತ್ತಾ,** ಆಪಾದಿತೆಯವರಲ್ಲಿ ಎರಡು ಮೊಬೈಲ್ ಫೋನ್ ಇದ್ದು ಒಂದು ಮೊಬೈಲು ಫೋನನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು **ಈ ಎಲ್ಲಾ ಘಟನೆಯನ್ನು ವಿಡಿಯೋ ಚಿತ್ರೀಕರಣ ಸಹ ಮಾಡಿರುತ್ತಾರೆಂದು ಆಪಾದಿತೆಯ ಕೊಠಡಿಯಲ್ಲಿ ಚಿಕ್ಕಯ್ಯ ಎನ್ನುವವರು ಇದ್ದರೆಂದು** ಅವರನ್ನು ಲೋಕಾಯುಕ್ತ ಡಿವೈಎಸ್.ಪಿ.ಯವರು ವಿಚಾರಿಸಿದರೆಂದು ಹಾಗೂ ಸದರಿ ಚಿಕ್ಕಯ್ಯನವರು ಬಿಡಿಎ ಸೆಕ್ರೆಟರಿಯಾದ ಆಪಾದಿತೆಯವರ ಪರವಾಗಿ ತಾನು ಕೆಲಸಮಾಡುತ್ತಿದ್ದೇನೆಂದು, ಆ ದಿನ ಗೋವಿಂದರಾಜು ಎನ್ನುವವರು ಆಪಾದಿತೆಗೆ 1.50 ಲಕ್ಷ ರೂಪಾಯಿಯನ್ನು ನೀಡಿದರೆಂದು ಆ ಹಣವನ್ನು ತನ್ನ ಸ್ಕೂಟರಿನಲ್ಲಿ ಇಟ್ಟಿದ್ದೆನೆಂದು ಮಾಹಿತಿ ನೀಡಿದರೆಂದು , ಈ ಮಾತುಗಳನ್ನು ಡಿ.ವೈಎಸ್.ಪಿಯವರು ಚಿಕ್ಕಯ್ಯನ ಎದುರೇ ಹೇಳಿದರೆಂದು, ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲವೆಂದು ನಂತರ ಚಿಕ್ಕಯ್ಯನವರು ತನ್ನ ಸ್ಕೂಟರಿನ ಡಿಕ್ಕಿಯಲ್ಲಿ ಆಪಾದಿತೆಗೆ ಸಂಬಂಧಿಸಿದ 1.50 ಲಕ್ಷ ರೂಪಾಯಿಗಳನ್ನು ಅಂದರೆ ಗೋವಿಂದರಾಜು ಎಂಬುವರು ಆಪಾದಿತೆಗೆ ನೀಡಿದ 1.50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆನೆಂದು ಹೇಳಿ ತಮ್ಮ ಸ್ಕೂಟರಿನ ಬಳಿ ಕರೆದುಕೊಂಡು ಹೋಗಿ ಜೇಬಿನಿಂದ ಕೀ ತೆಗೆದು ಸ್ಕೂಟರಿನ ಡಿಕ್ಕಿಯನ್ನು ಓಪನ್ ಮಾಡಿ ತೋರಿಸಿದರೆಂದು ಅದರಲ್ಲಿ 1.50 ಲಕ್ಷ ರೂಪಾಯಿಗಳು ಇದ್ದವೆಂದು ಹಾಗೂ ಅದನ್ನು ತೆಗೆದುಕೊಟ್ಟರೆಂದು ನುಡಿದಿರುತ್ತಾರೆ. ಇದನ್ನು ವಿಡಿಯೋ ಚಿತ್ರೀಕರಣ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಚಿಕ್ಕಯ್ಯನವರ ಮೊಬೈಲ್ ಫೋನನ್ನು ಸೀಜು ಮಾಡಿರುತ್ತಾರೆಂದು ಹಾಗೂ ಈ ಎಲ್ಲಾ ಸಂಗತಿಗಳ ಬಗ್ಗೆ ಮಹಜರು ಮಾಡಿದ್ದು ಇದನ್ನು ನಿ.ಪಿ.5 ಎಂದು ಗುರುತಿಸಿಕೊಂಡಿದ್ದು ಇವರ ಸಹಿಯನ್ನು ನಿ.ಪಿ.5–ಬಿ ಎಂದು ಗುರುತಿಸಿಕೊಂಡಿರುತ್ತಾರೆ.

**32) ಶ್ರೀ ಎಂ.ನಾರಾಯಣ್ ಇವರನ್ನು ಪ್ರಾ.ಸಾ.–3 ಎಂದು ವಿಚಾರಣೆ ಮಾಡಿದ್ದು,** ಇವರು ಆರಕ್ಷಕ ಉಪಾಧೀಕ್ಷಕರು–3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇಲ್ಲಿ ದಿ:10.1.2014 ರಿಂದ 20.6.2016 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೆನೆಂದು ಆಗ ದಿನಾಂಕ: 25.04.2014ರಂದು ಬಸವರಾಜು ಎನ್ನುವವರು ಹಾಜರಾಗಿ ಲಿಖಿತ ದೂರನ್ನು ಮತ್ತು ಸಿ.ಡಿಯನ್ನು ನೀಡಿರುತ್ತಾರೆಂದು ಹಾಗೂ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಸಹ ಕೊಟ್ಟಿರುತ್ತಾರೆಂದು ತಾವು ಇವುಗಳನ್ನು ಪರಿಶೀಲಿಸಿದ್ದು ಸಿ.ಡಿಯಲ್ಲಿದ್ದ ಸಂಭಾಷಣೆಯನ್ನು ಕೇಳಿದ್ದು. ಈ ದೂರಿನ ಸಂಗತಿಗಳು ಹಾಗೂ ಅಧಿಕಾರ ಪತ್ರಗಳನ್ನು ಪರಿಶೀಲಿಸಿದ್ದು ಮೇಲ್ನೋಟಕ್ಕೆ ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳಬಹುದೆಂದು ಕಂಡು ಬಂದಿದ್ದರಿಂದ ತಾನು ಗುನ್ನೆ ನಂ. 16/2014ರಲ್ಲಿ ಕಲಂ 7ರಡಿಯಲ್ಲಿ ನೋಂದಾವಣೆ ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಈ ದೂರು ನಿ.**ಪಿ–1** ಆಗಿರುತ್ತದೆಂದು ಇವರು ನೀಡಿದ್ದ ಇವರು ಅಧಿಕಾರ ಪತ್ರವನ್ನು ಗುರುತಿಸಿದ್ದು ಇದು ನಿ.ಪಿ.2 ಮತ್ತು 3 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಈ ಪ್ರಕರಣಕ್ಕೆ ಬೇಕಾದ ಸಾಕ್ಷಿದಾರರನ್ನು ಕಂದಾಯ ಇಲಾಖೆಯಿಂದ ಶ್ರೀಮತಿ ಪ್ರಮೀಳ, ಸಹಾಯಕರು ಹಾಗೂ ಅರಣ್ಯ ಇಲಾಖೆಯಿಂದ ಶ್ರೀನಿವಾಸ್, ಸಹಾಯಕ ಇವರನ್ನು ತಾವು ಪತ್ರ ಕೊಟ್ಟಿದ್ದರಿಂದ ಆ ದಿನ ಮಧ್ಯಾಹ್ನ 3:30 ಗಂಟೆಗೆ ಬಂದಿರುತ್ತಾರೆಂದು ನುಡಿದಿದ್ದು ಅವರಿಗೆ ಕೊಠಡಿಯಲ್ಲಿದ್ದ ಫಿರ್ಯಾದಿ ಬಸವರಾಜು ಹಾಗೂ ಅವರ ಸ್ನೇಹಿತರಾದ ನಾಗೇಂದ್ರರವರನ್ನು ಪರಿಚಯಿಸಿದ್ದು ಸಿ.ಡಿಯನ್ನು ಕೇಳಿಸಿರುತ್ತೇನೆಂದು ಹಾಗೂ ದೂರಿನ ಸಂಗತಿಗಳನ್ನು ತಿಳಿದುಕೊಂಡಿದ್ದು ಅವರನ್ನು ಪಂಚರಾಗಿರಲು ಕೇಳಿದಾಗ ಒಪ್ಪಿರುತ್ತಾರೆಂದು ನುಡಿದಿರುತ್ತಾರೆ.

33) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ಅದೇ ದಿನ ಫಿರ್ಯಾದಿಯನ್ನು ಉದ್ದೇಶಿಸಿ ತಾನು ಆಪಾದಿತೆಯು ಕೇಳಿದ್ದ 7 ಲಕ್ಷ ರೂಪಾಯಿ ಹಣವನ್ನು ತಂದಿದ್ದೀರಾ ಎಂದು ಕೇಳಲಾಗಿ ಆತ ತರುತ್ತೇನೆಂದು ಸ್ವಲ್ಪ ಸಮಯ ತೆಗೆದುಕೊಂಡು ಹೋಗಿದ್ದು ನಂತರ ಹಣವನ್ನು ತಂದಿರುತ್ತಾರೆಂದು ಇವರು ತಂದಿದ್ದ ಹಣವನ್ನು ಪಂಚರ ಸಮುಕ್ಷಮ ತಮ್ಮ ಸಿಬ್ಬಂದಿಯಿಂದ ಅದನ್ನು ಲೆಕ್ಕ ಮಾಡಿಸಿದ್ದೇನೆಂದು ಹಾಗೂ ನೋಟಿನ ನಂಬರುಗಳನ್ನು ದಾಖಲಿಸಿ ಕೊಂಡೆವು ಎಂದು ಎಲ್ಲಾ ನೋಟುಗಳು ಒಂದು ಸಾವಿರ ಮುಖ ಬೆಲೆಯ

ನೋಟುಗಳಾಗಿದ್ದು 700 ನೋಟುಗಳು ಇದ್ದವು ಎಂದು ಇದರಲ್ಲಿ ಐದು ಲಕ್ಷದ ಒಂದು ಕಂತೆ(ಬಂಡಲ್) ಎರಡು ಲಕ್ಷದ ಒಂದು ಕಂತೆ(ಬಂಡಲ್) ಪ್ರತ್ಯೇಕವಾಗಿ ಮಾಡಿಸಿದ್ದೆನು ಎಂದು ಈ ನೋಟುಗಳಿಗೆ ಫಿನಾಪ್ತಲೀನ್ ಪುಡಿಯನ್ನು ತಮ್ಮ ಸಿಬ್ಬಂದಿಯಿಂದ ಸವರಿಸಿದ್ದೇನೆಂದು ಯಾರು ಈ ನೋಟುಗಳನ್ನು ಎಣಿಸಿರುತ್ತಾರೋ ಹಾಗೂ ಮುಟ್ಟಿರುತ್ತಾರೋ ಅವರ ಕೈಗಳನ್ನು ಪಿಂಗಾಣಿ ಬಟ್ಟಲಲ್ಲಿ ತಯಾರಿ ಮಾಡಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣವದ ಮಾದರಿಯನ್ನು ಒಂದು ಖಾಲಿ ಸೀಸೆಗೆ ಹಾಕಿದ್ದು ಉಳಿದಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಪಂಚ ಸಾಕ್ಷಿದಾರರಾದ ಶ್ರೀನಿವಾಸ್‌ರವರ ಕೈಗಳನ್ನು ಅದ್ದಿಸಿದ್ದು, ಇದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆಂದು ನಂತರ ಈ ದ್ರಾವಣವನ್ನು ಸೀಸೆಗೆ ಹಾಕಿ ಸೀಲ್ ಮಾಡಿರುತ್ತೇನೆಂದು ನುಡಿದಿರುತ್ತಾರೆ.

34) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ಸಿ.ಡಿಯಲ್ಲಿದ್ದ ಸಂಗತಿಗಳನ್ನು ಪಂಚರಿಗೆ ಕೇಳಿಸಿರುತ್ತೇನೆಂದು ಹಾಗೂ ಎರಡು ಲಕೋಟೆಗಳಲ್ಲಿ ಈ 7 ಲಕ್ಷ ರೂಪಾಯಿ ಹಣವನ್ನು ಅಂದರೆ ಒಂದು ಲಕೋಟೆಯಲ್ಲಿ ಐದು ಲಕ್ಷ ರೂಪಾಯಿ ಹಣ ಇನ್ನೊಂದು ಲಕೋಟೆಯಲ್ಲಿ ಎರಡು ಲಕ್ಷ ಹಣವನ್ನು ಹಾಕಿದ್ದು ಲಕೋಟೆ ಮೇಲೆಯು ಸಹ ಪಿನಾಪ್ತಲೀನ್ ಪುಡಿಯನ್ನು ಸವರಿಸಿದ್ದೆನು ಎಂದು ದೂರುದಾರರಿಗೆ ಈ ಎರಡು ಲಕೋಟೆಗಳನ್ನು ಕೊಟ್ಟಿದ್ದು ಅವರು ಇದನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಇಟ್ಟುಕೊಂಡಿರುತ್ತಾರೆಂದು ಹಾಗೂ ಅವರಿಗೆ ವಾಯ್ಸ್ ರೆಕಾರ್ಡ್‌ರನ್ನು ಕೊಟ್ಟಿದ್ದು ಇದನ್ನು ಆಪಾದಿತೆಯ ಕೊಠಡಿಗೆ ಹೋಗುವಾಗ ಆನ್ ಮಾಡಿಕೊಳ್ಳಬೇಕೆಂದು ಹಾಗೂ ಆಪಾದಿತೆಯು ಹಣ ಕೇಳಿದರೆ ಮಾತ್ರ ಕೊಡಬೇಕೆಂದು, ಆಪಾದಿತೆ ಹಣವನ್ನು ಪಡೆದ ನಂತರ ಹೊರಗಡೆ ಬಂದು ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮುಖಾಂತರ ನಮಗೆ ಸೂಚನೆ ನೀಡಬೇಕೆಂದು ಫಿರ್ಯಾದಿಗೆ ಪಂಚರ ಎದುರು ತಿಳಿಸಿದ್ದೆನು ಎಂದು ನುಡಿದಿರುತ್ತಾರೆ.

35) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ನೆರಳು ಸಾಕ್ಷಿಯಾದ ಶ್ರೀನಿವಾಸ್‌ಗೆ ದೂರುದಾರರಾದ ಬಸವರಾಜುರವರ ಜೊತೆ ಹೋಗುವಂತೆ ತಿಳಿಸಿದ್ದು, ಇದಕ್ಕೆ ಬಸವರಾಜುರವರು ತನ್ನ ಜೊತೆ ಆಪಾದಿತೆ ಕೊಠಡಿಗೆ

ಯಾರಾದರು ಬಂದರೆ ಆಪಾದಿತೆ ಅನುಮಾನ ಪಡಬಹುದೆಂದು ತಿಳಿಸಿದ್ದು, ಆದ್ದರಿಂದ ನೆರಳು ಸಾಕ್ಷಿ ಶ್ರೀನಿವಾಸ್‌ರನ್ನು ಆಪಾದಿತೆಯ ಕೊಠಡಿ ಹೊರಗಡೆ ನಿಂತು ಗಮನಿಸಿ ಕೊಳ್ಳಬೇಕೆಂದು ತಿಳಿಸಿದ್ದೆನು ಎಂದು ನುಡಿದಿರುತ್ತಾರೆ. ನಂತರ ಈ ಬಗ್ಗೆ ಪ್ರಾಯೋಗಿಕ ಪಂಚನಾಮೆಯನ್ನು ಆ ದಿನ ಮಧ್ಯಾಹ್ನ 3:45 ಗಂಟೆಯಿಂದ 4:50 ರವರೆಗೆ ಬರೆದೆವು ಎಂದು ಈ ಪ್ರಾಯೋಗಿಕ ಪಂಚನಾಮೆಯಲ್ಲಿ ಸಿ.ಡಿಯಲ್ಲಿದ್ದ ಸಂಭಾಷಣೆಯನ್ನು ಲಿಪಿಕರಿಸಿದ್ದು, ಹಾಗೂ ನೋಟಿನ ನಂಬರುಗಳನ್ನು ಸಹ ನಮೂದಿಸಿದ್ದನ್ನು ದಾಖಲಿಸಿರುತ್ತೇನೆಂದು ನುಡಿದಿರುತ್ತಾರೆ. ಈ ಪ್ರಾಯೋಗಿಕ ಪಂಚನಾಮೆಯನ್ನು **ನಿ.ಪಿ–4** ಆಗಿರುತ್ತದೆಂದು ಗುರುತಿಸಿದ್ದು. ಸಾಕ್ಷಿಯು ಗುರುತಿಸಿದ ತನ್ನ ಸಹಿಯು **ನಿಪಿ–4(ಸಿ)** ಆಗಿರುತ್ತದೆಂದು ನುಡಿದಿರುತ್ತಾರೆ.

36) ಪ್ರಾ.ಸಾ.3 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುತ್ತಾ, ನಂತರ ತಾನು ಸಿಬ್ಬಂದಿಯವರು ಮತ್ತು ಅಧಿಕಾರಿಗಳು ಹಾಗೂ ಪಂಚ ಸಾಕ್ಷಿದಾರರು ಮತ್ತು ಫಿರ್ಯಾದಿ ಆಪಾದಿತೆಯವರ ಬಿ.ಡಿ.ಎ ಕಛೇರಿಗೆ ಸುಮಾರು 5 ಗಂಟೆ 20 ನಿಮಿಷದ ಸಮಯಕ್ಕೆ ಹೋಗಿರುತ್ತೇವೆಂದು ಹಾಗೂ ತಾವುಗಳು ಆಪಾದಿತೆಯ ಕೊಠಡಿಯ ಹೊರಗಡೆ ಸಾರ್ವಜನಿಕರಂತೆ ನಿಂತಿದ್ದೆವು ಎಂದು ಬೇರೆ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಅಕ್ಕ ಪಕ್ಕದಲ್ಲೇ ನಿಂತಿದ್ದರೆಂದು ಆಗ ಫಿರ್ಯಾದಿ ಬಸವರಾಜು ಆಪಾದಿತೆಯ ಕೊಠಡಿ ಒಳಗೆ ಹೋಗಿದ್ದು ಆತ ಹೊರಗಡೆ ಬರುವುದನ್ನು ತಾವು ಕಾಯುತ್ತಿದ್ದೆವು ಎಂದು ಸಾಯಂಕಾಲ 6 ಗಂಟೆಗೆ ಫಿರ್ಯಾದಿ ಬಸವರಾಜು, ಬಿ.ಡಿ.ಎ ಕಾರ್ಯದರ್ಶಿ ಆಪಾದಿತೆ ಕೊಠಡಿಯಿಂದ ಹೊರಗಡೆ ಬಂದು ತಮಗೆ ಕಾಣುವಂತೆ ಕರವಸ್ತ್ರದಲ್ಲಿ ತನ್ನ ಮುಖ ಒರೆಸಿಕೊಂಡರೆಂದು ಈ ಸೂಚನೆಯಿಂದ ಆಪಾದಿತೆಯು ಹಣ ಪಡೆದುಕೊಂಡಿದ್ದಾರೆಂದು ಗೊತ್ತಾಗಿ ತಾನು, ಸಿಬ್ಬಂದಿ, ಸಾಕ್ಷಿದಾರರು ಹಾಗೂ ಎಲ್ಲರೂ ಆಪಾದಿತೆಯ ಕೊಠಡಿಗೆ ಹೋಗಿರುತ್ತೇವೆಂದು ನುಡಿದಿರುತ್ತಾರೆ.

37) ತಾವು ಆಪಾದಿತೆಯ ಕೊಠಡಿ ಒಳಗೆ ಹೋದಾಗ ಆಪಾದಿತೆ ತನ್ನ ಸೀಟ್‌ನಲ್ಲಿ ಕುಳಿತಿದ್ದರೆಂದು ತಾನು ಆಪಾದಿತೆಗೆ ತನ್ನನ್ನು ಪರಿಚಯಿಸಿಕೊಂಡಿದ್ದು ಹಾಗೂ ಸಾಕ್ಷಿದಾರರನ್ನು ಪರಿಚಯಿಸಿದೆನೆಂದು ತಾವು ಆಪಾದಿತೆ ಕೊಠಡಿ ಒಳಗೆ

ಹೋದಾಗ ಆಪಾದಿತೆಯ ಎದುರುಗಡೆ ಇದ್ದ ಚೇರಿನಲ್ಲಿ ಒಬ್ಬ ವ್ಯಕ್ತಿ ಕುಳಿತು ಮಾತನಾಡುತ್ತಿದ್ದರೆಂದು ತಾನು ಆ ವ್ಯಕ್ತಿಯನ್ನು ಯಾರೆಂದು ಅಂದರೆ ಅವರ ಹೆಸರೇನೆಂದು ಕೇಳಿದನು ಅದಕ್ಕೆ ಆತ ತನ್ನ ಹೆಸರು ಚಿಕ್ಕಯ್ಯ ಎಂದು ಮೇಡಂಗೆ ಅಂದರೆ ಆಪಾದಿತೆಗೆ ಪರಿಚಯ ಎಂದು ಬಂದಿದ್ದೇನೆಂದು ಹೇಳಿದನು. ತಾನು ಆತನನ್ನು ಅಲ್ಲೇ ಕುಳಿತುಕೊಳ್ಳುವಂತೆ ಹೇಳಿದೆನೆಂದು ನುಡಿದಿರುತ್ತಾರೆ.

38) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ತಾನು ಫಿರ್ಯಾದಿ ಬಸವರಾಜುರವನ್ನು ಏನಾಯಿತೆಂದು ವಿಚಾರಿಸಿದಾಗ, ಬಸವರಾಜುರವರು ಪಾರ್ವತಮ್ಮ ಮತ್ತು ನಾಗೇಂದ್ರ ಅವರ ಫೈಲ್‌ಗಳನ್ನು ಆಪಾದಿತೆಯು ಕ್ಲಿಯರ್ ಮಾಡಲು ಹಣ ಕೇಳಿದ್ದು, ತಾನು ತಂದಿದ್ದ ಎರಡು ಲಕೋಟೆಗಳನ್ನು ಆಪಾದಿತೆಯ ಕೈಯಲ್ಲಿ ಕೊಟ್ಟೆನೆಂದು ಆಕೆ ಅದನ್ನು ಪಡೆದುಕೊಂಡು ಆಕೆಯ ಟೇಬಲಿನ ಡ್ರಾದಲ್ಲಿ ಇಟ್ಟರೆಂದು ತಮಗೆ ಫಿರ್ಯಾದಿ ತಿಳಿಸಿದರೆಂದು ನುಡಿದಿರುತ್ತಾರೆ.

39) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ತಮ್ಮ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದ್ದು ಈ ದ್ರಾವಣದಲ್ಲಿ ಆಪಾದಿತೆಯ ಬಲಗೈ ಮತ್ತು ಎಡಗೈಯನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿರುತ್ತೇನೆಂದು, **ಬಲಗೈ ಅದ್ದಿಸಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆಂದು** ಎಡಗೈ ಅದ್ದಿಸಿದ್ದ ದ್ರಾವಣದ ಬಣ್ಣ ಬದಲಾಗಿರಲಿಲ್ಲವೆಂದು ಇವುಗಳನ್ನು ಪ್ರತ್ಯೇಕವಾದ ಸೀಸೆಗಳಲ್ಲಿ ಹಾಕಿ ಸೀಲ್ ಮಾಡಿರುತ್ತೇನೆಂದು ನುಡಿದಿರುತ್ತಾರೆ.

40) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ತಾನು ಆಪಾದಿತೆಯನ್ನು ಫಿರ್ಯಾದಿ ಬಸವರಾಜುರವರು ಆಕೆಗೆ ನೀಡಿದ್ದ ಹಣ ಎಲ್ಲಿದೆ ಎಂದು ವಿಚಾರಿಸಲಾಗಿ ಆಪಾದಿತೆಯು ತನ್ನ ಟೇಬಲ್ ಡ್ರಾಯರ್‌ನಲ್ಲಿ ಇಟ್ಟಿದೆ ಎಂದು ಹೇಳಿದರೆಂದು ನಂತರ **ತಾನು ಫಿರ್ಯಾದಿ ಬಸವರಾಜುರವನ್ನು ಆಪಾದಿತೆಗೆ ಹಣ ಕೊಟ್ಟ ನಂತರ ಏನಾಯಿತೆಂದು ಕೇಳಿದೆನೆಂದು,** ಅದಕ್ಕೆ ಬಸವರಾಜುರವರು ಆಪಾದಿತೆಯು ತನ್ನಿಂದ ಹಣ ಪಡೆದುಕೊಂಡ ನಂತರ ಪಾರ್ವತಮ್ಮ ಮತ್ತು ನಾಗೇಂದ್ರರವರ ಫೈಲ್‌ಗಳನ್ನು ತರಿಸಿಕೊಂಡು ಆತನ ಎದುರಿನಲ್ಲೇ

ಅನುಮೋದನೆಗಾಗಿ ಆಯುಕ್ತರಿಗೆ ಸಲ್ಲಿಸಿದೆ ಎಂದು ಬರೆದು ಸಹಿ ಮಾಡಿ ದಿನಾಂಕವನ್ನು ನಮೂದಿಸುವಾಗ ಹಿಂದಿನ ದಿನಾಂಕವನ್ನು ಅಂದರೆ 24.04.2014 ಎಂದು ಹಾಕಿದರೆಂದು ಸದರಿ ಬಸವರಾಜು ಹೇಳಿದರೆಂದು ನುಡಿದಿರುತ್ತಾರೆ.

41) ತಾನು ಪಂಚರಾದ ಪ್ರಮೀಳ ಅವರಿಗೆ ಆಪಾದಿತೆಯ ಟೇಬಲ್ ಡ್ರಾಯರ್ ಅನ್ನು ತೆಗೆಯುವಂತೆ ಹೇಳಿದೆನು. ಸದರಿ ಪ್ರಮೀಳ ಟೇಬಲ್ ಡ್ರಾಯರ್‌ಅನ್ನು ತೆರೆದಿದ್ದು ಇದರಲ್ಲಿ ಪೇಪರ್‌ಗಳು ಇದ್ದು ಫಿರ್ಯಾದಿ ತೆಗೆದುಕೊಂಡು ಬಂದಿದ್ದ ಹಣದ 2 ಲಕೋಟೆಗಳು ಅದರಲ್ಲಿ ಇದ್ದವು. ಆ ಲಕೋಟೆಗಳನ್ನು ತೆಗೆಸಿ ಅದರಲ್ಲಿದ್ದ ನೋಟುಗಳನ್ನು ನಾವು ಹಿಂದೆ ಪ್ರಯೋಗಿಕ ಪಂಚನಾಮೆ ಸಮಯದಲ್ಲಿ ಬರೆದುಕೊಂಡಿದ್ದ ನೋಟು ಸಂಖ್ಯೆಗಳಿಗೆ ತಾಳೆ ಮಾಡಿ ನೋಡಲಾಗಿ ಇವುಗಳು ತಾಳೆಯಾಗುತ್ತಿದ್ದವು. ಇದು ಖಾತ್ರಿಯಾದ ನಂತರ ಇನ್ನೊಂದು ಲಕೋಟೆಗೆ ಈ ಎರಡು ಲಕೋಟೆಯಲ್ಲಿದ್ದ ಹಣವನ್ನು ಅಂದರೆ 7 ಲಕ್ಷ ರೂಪಾಯಿ ಹಣವನ್ನು ಹಾಕಿಸಿರುತ್ತೇನೆಂದು ಈ ಹಣವನ್ನು ಅಮಾನತ್ತು ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಹಾಗೂ ಡ್ರಾಯರ್‌ನಲ್ಲಿ ಫೈಲ್ ಜೊತೆಗೆ ಹಣ ಇಟ್ಟಿದ್ದ ಸ್ಥಳವನ್ನು ಹತ್ತಿಯಿಂದ ಒರೆಸಿಸಿದೆನೆಂದು ಹಾಗೂ ಆ ಹತ್ತಿಯನ್ನು ಸೀಲ್ ಮಾಡಿದೆನು ಎಂದು ಹಾಗೂ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಸಿದ್ದಪಡಿಸಿದೆನೆಂದು ನುಡಿದಿರುತ್ತಾರೆ.

42) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ನಂತರ ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ಸಂಬಂಧಪಟ್ಟ ಕಡತವನ್ನು ಪೋಟೋ ಪ್ರತಿ ಮಾಡಿಸಿ ತೆಗೆದುಕೊಂಡೆನೆಂದು ಈ ಎರಡು ಕಡತಗಳ ಪೋಟೋ ಪ್ರತಿಗಳನ್ನು **ನಿ.ಪಿ–11 ಮತ್ತು ನಿ.ಪಿ.12** ಆಗಿರುತ್ತದೆಂದು ನುಡಿದಿರುತ್ತಾರೆ.

43) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ಫಿರ್ಯಾದಿ ಬಸವರಾಜುರವರಿಗೆ ನೀಡಿದ್ದ ವಾಯ್ಸ್ ರೆಕಾರ್ಡ್‌ರನ್ನು ಪಡೆದುಕೊಂಡು ಇದನ್ನು ಕೇಳಿಸಿ, ನಂತರ ಲಿಪಿಕರಣ ಮಾಡಿಕೊಳ್ಳಲಾಯಿತು ಎಂದು ಈ ಬಗ್ಗೆ ಆಪಾದಿತೆಯನ್ನು ಕೇಳಲಾಗಿ ಅವರು ಲಿಖಿತವಾಗಿ ತಮ್ಮ ಹೇಳಿಕೆಯನ್ನು ಬರೆದುಕೊಟ್ಟಿರುತ್ತಾರೆಂದು ಇದನ್ನು **ನಿ.ಪಿ–13** ಎಂದು ಗುರುತಿಸಲಾಯಿತೆಂದು ನುಡಿದಿರುತ್ತಾರೆ.

44) **ತಾನು ಫಿರ್ಯಾದಿಯು ತನ್ನ ದೂರಿನ ಜೊತೆ ನೀಡಿದ್ದ ಸಿ.ಡಿಯಲ್ಲಿ ದಾಖಲಾಗಿದ್ದ ಸಂಭಾಷಣೆ ಹಾಗೂ ಹಣ ನೀಡುವಾಗ ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಬಿ.ಡಿ.ಎ ಆಯುಕ್ತರಾದ ಶ್ರೀ ಶ್ಯಾಮ್ ಭಟ್‌ರವರಿಗೆ ಹಾಕಿ ಕೇಳಿಸಿದಾಗ, ಇದರಲ್ಲಿರುವ ಒಂದು ಧ್ವನಿಯು ಆಪಾದಿತೆಯದೆಂದು ಗುರುತಿಸಿದರು ಎಂದು ನುಡಿದಿರುತ್ತಾರೆ.**

45) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ಈ ಕಡತಗಳು ಉಪ ಕಾರ್ಯದರ್ಶಿಯಿಂದ ಕಾರ್ಯದರ್ಶಿಗೆ ಬಂದಾಗ ಅದು ಒಂದು ವಾರದಲ್ಲಿ ಆಯುಕ್ತರವರಿಗೆ ಕಾರ್ಯದರ್ಶಿಯವರು ಕಳುಹಿಸಬೇಕಾಗಿತ್ತೆಂದು ಇದರಲ್ಲಿ ಒಂದು ಕಡತ ದಿ:02.04.2014 ರಂದು, ಇನ್ನೊಂದು ಕಡತ ದಿ:04.04.2014 ರಂದು ಕಾರ್ಯದರ್ಶಿಯವರಿಗೆ ಬಂದಿರುತ್ತದೆಂದು ಬಿ.ಡಿ.ಎ ಆಯುಕ್ತರು ತಿಳಿಸಿದರೆಂದು ನುಡಿದಿರುತ್ತಾರೆ.

46) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ತಾವು ಆಪಾದಿತೆಯ ಕೊಠಡಿಯ ಒಳಗೆ ಹೋದಾಗ ಆಪಾದಿತೆಯ ಎದುರುಗಡೆ ಕುಳಿತಿದ್ದ ಚಿಕ್ಕಯ್ಯನ ಬಗ್ಗೆ ತನಗೆ ಅನುಮಾನ ಬಂದಿದ್ದು ನಂತರ ಆತನನ್ನು ವಿಚಾರಿಸಿದಾಗ ಹಾಗೂ ಆತನ ಫೋನನ್ನು ತೆಗೆದುಕೊಂಡು ನೋಡಿದಾಗ ಆಪಾದಿತೆಯು ಚಿಕ್ಕಯ್ಯನ ಫೋನಿಗೆ ನಿರಂತರವಾಗಿ ಕರೆ ಮಾಡಿರುವುದು ಕಂಡು ಬಂತೆಂದು ನುಡಿದಿರುತ್ತಾರೆ, ಹಾಗೂ ಚಿಕ್ಕಯ್ಯನನ್ನು ತೀವ್ರವಾಗಿ ವಿಚಾರಣೆ ಮಾಡಲಾಗಿ, ಆತ ಮೇಡಂ ಅವರು ಅಂದರೆ ಆಪಾದಿತೆ ತನ್ನನ್ನು ಬರುವುದಕ್ಕೆ ಹೇಳಿದ್ದರೆಂದು ಈಗಾಗಲೇ ತನಗೆ ಗೋವಿಂದರಾಜು ಎನ್ನುವವರ ಕಡೆಯಿಂದ ಸ್ವೀಕೃತವಾದ ಒಂದೂವರೆ ಲಕ್ಷ ರೂಪಾಯಿಯನ್ನು ಆಪಾದಿತೆಯು ತನಗೆ ನೀಡಿದ್ದು ತಾನು ಆ ಹಣವನ್ನು **ತನ್ನ ಸ್ಕೂಟರಿನ ಡಿಕ್ಕಿಯಲ್ಲಿ ಇಟ್ಟಿರುತ್ತೇನೆಂದು ಹೇಳಿದ್ದು** ನಂತರ **ಆತನನ್ನು ಕರೆದುಕೊಂಡು ಪಂಚರ ಜೊತೆ ಸದರಿ ಪಾರ್ಕಿಂಗ್ ಸ್ಥಳಕ್ಕೆ** ಹೋದೆವು ಎಂದು ಪ್ರಾ.ಸಾ.3 ನುಡಿದಿರುತ್ತಾರೆ. ಸದರಿ ಚಿಕ್ಕಯ್ಯ ತನ್ನ ಸ್ಕೂಟರಿನ ಡಿಕ್ಕಿಯನ್ನು ತೆರೆದು ಅದರಲ್ಲಿದ್ದ ಒಂದೂವರೆ ಲಕ್ಷ ರೂಪಾಯಿಯನ್ನು ತೋರಿಸಿದ್ದು, ಅದನ್ನು ಅಮಾನತ್ತು ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಈ ಹಣವು ಸಹ ಮೇಲ್ನೋಟಕ್ಕೆ ಲಂಚದ ಹಣ ಎಂದೇ ಕಂಡು ಬಂದಿದ್ದರಿಂದ ಆ ವ್ಯಕ್ತಿಯನ್ನು

ಸಹ ವಶಕ್ಕೆ ತೆಗೆದುಕೊಂಡೆನು. ಆತ ಈ ಬಗ್ಗೆ ವಿವರಣೆ ಬರೆದುಕೊಟ್ಟಿದ್ದು ಇದು ಆತನ ಕೈಬರವಣಿಗೆಯಲ್ಲೇ ಇರುತ್ತದೆ ಂದು ನುಡಿದಿರುತ್ತಾರೆ ಹಾಗೂ ಸದರಿ ಚಿಕ್ಕಯ್ಯನ ಕೈಬರಹದ ಹೇಳಿಕೆಯನ್ನು **ನಿ.ಪಿ–14** ಎಂದು ಹಾಗೂ ಚಿಕ್ಕಯ್ಯನ ಸಹಿಯನ್ನು **ನಿ.ಪಿ–14 (ಎ)** ಎಂದು ಹಾಗೂ ಸಾಕ್ಷಿ ತನ್ನ ಸಹಿಯನ್ನು **ನಿ.ಪಿ–14(ಬಿ)** ಎಂದು ಗುರುತಿಸಿಕೊಂಡಿರುತ್ತಾರೆ.

47) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ನಂತರ ಆಪಾದಿತೆಯ ಕೊಠಡಿಗೆ ಬಂದಿದ್ದು ಅಲ್ಲಿ ಅಲ್ಮೇರದಲ್ಲಿದ್ದ ಕಡತಗಳನ್ನು ಪರಿಶೀಲನೆ ಮಾಡಬೇಕಾಗಿದ್ದು ಅದರ ಕೀಗಳ ಬಗ್ಗೆ ವಿಚಾರಿಸಲಾಗಿ ಇದನ್ನು ತಮ್ಮ ಸಿಬ್ಬಂದಿ ತೆಗೆದುಕೊಂಡು ಹೋಗಿರುತ್ತಾರೆಂದು ಆಪಾದಿತೆ ಹೇಳಿದ್ದು ನಂತರ ತಾನು ಆಪಾದಿತೆಯ ಕೊಠಡಿಯನ್ನೇ ಸೀಲ್ ಮಾಡಿದೆನು ಎಂದು ಇದಕ್ಕೂ ಮುಂಚಿತವಾಗಿಯೇ ಆಪಾದಿತೆಯ ಮೊಬೈಲ್‌ಅನ್ನು ಮತ್ತು ಚಿಕ್ಕಯ್ಯನ ಮೊಬೈಲ್‌ಅನ್ನು ಅಮಾನತ್ತು ಮಾಡಿಕೊಂಡಿರುತ್ತೇನೆಂದು ಈ ಮೇಲಿನ ಎಲ್ಲಾ ಸಂಗತಿಗಳಿಗೆ ಸಂಬಂಧಪಟ್ಟಂತೆ ಪಂಚನಾಮೆಯನ್ನು ಮಾಡಿದ್ದು ಇದು **ನಿ.ಪಿ–5** ಹಾಗೂ ತನ್ನ ಸಹಿಯನ್ನು **ನಿ.ಪಿ–5(ಸಿ)** ಎಂದು ಗುರುತಿಸಿಕೊಂಡಿರುತ್ತಾರೆ.

48) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ಆಪಾದಿತೆ ಮತ್ತು ಚಿಕ್ಕಯ್ಯನನ್ನು ದಸ್ತಗಿರಿ ಮಾಡಿ ಸಂಬಂಧಪಟ್ಟ ನ್ಯಾಯಾಲದ ಮುಂದೆ 26.04.2014ರಂದು ಹಾಜರುಪಡಿಸಿದೆನೆಂದು, ನಂತರ ಅಮಾನತ್ತು ಮಾಡಿಕೊಂಡಿದ್ದ ಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ರಾಸಾಯನಿಕ ಪರೀಕ್ಷಕರಿಗೆ ಕಳುಹಿಸಿರುತ್ತೇನೆಂದು ನುಡಿದಿರುತ್ತಾರೆ.

49) ಪ್ರಾ.ಸಾ.3 ರವರು ಮುಂದುವರೆದು ಹೇಳುತ್ತಾ, ತಾವು ತನಿಖೆ ಮಾಡುತ್ತಿರುವಾಗ ಮೇಲೆ ನಮೂದಿಸಿರುವ 1000 ರೂ ಮುಖಬೆಲೆಯ 700 ನೋಟುಗಳ ಸಂಖ್ಯೆಗಳನ್ನು ಮಹಜರ್ ಸಮಯದಲ್ಲಿ ಬೆರಳಚ್ಚು ಮಾಡಿಸುವಾಗ, ಬೆರಳಚ್ಚಿನ ತಪ್ಪುಗಳಿಂದಾಗಿ 13 ನೋಟಿನ ನಂಬರುಗಳು ತಪ್ಪಾಗಿ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಾಗಿದ್ದು, ಇದನ್ನು ತಾನು ತನಿಖೆ ಮಾಡುತ್ತಿರುವಾಗ ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ಇದನ್ನು ಸರಿಪಡಿಸಿದ್ದರಿಂದ ನಿವೇದನೆ ಮಾಡಿಕೊಂಡೆನೆಂದು ಸದರಿ ನಿವೇದನೆಯನ್ನು ನಿ.ಪಿ.15 ಎಂದು

ಗುರುತಿಸಿಕೊಂಡಿರುತ್ತಾರೆ. ಸ್ಥಳದ ಕಚ್ಚಾ ನಕ್ಷೆಯನ್ನು ನಿ.ಪಿ.16 ಎಂದು ಗುರುತಿಸಿಕೊಂಡಿರುತ್ತಾರೆ.

50) ಪ್ರಾ.ಸಾ.3 ರವರು ತಮ್ಮ ವಿಚಾರಣೆಯಲ್ಲಿ ಮುಂದುವರೆದು ಹೇಳುತ್ತಾ, ಆಪಾದಿತೆಗೆ ಸಂಬಂಧಪಟ್ಟಂತೆ ಅವರ ಕರ್ತವ್ಯದ ಬಗ್ಗೆ ವಿವರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆದುಕೊಂಡಿರುತ್ತೇನೆಂದು, ಇದನ್ನು ಪರಿಶೀಲಿಸಿದಾಗ ಮೇಲೆ ನಮೂದಿಸಿದ 2 ಕಡತಗಳನ್ನು ಪರಿಶೀಲಿಸಿ ಇವುಗಳ ಬಗ್ಗೆ ನಮೂದು ಮಾಡುವ ಕರ್ತವ್ಯವು **ಅಂದರೆ , ಆಪಾದಿತೆಗೂ ಈ ಕಡತಗಳಿಗೂ ಸಂಬಂಧವಿತ್ತೆಂದು ಖಾತ್ರಿಯಾಯಿತೆಂದು ತಮ್ಮ ಮುಖ್ಯ** ವಿಚಾರಣೆಯಲ್ಲಿ ಹೇಳಿರುತ್ತಾರೆ.

51) ಇನ್ನೊಬ್ಬ ಸಾಕ್ಷಿದಾರರಾದ ಶ್ರೀ ಶ್ಯಾಂಭಟ್ ಇವರನ್ನು ಪ್ರಾ.ಸಾ.4 ಎಂದು ವಿಚಾರಣೆ ಮಾಡಿಕೊಂಡಿದ್ದು, ಆಪಾದಿತೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿದ್ದ ಸಮಯದಲ್ಲಿ ಇವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ದಿ:29.08.2012 ರಿಂದ ದಿ:22.06.2016ರವರೆಗೆ ಕಾರ್ಯ ನಿರ್ವಹಿಸಿರುತ್ತೇನೆಂದು ನುಡಿದಿರುತ್ತಾರೆ. ಮುಂದುವರೆದು ಇವರು ತಮ್ಮ ಸಾಕ್ಷ್ಯದಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ನಾಗೇಂದ್ರರವರಿಗೆ ಸಂಬಂಧಿಸಿದ ಕಡತಗಳು ಬಾಕಿ ಇದ್ದವೆಂದು, ಲೋಕಾಯುಕ್ತ ಡಿ.ವೈ.ಎಸ್.ಪಿ. ಶ್ರೀ ನಾರಾಯಣ್‌ರವರು ದೂರವಾಣಿ ಕರೆ ಮಾಡಿ ಶ್ರೀಮತಿ ರಾಜಮ್ಮ ಚೌಡರೆಡ್ಡಿಯವರನ್ನು ಟ್ರ್ಯಾಪ್ ಮಾಡಿರುವುದಾಗಿ ಈ ಪ್ರಕರಣದ ತನಿಖೆಯ ಸಲುವಾಗಿ ಕಛೇರಿಗೆ ಬರಲು ತಿಳಿಸಿದ್ದು ತಾವು ಸಂಜೆ ಏಳು ಗಂಟೆಗೆ ಕಛೇರಿಗೆ ಬಂದಿರುತ್ತೇನೆಂದು ಹೇಳಿದ್ದು, ಹಾಗೂ ತನಿಖಾಧಿಕಾರಿಯವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆಂದು ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಶ್ರೀ ಬಸವರಾಜ್ ಎಂಬವರು ಫಿರ್ಯಾಧಿದಾರರಾಗಿದ್ದು ಶ್ರೀ ನಾಗೇಂದ್ರ ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತೆಯು ರೂ. 10 ಲಕ್ಷ ಮತ್ತು ಪಾರ್ವತಮ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ರೂ. 2ಲಕ್ಷ ಲಂಚದ ಹಣ ಬೇಡಿಕೆ ಇಟ್ಟಿದ್ದು ಎರಡು ಪ್ರಕರಣಕ್ಕೆ ಸೇರಿ ನಾಗೇಂದ್ರರವರ ಪ್ರಕರಣದಲ್ಲಿ ರೂ. 6ಲಕ್ಷ ಮತ್ತು ಪಾರ್ವತಮ್ಮರವರ ಪ್ರಕರಣದಲ್ಲಿ ರೂ. 1ಲಕ್ಷ ನೀಡಿರುವ ಬಗ್ಗೆ

ಮಾತುಕತೆಯಾಗಿರುವ ಸಂಭಾಷಣೆ ಸಿ.ಡಿಯನ್ನು ದೂರಿನೊಂದಿಗೆ ಪೋಲೀಸರಿಗೆ ದೂರುದಾರರು ನೀಡಿದ್ದು, ಸದರಿ ಸಿ.ಡಿಯಲ್ಲಿರುವ ಸಂಭಾಷಣೆಯನ್ನು ದಿನಾಂಕ: 25.04.2014 ರಂದು ತಮಗೆ ಕೇಳಿಸಿರುತ್ತಾರೆಂದು. ಸದರಿ ಸಂಭಾಷಣೆಯನ್ನು ಆಲಿಸಿದ ನಂತರ ತಾನು ಸಿ.ಡಿಯಲ್ಲಿರುವ ಸ್ವರವು ಆಪಾದಿತೆಯದು ಎಂದು ತಾನು ಗುರುತಿಸಿರುತ್ತೇನೆಂದು ಮತ್ತು ಆ ಸಂಭಾಷಣೆಯಲ್ಲಿ ಆಪಾದಿತೆಯು ಲಂಚದ ಹಣವನ್ನು ಸ್ವೀಕರಿಸಿರುವುದು ತಿಳಿದು ಬಂದಿರುತ್ತದೆಂದು ನುಡಿದಿರುತ್ತಾರೆ.

52) ಪ್ರಾ.ಸಾ.4 ರವರು ಮುಂದುವರೆದು ಹೇಳುತ್ತಾ, ಸಾಮಾನ್ಯವಾಗಿ ಕಡತಗಳನ್ನು ಏಳು ದಿನಗಳ ವರೆಗೆ ಕಾರ್ಯದರ್ಶಿಯವರು ಇಟ್ಟುಕೊಂಡು ಪರಿಶೀಲಿಸಿ ಆಯುಕ್ತರ ಆದೇಶಕ್ಕಾಗಿ ಕಳುಹಿಸಿ ಕೊಡಬೇಕಾಗುತ್ತದೆಂದು, ಆದರೆ ಈ ವಿಚಾರಣೆಗೆ ಸಂಬಂಧಪಟ್ಟಂತೆ ನಾಗೇಂದ್ರರವರ ಕಡತವು ದಿನಾಂಕ: 02.04.2014ರಂದು ಆಪಾದಿತೆಯವರಿಗೆ ಉಪಕಾರ್ಯದರ್ಶಿ–1 ರವರಿಂದ ಬಂದಿದ್ದು, ಈ ಕಡತದಲ್ಲಿ ಆಪಾದಿತೆಯು ಯಾವುದೇ ಕ್ರಮವನ್ನು ಜರುಗಿಸದೆ ಇಟ್ಟುಕೊಂಡಿದ್ದು ತಿಳಿದು ಬಂತೆಂದು, ಅಲ್ಲದೇ ಪಾರ್ವತಮ್ಮನವರಿಗೆ ಸಂಬಂಧಿಸಿದ ಕಡತವು ದಿನಾಂಕ: 04.04.2014ರಂದು ಉಪಕಾರ್ಯದರ್ಶಿ–1 ರವರಿಂದ ಆಪಾದಿತೆಯು ಸ್ವೀಕರಿಸಿದ್ದು, ಆ ಪ್ರಕರಣದಲ್ಲಿ ದಿನಾಂಕ: 24.04.2014ರಂದು ಆಪಾದಿತೆಯು ಅನುಮೋದನೆಗೆ ಸಲ್ಲಿಸಿದೆ ಎಂದು ಸಹಿ ಮಾಡಿರುವುದು ಕಂಡು ಬಂತೆಂದು ನುಡಿದಿರುತ್ತಾರೆ. ಈ ಮೇಲಿನ ಎರಡು ಕಡತಗಳು ಆಪಾದಿತೆಯವರು ತಮ್ಮ ಬಳಿ ಕ್ರಮವಾಗಿ 23 ಹಾಗೂ 21 ದಿನಗಳು ಇಟ್ಟುಕೊಂಡಿರುವುದು ಪರಿಶೀಲನಾ ಸಮಯ ಅಂದರೆ ದಿನಾಂಕ:25.04.2014ರಂದು ತನಗೆ ತಿಳಿದು ಬಂತೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.

53) ಪ್ರಾ.ಸಾ.4 ರವರು ಮುಂದುವರೆದು ಹೇಳುತ್ತಾ, ತನಿಖಾಧಿಕಾರಿಯವರಿಗೆ ತಾವು ಸಹಕರಿಸಿದ ಬಗ್ಗೆ **ಹಾಗೂ ಆಪಾದಿತೆಯ ಸ್ವರವನ್ನು ಗುರುತಿಸಿ ಈ** ಎರಡು ಕಡತಗಳ ಬಗ್ಗೆ ತನಿಖಾಧಿಕಾರಿಯವರು ಕೇಳಿದ ವಿವರಗಳನ್ನೊಳಗೊಂಡ ವರದಿಯನ್ನು ತಾನು ಅದೇ ದಿನ ಸಲ್ಲಿಸಿದ್ದೇನೆಂದು, ಸದರಿ ವರದಿಯನ್ನು

**ನಿ.ಪಿ.12ರ** ಪುಟ 329 ಹಾಗೂ 330ರಲ್ಲಿರುತ್ತದೆಂದು, ಆ ವರದಿಯನ್ನು ನಿ.ಪಿ.12(ಎ) ಎಂದು ಗುರುತಿಸಿಕೊಂಡಿರುತ್ತಾರೆ.

54) ಈ ಪ್ರಕರಣದ ಸಾಕ್ಷ್ಯವನ್ನು ಪರಿಶೀಲಿಸಿದರೆ, ಈ ಪ್ರಕರಣದಲ್ಲಿ ಶ್ರೀಮತಿ ಪಾರ್ವತಮ್ಮ ಇವರಿಗೆ ಉಲ್ಲಾಳು ಗ್ರಾಮದ ಸರ್ವೆ ನಂ. 163/6 ಹಾಗೂ 118/1 ರಲ್ಲಿ 0.25 ಗುಂಟೆ ಜಮೀನು ಇದ್ದು ಇದನ್ನು ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ ನಿರ್ಮಾಣಕ್ಕಾಗಿ 2000-02ರಲ್ಲಿ ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆಂದು ಇದಕ್ಕೆ ಪ್ರೋತ್ಸಾಹದಾಯಕ ಯೋಜನೆಯನ್ವಯ ನಿವೇಶನಕ್ಕೆ ಇವರು ಅರ್ಹರಿದ್ದು ಇದನ್ನು ನೀಡಬೇಕಾಗಿತ್ತೆಂದು ಹಾಗೂ ಶ್ರೀ ನಾಗೇಂದ್ರ ಎನ್ನುವವರಿಗೆ ಸಹ ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನೀಡಬೇಕಾಗಿದ್ದು ಈ ಕಡತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿದ್ದು ಈ ಕಡತಗಳಿಗೆ ಸಂಬಂಧಿಸಿದಂತೆ ವಿಚಾರಿಸಲು ಅಧಿಕಾರ ಪತ್ರವನ್ನು ನಾಗೇಂದ್ರರವರು ದಿ: 16.1.2014 ರಂದು ಹಾಗೂ ದಿ: 17.1.2014ರಂದು ಶ್ರೀಮತಿ ಪಾರ್ವತಮ್ಮ ರವರು ದೂರುದಾರರಿಗೆ ನೀಡಿದ್ದು, ದೂರುದಾರರು ಈ ದಾಖಲೆಗಳನ್ನು ನಿ.ಪಿ.2 ಮತ್ತು 3 ಎಂದು ನಿಶಾನಿಸಿದ್ದು, ಕಂಡುಬರುತ್ತದೆ.

55) ದೂರುದಾರರ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿದರೆ ಸದರಿ ನಾಗೇಂದ್ರ ಮತ್ತು ಪಾರ್ವತಮ್ಮರವರ ಕಡತಗಳು ಬಿಡಿಎ ಕಾರ್ಯದರ್ಶಿ ಅಂದರೆ ಆಪಾದಿತೆಯ ಬಳಿ ಈ ಕಡತಗಳು ಏಪ್ರಿಲ್ ಮೊದಲ ವಾರದಲ್ಲಿ ಬಂದಿತ್ತೆಂದು ಹೇಳಿರುತ್ತಾರೆ. ಈ ಎರಡೂ ಕತಡಗಳು ಆಪಾದಿತೆಯ ಬಳಿ ಏಪ್ರಿಲ್ 2014 ರಲ್ಲಿ ಇದ್ದವೆಂಬುದಕ್ಕೆ ಸಂಬಂಧಿಸಿದಂತೆ, ಆಪಾದಿತೆಯ ಮೇಲಾಧಿಕಾರಿಯಾದ ಅಂದಿನ ಬಿಡಿಎ ಆಯುಕ್ತರಾದ ಪ್ರಾಸಾ.4 ಶ್ರೀ ಶಾಮ್ ಭಟ್‌ರವರು ತಮ್ಮ ಸಾಕ್ಷ್ಯದ ಕಂಡಿಕೆ 3 ರಲ್ಲಿ ಈ ಕೆಳಗಿನಂತೆ ನುಡಿದಿರುತ್ತಾರೆ:

> "ಸಾಮಾನ್ಯವಾಗಿ ಕಡತಗಳನ್ನು ಏಳು ದಿನಗಳ ವರೆಗೆ ಕಾರ್ಯದರ್ಶಿಯವರು ಇಟ್ಟುಕೊಂಡು ಪರಿಶೀಲಿಸಿ ಆಯುಕ್ತರ ಆದೇಶಕ್ಕಾಗಿ ಕಳುಹಿಸಿಕೊಡಬೇಕಾಗುತ್ತದೆ. ಆದರೆ ಈ ವಿಚಾರಣೆಗೆ ಸಂಬಂಧಪಟ್ಟಂತೆ ನಾಗೇಂದ್ರರವರಿಗೆ ಸಂಬಂಧಿಸಿದ ಕಡತವು ದಿನಾಂಕ: 02.04.2014ರಂದು ಡಿ.ಜಿ.ಓರವರಿಗೆ ಉಪಕಾರ್ಯದರ್ಶಿ-1ರವರಿಂದ ಬಂದಿದ್ದು, ಆ ಕಡತದಲ್ಲಿ ಡಿ.ಜಿ.ಓರವರು ಯಾವುದೇ ಕ್ರಮವನ್ನು ಜರುಗಿಸದೆ ಇಟ್ಟುಕೊಂಡಿದ್ದು ತಿಳಿದು ಬಂತು. ಅಲ್ಲದೇ ಪಾರ್ವತಮ್ಮನವರಿಗೆ ಸಂಬಂಧಿಸಿದ ಕಡತವು ದಿನಾಂಕ: 04.04.2014ರಂದು ಉಪಕಾರ್ಯದರ್ಶಿ-1 ರವರಿಂದ ಡಿ.ಜಿ.ಓರವರು ಸ್ವೀಕರಿಸಿದ್ದು, ಆ ಪ್ರಕರಣದಲ್ಲಿ ದಿನಾಂಕ: 24.04.2014ರಂದು ಡಿ.ಜಿ.ಓರವರು ಅನುಮೋದನೆಗೆ ಸಲ್ಲಿಸಿದೆ ಎಂದು ಸಹಿ ಮಾಡಿರುವುದು ಕಂಡು ಬಂತು. ಈ ಮೇಲಿನ ಎರಡು

ಕಡತಗಳು ಡಿ.ಜಿ.ಓರವರು ತಮ್ಮ ಬಳಿ ಕ್ರಮವಾಗಿ 23 ಹಾಗೂ 21ದಿನಗಳು ಇಟ್ಟುಕೊಂಡಿರುವುದು ಪರಿಶೀಲನ ಸಮಯ ಅಂದರೆ ದಿನಾಂಕ:25.04.2014ರಂದು ನನಗೆ ತಿಳಿದು ಬಂತು."

56) ಆಪಾದಿತೆಯ ಬಳಿ ಈ ಎರಡೂ ಕಡತಗಳು ಅಂದರೆ ಶ್ರೀ ನಾಗೇಂದ್ರರವರಿಗೆ ಹಾಗೂ ಪಾರ್ವತಮ್ಮರವರಿಗೆ ಸಂಬಂಧಿಸಿದ ಕಡತಗಳು ಉಪ ಕಾರ್ಯದರ್ಶಿ 1 ರವರಿಂದ ಕ್ರಮವಾಗಿ ದಿ:2.4.2014 ಮತ್ತು 4.4.2014 ರಂದು ಬಂದಿರುವುದು ಹಾಗೂ ಈ ಕಡತಗಳು ಇವರಲ್ಲಿಯೇ ಇದ್ದುದನ್ನು ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹಾಗೂ ಪ್ರಾ.ಸಾ. 4 – ಆಪಾದಿತೆಯ ಮೇಲಾಧಿಕಾರಿಯವರು ತಮ್ಮ ಸಾಕ್ಷ್ಯದಲ್ಲಿ ನಿರ್ದಿಷ್ಟವಾಗಿಯೇ ಹೇಳಿರುತ್ತಾರೆ.

57) ಈ ಕಡತಗಳಿಗೆ ಸಂಬಂಧಪಟ್ಟಂತೆಯೇ ದೂರುದಾರರು ಅಪಾದಿತೆಯನ್ನು ತಾವು ದೂರು ಸಲ್ಲಿಸುವುದಕ್ಕೆ 4 ದಿನ ಮುಂಚಿತವಾಗಿ ಭೇಟಿ **ಮಾಡಿದ್ದರೆಂದು ಕಡತಗಳಿಗೆ ಸಂಬಂಧಪಟ್ಟಂತೆ ತಾವು ಆಪಾದಿತೆಯಲ್ಲಿ, ವಿಚಾರಿಸಿದಾಗ, ಅವರು ನಾಗೇಂದ್ರರವರ ಹಾಗೂ ಪಾರ್ವತಮ್ಮನವರ ಕಡತವನ್ನು ಮೇಲಾಧಿಕಾರಿಗಳಿಗೆ ಕಳುಹಿಸಲು ಲಂಚದ ಹಣಕ್ಕೆ ಬೇಡಿಕೆ ಇಟ್ಟರೆಂದು ತಾವು ಆಪಾದಿತೆಗೆ ಹಣ ಕೊಡಲು ಇಷ್ಟವಿಲ್ಲದ ಕಾರಣ, ಆಪಾದಿತೆಯು ಹಣ ಕೇಳುತ್ತಿರುವ ಸಂಗತಿಯನ್ನು ನಾಗೇಂದ್ರ ಮತ್ತು ಪಾರ್ವತಮ್ಮರವರಿಗೆ ತಿಳಿಸಿದೆನೆಂದು ಅವರಿಗೆ ಹಣ ಕೊಡಲು ಇಷ್ಟವಿಲ್ಲದ ಕಾರಣ** ಪೋಲೀಸರಿಗೆ ದೂರು ಕೊಡುವಂತೆ ತಿಳಿಸಿದರೆಂದು ನುಡಿದಿರುತ್ತಾರೆ.

58) ಇವರ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿದರೆ, ಇವರು ದಿ: 25.4.2014 ರಂದು ತಾವು ಬೆಂಗಳೂರು ಲೋಕಾಯುಕ್ತ ಪೊಲೀಸಿನವರಿಗೆ ದೂರು ಸಲ್ಲಿಸಿದ್ದನೆಂದು ತನ್ನ ಮತ್ತು ಆಪಾದಿತೆಯ ನಡುವ ನಡೆದ ಸಂಭಾಷಣೆಯನ್ನು ತನ್ನ ಮೊಬೈಲನಲ್ಲಿ ಧ್ವನಿಮುದ್ರಿಸಿಕೊಂಡಿದ್ದು ಇದರ ಸಿ.ಡಿ ಯನ್ನು ತನ್ನ ದೂರಿನ ಜೊತೆ ಲಗತ್ತಿಸಿ ಕೊಟ್ಟಿರುತ್ತೇನೆಂದು ನುಡಿದಿರುವುದು ಕಂಡುಬರುತ್ತದೆ. ಹಾಗೂ ಈ ಸಿ.ಡಿ.ಯನ್ನು ಅಪಾದಿತೆ ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯ ಸಿ.ಡಿ.ಯನ್ನು ಲಿಪಿಕರೀಸಿದ್ದು, ಆ ಧ್ವನಿ ಮುದ್ರಣದ ಅಂಶಗಳನ್ನು ನಿ.ಪಿ. 8 ಎಂದು ಹಾಗೂ ಪ್ರಾ.ಸಾ.2 ಪಂಚಸಾಕ್ಷಿರವರ ಸಹಿಯನ್ನು ನಿ.ಪಿ.8–ಎ, ಬಿ, ಸಿ ಎಂದು ಗುರುತಿಸಿಕೊಂಡಿರುತ್ತಾರೆ.

59) ಈ ಸಿ.ಡಿ.ಯಲ್ಲಿರುವ ಧ್ವನಿಯು ಆಪಾದಿತೆಗೆ ಸಂಬಂಧಪಟ್ಟಿದ್ದು ಎನ್ನುವುದಕ್ಕೆ ಇವರ ಮೇಲಾಧಿಕಾರಿಯವರಾದ ಪ್ರಾ.ಸಾ.4 – ಶ್ರೀ ಶ್ಯಾಮ್‌ಭಟ್ ರವರನ್ನು ವಿಚಾರಣೆ ಮಾಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಈ ಸಿ.ಡಿ.ಯಲ್ಲಿರುವ ಸಂಭಾಷಣೆಯನ್ನು ತಾವು ಆಲಿಸಿದ ನಂತರ ಸದರಿ ಸಿ.ಡಿ.ಯಲ್ಲಿರುವ ಸ್ವರವು ಡಿಜಿಓರವರದ್ದೆಂದು ತಾನು ಗುರುತಿಸಿರುತ್ತೇನೆಂದು ಹಾಗೂ ತನಿಖಾಧಿಕಾರಿಯವರಿಗೆ ಈ ಬಗ್ಗೆ ಅಂದರೆ ಡಿಜಿಓರವರು ಸ್ವರ ಗುರುತಿಸಿದ ಬಗ್ಗೆ ಮತ್ತು ಈ ಎರಡು ಕಡತಗಳ ಬಗ್ಗೆ ವಿವರಗಳನ್ನೊಳಗೊಂಡ ವರದಿಯನ್ನು ತಾನು ಅದೇ ದಿನ ಎಂದರೆ, 25.4.2014 ರಂದೇ ಸಲ್ಲಿಸಿದ್ದೇನೆಂದು ನುಡಿದಿರುವುದು ಕಂಡುಬರುತ್ತದೆ.

60) ಪ್ರಾ.ಸಾ.4 ರವರು ತಮ್ಮ ಪಾಟೀ ಸವಾಲಿನಲ್ಲಿ ಸಹ ಆಪಾದಿತೆಯವರ ಸ್ವರವನ್ನು ಸಿ.ಡಿ.ಯಲ್ಲಿದ್ದ ಸಂಭಾಷಣೆಯಿಂದ ಗುರುತಿಸಿದ್ದರಿಂದಲೇ ನಿ.ಪಿ.12–**A** ಎಂದು ಗುರುತಿಸಿರುವ ವರದಿಯನ್ನು ತಾನು ನೀಡಿರುತ್ತೇನೆಂದು ನುಡಿದಿರುತ್ತಾರೆ. ಇವರು ತಮ್ಮ ಪಾಟೀ ಸವಾಲಿನಲ್ಲಿ ತನಗೆ ಅಲ್ಪಸ್ವಲ್ಪ ತೆಲುಗು ಭಾಷೆ ಅರ್ಥವಾಗುತ್ತದೆಂದು ಹಾಗೂ ತನಿಖಾಧಿಕಾರಿಯವರು ತನಗೆ ಸಿ.ಡಿ.ಯಲ್ಲಿದ್ದ ಸಂಭಾಷಣೆಯನ್ನು 5–07 ನಿಮಿಷಗಳ ಕಾಲ ಕೇಳಿಸಿದ್ದರೆಂದು ನುಡಿದಿರುತ್ತಾರೆ.

61) ಸದರಿ ಸಂಭಾಷಣೆಯ ಭಾಗವನ್ನು ನಿ.ಪಿ.4 ಪ್ರಾಯೋಗಿಕ ಪಂಚನಾಮೆಯಲ್ಲಿ ಅಡಕಗೊಳಿಸಿದ್ದು ಇದನ್ನು ಪ್ರತ್ಯೇಕವಾಗಿ ಸಹ ಈ ಧ್ವನಿ ಮುದ್ರಣದ ಭಾಗವನ್ನು ನಿ.ಪಿ.8 ಎಂದು ಗುರುತಿಸಿಕೊಂಡಿರುತ್ತಾರೆ. ದೂರುದಾರರು ಮತ್ತು ಆಪಾದಿತೆಯ ನಡುವೆ ನಡೆದಿರುವ ಸಂಭಾಷಣೆಯ ಕೆಲವು ಭಾಗಗಳು ಈ ಕೆಳಗಿನಂತಿರುತ್ತವೆ:

"ಆಪಾದಿತೆ: ಯಾವುದು ಇದು ಎಲ್ಲಿದು ಇದು
ಫಿರ್ಯಾದಿ: ಹು ಅದು ಒಂಚೂರು ನೋಡಿಬಿಟ್ಟು
ಆಪಾದಿತೆ: ಎಲ್ಲಿಂದ ಎಲ್ಲಿಗೆ ಈಗ
ಫಿರ್ಯಾದಿ: ಮೇಡಂ ಇದು ರೋಡ್‌ಗೆ ಹೋಗಿರೋದು ಮೇಡಂ
ಆಪಾದಿತೆ: ರೋಡ್‌ಗೆ ಹೋಗಿರೋದು ನೀವು ಮೊನ್ನೆ ಹೇಳಿದ್ರಲ್ಲಾ
ಫಿರ್ಯಾದಿ: ಹು ಅದೆ ಸ್ವಲ್ಪ ನೋಡಿ ಬಿಟ್ಟು
ಆಪಾದಿತೆ: . . . . .
ವ್ಯಕ್ತಿ: . . . . . . .
ಫಿರ್ಯಾದಿ: ಒಂದು ಚೂರು ಓದಿ ಬಿಡಿ ಮೇಡಂ . . . . . .
ಆಪಾದಿತೆ: ನಾನು ಓತ್ತೀನಿ ಅದೆ
ಫಿರ್ಯಾದಿ : ಆಮೇಲೆ

ವ್ಯಕ್ತಿ:
ಫಿರ್ಯಾದಿ: ಅದಕ್ಕೆ ಮೇಡಂ ಓದ್ಲಿ ಅಯ್ಯೋ ಅವ್ರಿಗೆ ಸಬ್ಜೆಕ್ಟ ಅಥ ಆಗಬೇಕಲ್ಲ
ಆಪಾದಿತೆ: ಮುಫತ್ತಾಗಿ ಕೊಡಲು ಅಂತ ಬರೀತಾರ ಮುಫತ್ತಾಗಿ ನಾ
ಫಿರ್ಯಾದಿ ಊ ಮೇಡಂ 50ಪರ್ಸೆಂಟ್ ಮುಫತ್ತಾಗಿ ಉಳಿದ ಹೆಚ್ಚುವರಿಯನ್ನ
ಆಪಾದಿತೆ: ಎಷ್ಟು ಸೈಟು ಒಂದು ಎರಡು ಮೂರು ನಾಲ್ಕು. . . . . .
ಫಿರ್ಯಾದಿ: ಉಳಿದಿರೋದು ಫೈನಾನ್ಸ್ ಡಿಪಾರ್ಟ್‌ಮೆಂಟು ಮಾರ್ಜಿನ್ ಲ್ಯಾಂಡ್ ಅದೇನು ಮಾಡ್ತಿರೋ ಮಾಡ್ಲಿ ...... ಅದಕ್ಕೆ ಮೇಡಂ ಓದ್ಲೆ ಆಮೇಲೆ ಹೇಳನ ಗಡಿಬಿಡಿ ಮಾಡಿ ನಂ ಮೇಡಂ ಬೇಜಾರು ..
ವ್ಯಕ್ತಿ: ಗಡಿಬಿಡಿ ಏನೂ ಬೇಜಾರು ಮಾಡಿಕೊಳಲ್ಲ ಬಿಡಿ . .
ಫಿರ್ಯಾದಿ : ಒಂದು ದಿನದ್ದು ಅಲ್ಲ ಸಾರ್ ಕಂಟಿನ್ಯೂ ಆಗಿ ಇರಬೇಕಲ್ಲ ಸಾರ್ ರಿಲೇಷನ್ನು ಒಂದು ದಿನಕ್ಕೆ ಮುಗಿದು ಹೋಗದಾ ಏನು ಮೇಡಂ
ಆಪಾದಿತೆ: . . . . . .
ಫಿರ್ಯಾದಿ: ಮೇಡಂ ಟ್ವೆಂಟಿ ಥರ್ಟಿ ಮೇಡಂ ಅವ್ರಿಗೆ ಎಲಿಜಬಿಲಿಟಿ ಇರೋದು ಫಾರ್ಟಿ ಸಿಕ್ಸ್ಟಿ ಅವ್ರು ಏನು ಹೋನ್ ಮೇಡಂ . . . . . .
ಫಿರ್ಯಾದಿ: ಮೇಡಂ ಟ್ವೆಂಟಿ ಥರ್ಟಿ ಮೇಡಂ ಅವ್ರಿಗೆ ಎಲಿಜಬಲಿಟಿ ಇರೋದು ಫಾರ್ಟಿ ಸಿಕ್ಸ್ಟಿ ಅವ್ರು ಏನು ಹೋನ್ ಮೇಡಂ ಅವ್ರು ಏನು ಮಾಡೌವ್ರೆ ಟ್ವೆಂಟಿ ಥರ್ಟಿ ಹಾಕ್ಕೊಂಡು ಬಿಟ್ಟೌವ್ರೆ ಟ್ವೆಂಟಿ ಥರ್ಟಿ ಮೇಡಂ
ಆಪಾದಿತೆ: . . ..

ಫಿರ್ಯಾದಿ: ನೀವೇ ಹೇಳಬೇಕು ಮೇಡಂ

ಆಪಾದಿತೆ: . . ..

ಫಿರ್ಯಾದಿ: ಇಲ್ಲ ನೀವೇ ಹೇಳಿ ಮೇಡಂ

ಆಪಾದಿತೆ: . . ..
ಫಿರ್ಯಾದಿ: ಹೂ ಮೇಡಂ ಕೋರಮಂಗಲ ಇದೆ ಇದು ಮಾಡನ ಹೆಚ್ಚು ಕಮ್ಮಿ ಅದೇ ರೇಟಿಗೆ ಬಂದ್ವಲ್ಲ ನೀವೇ ಹೇಳಿ
ಆಪಾದಿತೆ: ಅಲ್ಲಾ ನನಗೆ ಗೊತ್ತಿಲ್ಲ ನೀವೇ

ಫಿರ್ಯಾದಿ: ನೀವು ನಿಮಗೆ ಎಲ್ಲಾ ಮೇಡಂ ಅರೆದು ಕುಡಿದಾಕಿ ಬಿಟ್ಟಿದ್ದೀರಾ ಈಗ

ವ್ಯಕ್ತಿ: . . . ಆಯ್ತು

ಫಿರ್ಯಾದಿ: ಇಲ್ಲ ನೀವೇ ಹೇಳಿ ಆಮೇಲೆ ನಾನು ಹೇಳ್ತೀನಿ

ಆಪಾದಿತೆ: ನಿಮಗೆ ಏನು ಅಂತ ಹೇಳಿದ್ರು

ಫಿರ್ಯಾದಿ: ಮೇಡಂ ಇಲ್ಲ ಮೇಡಂ ನಾನು ನಿಮ್ಮ ಗಮನಕ್ಕೆ ಹಾಕಿಬಿಡ್ತೀನಿ ಆಮೇಕೆ ನಾನು ಹೇಳ್ತೀನಿ ನೀವು ಹೇಳಿ ದೇವ್ರಾಣೆ ಆಮೇಲೆ ಹೇಳ್ತೀನಿ ನಾನು ಹೇಳಿ ಆಮೇಲೆ ಕೋರಮಂಗಲದ್ದು ಹೆಚ್ಚು ಕಮ್ಮಿ ಬರಲಿಲ್ವ ಮೇಡಂ ಅಷ್ಟು ದೊಡ್ಡ ಅಮೌಂಟ್

**ಆಪಾದಿತೆ: ಟೆನ್ . .**

**ಫಿರ್ಯಾದಿ: ಮೇಡಂ ಹತ್ತು ಲಕ್ಷ ಜಾಸ್ತಿ ಆಗ್‌ತದೆ**

ಆಪಾದಿತೆ: ಅದಕ್ಕೆ ನೀವೇ ಹೇಳಿ

ಫಿರ್ಯಾದಿ: ಹ ಹ ಹ

ವ್ಯಕ್ತಿ: ಹ ಹ ಹ ಹ

ಆಪಾದಿತೆ: ಹ ಹ ಹ ಹ ನಿಮಗೆ ಗೊತ್ತಲ್ವ

ಫಿರ್ಯಾದಿ: ಮೇಡಂ ಈಗ **ಒಂದು ಮೇಡಂ ಅದರಲ್ಲೂ ಜಾಸ್ತಿ ಇದರಲ್ಲಿ ಒಂದು ನಾಲ್ಕು ಲಕ್ಷ .**

**ಆಪಾದಿತೆ: ನೀವು ಇದರಲ್ಲಿ ನಂಗೆ ಏನು ಹೇಳಿದ್ರಿ ನೀವು ಇದರಲ್ಲಿ ಕಡಿಮೆ ಮಾಡಿ ಕೊಳ್ಳಿ ಅದರಲ್ಲಿ ಜಾಸ್ತಿ . . .**

ಫಿರ್ಯಾದಿ: ಆ ಮೇಡಂ ಮೇಡಂ ಈಗ ಇದು ಜಾಸ್ತಿ ಕೊಡ್ತೀನಿ ಆ ಪಾರ್ವತಮ್ಮ ಇಂಟೆಟೀವ್ ಮೇಡಂ ಆಯಮ್ಮ ಪಾಪ ಬಂಡ ಹಾಕ್ತಾವ್ರೆ

ಆಪಾದಿತೆ: . . .

ಫಿರ್ಯಾದಿ: ಅಲ್ಲ ರೆಡಿ ಮಾಡ್ಸಿದ್ದೀನಿ **ಮೇಡಂ ಎರಡು ಲಕ್ಷ ದುಬಾರಿ ಆಗ್‌ತೈತೆ ಕಡಿಮೆ ಮಾಡಿಕೊಳ್ರಿ ಅಂದ್ರು ಅದೊಂದು ಚೂರು ಅದೊಂದು ರೇಟ್ ಹೇಳಿ ಇದನ್ನ ಬೇಕಾದ್ರೆ ನಿಮ್ಮ ಒದರ ಪ್ರಕಾರ**

**ಆಪಾದಿತೆ: ಅದೇನು ಎಲ್ಲಿಂದ ಎಲ್ಲಿಗೆ ಅದು**

ಫಿರ್ಯಾದಿ: ಮೇಡಂ ಮೊನ್ನೆ ಇಂಟೆಂಟೀವ್ ಮೂರಕ್ಕೆ ಮಾಡಿ ಕೊಟ್ಟಿದ್ದೀರಾ ನನಗೆ ಗೊತ್ತು ನಾಲಕ್ಕು ಸೈಟು ಮೂರೂ ವರೆ ಮೂರು

ಆಪಾದಿತೆ: ಇಂಗೆ ನಿಂಮ್ ಥರ **ಒಬ್ಬೊಬ್ರು ಒಂದೊಂದು ಏನೋ ಒಂದು ರೀತಿ ಕೇಳ್ಕೋತಾರೆ** ಅವಾಗ ಸ್ವಲ್ಪ

ಫಿರ್ಯಾದಿ: ಅವ್ರುದು ಒಂದು ಸ್ವಲ್ಪ ಕಡಿಮೆ ಮಾಡಿಕೊಳ್ರೀ ಮೇಡಂ ಪಾರ್ವತಮ್ಮ ಎಷ್ಟು ಈಸ್ಕತರ್ಲಿ ಮೇಡಂ ಅವ್ರಿಗೆ ಹೇಳಬೇಕು ನಾನು ಯಾಕೆಂದ್ರೆ ಮದ್ವೆ

ಆಪಾದಿತೆ: **ಈಗ ಅದರಲ್ಲಿ ಎಲ್ಲಿಂದ ಎಲ್ಲಿಗೆ ಕೇಳ್ತಾ ಇದ್ದಾರೆ**

ಫಿರ್ಯಾದಿ: ಮೇಡಂ ಅದೇನೆ ಉಳ್ಳಾಲ ಕಳ್ಕೊಂಡಿರದು ಅವ್ರು

ಆಪಾದಿತೆ: ಜ್ಞಾನ ಭಾರತಿ

ಫಿರ್ಯಾದಿ: ವಿಶ್ವೇಶ್ವರಯ್ಯ ಲೇಔಟ್‌ಗೆ ಕಳ್ಕೊಂಡಿರದು ಅವ್ರು ಅದೇ ಲೇಔಟ್‌ನಲ್ಲೇ ಸೈಟು ಕೊಡ್ತಾ ಇರೋದು

ಆಪಾದಿತೆ: **ನೀವು ಅದರಲ್ಲಿ ಇಷ್ಟ ಬಂದಷ್ಟು ಕೊಡಿ**

ಫಿರ್ಯಾದಿ: ಅಲ್ಲಾ ಮೇಡಂ **ನೀವು ಎರಡು ಕೇಳಿ ಇಷ್ಟ ಬಂದಷ್ಟು ಅಂತ ನೀವು ಹೇಳಿ ಮೇಡಂ** ನಾನು ಅವ್ರಿಗೆ ಹೇಳಬೇಕಲ್ಲ

ಆಪಾದಿತೆ: ನಿಮಗೆ ನಿಮಗೆ **ಅವ್ರು ಎಷ್ಟು ಕೊಡಕ್ಕೆ ಆಗತ್ತೆ ನಾನು ಹೇಳೋದು ಅಲ್ಲ ಅವ್ರು ಎಷ್ಟು ಕೊಡೋಕೆ ಆಗುತ್ತೆ,**

ಫಿರ್ಯಾದಿ: ಮೇಡಂ ಅವ್ರು ಐವತ್ತು ಸಾವಿರ ಹೇಳುದ್ರು ಐವತ್ತು ಎಲ್ಲ ಆಗಲ್ಲ ಈಗೆಲ್ಲ ರೇಟ್ ಬೆಳೆದೈತೆ ಅಂತ ಅಂದೆ ಹೇಳಿ

ಆಪಾದಿತೆ: . . . . **ಒಂದು**

ಫಿರ್ಯಾದಿ: **ಒಂದು ಲಕ್ಷ ಕೊಡ್ತೀನಿ ಬಿಡಿ ಇದುರ್ದು**

ಆಪಾದಿತೆ: ನೀವೇ ಹೇಳಿದ್ರಲ್ಲ

ಫಿರ್ಯಾದಿ: ಪಾರ್ವತಮ್ಮನದು ಒಂದು ಲಕ್ಷ ನೀವು ಹೇಳಿದ ಪ್ರಕಾರನೇ ಆಗ್ಲಿ

ವ್ಯಕ್ತಿ: ಕಡಿಮೆ ಮಾಡಬೇಡ ಅಂತ ಹೇಳಿದ್ರಲ್ಲ

ಆಪಾದಿತೆ: ಹ ಹ ಹ ಹ

ಫಿರ್ಯಾದಿ: ಹ ಹ ಹ ಹ

ಆಪಾದಿತೆ: **ನೀವು ಹೇಳಿದ್ದೇ ನಿಮಗೆ ಹೇಳ್ತಾ ಇರೋದು**

ಫಿರ್ಯಾದಿ: ಮೇಡಂ ಇದೊಂದು ಐದುಕ್ಕೆ ಮಾಡಿಕೊಳ್ಳಿ ಮೇಡಂ . . ಮೇಡಂ 50% ಎಲಿಜಬಲ್ ಮೇಡಂ ಮೊನ್ನೇನು ನನಗೆ ಗೊತ್ತು ಕೋರಮಂಗಲ ಎರಡು ಜಾಸ್ತೀನೇ ಆಯ್ತು ಮೇಡಂ

ಆಪಾದಿತೆ: **ನೀವು ಏನೋ ಒಂಚೂರು ಮಾಡಿದ್ರೆ ನಮಗೂ ಒಂದು ಸ್ವಲ್ಪ**

ಫಿರ್ಯಾದಿ: ನಾನು ಎಂದಾನ ಮೇಡಂ

ಆಪಾದಿತೆ: ಇಲ್ಲಾ ಯಾವತ್ತೂ ಕೇಳಿಲ್ಲ ನೀವು

ಫಿರ್ಯಾದಿ: ಬಾರ್ಗೇನ್

ಆಪಾದಿತೆ: ನೋಡಿ ನೀವು

ಫಿರ್ಯಾದಿ: ಮೇಡಂ ಪಾರ್ಟಿಗಳು ಒಂದೇ ಥರ ಇರಲ್ಲ ಅಲ್ವ

ಆಪಾದಿತೆ: ಅದೇ ನಾನು ಹೇಳಿದ್ದು ಆಗ್ಲೇ ನೀವು ಮೂರು ಅಂದ್ರೆ ಅವ್ರು ಏನೋ ಕಷ್ಟ ಸುಖ ಹೇಳ್ಕೋತಾರೆ ಆಗ ನಾವು ಗೆರೆ ಇಟ್ಟಂಗೆ ಮಾತಡಕ್ಕೆ ಆಗಲ್ಲ

ಫಿರ್ಯಾದಿ: . . ಮೇಡಂ ಈಗ ಒಂದು ದಿನದ್ದು ಅಲ್ವಲ್ಲ ಕಂಟಿನ್ಯೂ

ಆಪಾದಿತೆ: ನೀವು ಇದಾಗಿ ಒಂದು ಏನೋ ಹೇಳ್ತೀರಿ . . . ನಾವು ಆವಾಗ ಪಾಪ ನಿಮಗೆ ಒಂದು ಅನುಕೂಲ ಆಗುತ್ತೆ ನೀವು ಓಡಾಡಿ

ಫಿರ್ಯಾದಿ: ಸರಿ ಮೇಡಂ ಅದೆ ಅದೇ

ಆಪಾದಿತೆ: ಇಲ್ಲಾಂದ್ರೆ

ಫಿರ್ಯಾದಿ: ಮೇಡಂ ನಮಗೆ ಓಡಾಡೊ ಫೀಸ್ ಅಷ್ಟೇ ಮೇಡಂ ಇನ್ನೇನು ಇಲ್ಲ ಮೇಡಂ ಇದು ಆರಕ್ಕೆ ಆಕ್ಕಳಿ ಮೇಡಂ

ಆಪಾದಿತೆ: ಆಯ್ತು ಆಯ್ತು

ವ್ಯಕ್ತಿ: ಆಯ್ತು

ಫಿರ್ಯಾದಿ: **ರೆಕಮೆಂಡ್**

ಆಪಾದಿತೆ: **ಆಯ್ತು ಅಂತ ಹೇಳಿದ್ನಲ್ಲ**

ಫಿರ್ಯಾದಿ: ಮೇಡಂ ಪಾರ್ವತಮ್ಮಂದು

ಆಪಾದಿತೆ: ಆಯ್ತು ಆಯ್ತು

ಫಿರ್ಯಾದಿ: **ನಾಳೆ ನಾಡಿದ್ದು ಇದು ಮಾಡ್ತೀನಿ ಒಂದು ಲಕ್ಷ**

ಆಪಾದಿತೆ: **ಸರಿ**

ಫಿರ್ಯಾದಿ: ಸರೋಯ್ತಲ್ಲಣ್ಣ ಅಲ್ಲಿದೆ ಇದುರ್ದು ಆರು ಅದುರ್ದು ಒಂದು ಏಳು ಲಕ್ಷ ಕೊಟ್ಟು ಬಟ್ರೆ ಎರಡೂ .... ಅದು ಅಂಗೇ ಮಾಡಿಕೊಂಡು . . . ನಿಮ್ಮ ಗಮನಕ್ಕೆ ಇರ್ಲಿ ನೀವು ಇದ್ದಿದ್ದೂ ಒಳ್ಳೇದಾಯ್ತು ಈಗ

ವ್ಯಕ್ತಿ: ಏನು ಒಳ್ಳೇದಾಯ್ತು

ಫಿರ್ಯಾದಿ: ನೀವು ಇದ್ದಿದ್ದು ಸ್ವಲ್ಪ ಅನುಕೂಲ ಆಯ್ತು ಈಗ

ವ್ಯಕ್ತಿ: ಇವತ್ತೇ . . .

ಫಿರ್ಯಾದಿ: ಇಲ್ಲ ಅಟ್‌ಲೀಸ್ಟ್ ಓ ಅಬ್ಬ ಅಬ್ಬಾ ಮೇಡಂ ಅದು ಎಷ್ಟು ದಿನ ತಗೊಂಡ್ರು ಮೇಡಂ ಏನು ಮೇಡಂ ಅನುರಾಧ ಬಾಯಿದು

ಆಪಾದಿತೆ: ಹು

ಫಿರ್ಯಾದಿ: ಹೆಚ್ಚೇ ಕಡಿಮೆ ಇಪ್ಪತ್ತೈದು ದಿನ ಒಂದು ತಿಂಗಳು ತಗೊಂಡ್ವು ಅಷ್ಟು ಬೇಗ ಏನು ಉದುರಿ ಬಿಡುತ್ತಾ ಏನು

ಆಪಾದಿತೆ: ಇದು ನಾನು ಸೈನ್ ಮಾಡಿದ್ದೀನಿ

ಫಿರ್ಯಾದಿ: ಹೂ ಮೇಡಂ

ಆಪಾದಿತೆ: ಇದು ಯಾವಾಗ ಮಾಡ್ತೀರಿ

ಫಿರ್ಯಾದಿ: ಇದು ನಾಳೆ ನಾಡಿದ್ದು ಮಾಡ್ತೀನಿ ನಾಳೆ ಅಥವಾ ನಾಡಿದ್ದು ಈಗ ಎಲೆಕ್ಷನ್ ಬೇರೆ ಆ ಪಾರ್ವತಮ್ಮ ಪಾರ್ವತಮ್ಮ ಮನೆಲಿ ಮದುವೆ ಇತ್ತು ಅವ್ರ ಮನೆಗೆ

62) ಮೇಲಿನ ಸಂಭಾಷಣೆ ಸಿ.ಡಿ.ಯನ್ನು ದೂರುದಾರರು ತಮ್ಮ ದೂರಿನ ಜೊತೆ ನೀಡಿದ್ದೇವೆಂದು ಫಿರ್ಯಾದಿಯಲ್ಲಿ ನಮೂದಿಸಿರುತ್ತಾರೆ. ಈ ಸಿ.ಡಿ.ಯಲ್ಲಿದ್ದ ಸಂಭಾಷಣೆಯನ್ನು ಸಹ ಪಂಚಸಾಕ್ಷಿ ಪಿಡಬ್ಲ್ಯು-2 ಶ್ರೀನಿವಾಸ್ ರವರಿಗೆ ಮತ್ತು ಶ್ರೀಮತಿ ಪ್ರಮೀಳಾ ರವರಿಗೆ ಕೇಳಿಸಿರುತ್ತಾರೆಂದು ನಮೂದು ಇರುತ್ತದೆ. ಹಾಗೂ ಪಂಚಸಾಕ್ಷಿ-2- ಶ್ರೀನಿವಾಸ್ ರವರು ತಮ್ಮ ಸಾಕ್ಷ್ಯದಲ್ಲಿ ದೂರುದಾರರಾದ ಶ್ರೀ ಬಸವರಾಜುರವರು ತಮ್ಮ ಮೊಬೈಲ್‌ನಲ್ಲಿ ರಿಕಾರ್ಡ ಮಾಡಿದ್ದ ಸಂಭಾಷಣೆಯ ಸಿಡಿಯನ್ನು ಕೊಟ್ಟಿದ್ದು, ಇದನ್ನು ಲ್ಯಾಪ್‌ಟಾಪ್‌ಗೆ ಹಾಕಿ ಕೇಳಿಸಿರುತ್ತಾರೆಂದು ಹಾಗೂ ಇದರಲ್ಲಿ ಇನ್ನೊಂದು ಸಿಡಿಯನ್ನು ಸಹ ಕಾಪಿ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಮುಂದುವರೆದು ಹೇಳುತ್ತಾ, ಸಂಭಾಷಣೆಯ ಲಿಪಿಕರಣವನ್ನು ಮಾಡಿರುತ್ತಾರೆಂದು ಇದನ್ನು ನಿ.ಪಿ.8 ಎಂದು ನಮೂದಿಸಿದ್ದು ಇದರಲ್ಲಿ ತಮ್ಮ ಸಹಿಯನ್ನು ನಿ.ಪಿ.8-ಎ ಎಂದು ಸಹ ಗುರುತಿಸಿಕೊಂಡಿರುತ್ತಾರೆ.

63) ದಿನಾಂಕ 25.04.2014 ರಂದು ದೂರುದಾರರು ಪ್ರಾ.ಸಾ.3 ರವರಿಗೆ ನಿ.ಪಿ.1 ರಂತೆ ಲಿಖಿತ ದೂರನ್ನು ನೀಡಿದ್ದು, ಆಪಾದಿತೆ ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿದ್ದೇನೆಂದು ಅದರ ಸಿ.ಡಿ.ಯನ್ನು ದೂರಿನ ಜೊತೆ ಲಗತ್ತಿಸಿರುತ್ತೇನೆಂದು ನಿ.ಪಿ.1 ದೂರಿನಲ್ಲಿ ದೂರುದಾರರು ನಮೂದಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಸಂಗತಿಯನ್ನು ನಮೂದಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಾ.ಸಾ.2 ಶ್ರೀನಿವಾಸ್-ಪಂಚಸಾಕ್ಷಿ ಮತ್ತು ಇನ್ನೊಬ್ಬ ಪಂಚಸಾಕ್ಷಿ-ಶ್ರೀಮತಿ ಪ್ರಮೀಳಾ ಇವರ ಸಮಕ್ಷಮ ತನಿಖಾಧಿಕಾರಿಯವರಾದ ಶ್ರೀ ಎಂ.ನಾರಾಯಣ್‌ರವರು ಪ್ರಾಯೋಗಿಕ ಪಂಚನಾಮೆಯನ್ನು ಮಾಡಿದ್ದು, ಸದರಿ ದಾಖಲೆಯನ್ನು ನಿ.ಪಿ.4 ಎಂದು ಗುರುತಿಸಿಕೊಂಡಿರುತ್ತಾರೆ.

64) ದೂರುದಾರರು ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ರೂ.7.00 ಲಕ್ಷ ರೂಪಾಯಿಗಳನ್ನು ಅಂದರೆ 1000/-ರೂಗಳ 700 ರೂಪಾಯಿಗಳನ್ನು ಹಾಜರುಪಡಿಸಿದ ಬಗ್ಗೆ ಹಾಗೂ ಇವುಗಳಿಗೆ ಫಿನಾಪ್ತಲೀನ್ ಸವರಿ ರೂ.5.00 ಲಕ್ಷ ಮತ್ತು ರೂ.2.00 ಲಕ್ಷರೂಗಳನ್ನು ಬೇರೆ ಬೇರೆ ಲಕೋಟೆಯಲ್ಲಿ ಹಾಕಿ ಇವುಗಳನ್ನು ಪ್ರಾ.ಸಾ.2 ಶ್ರೀನಿವಾಸ್ ಇವರು ದೂರುದಾರರಿಗೆ ನೀಡಿರುತ್ತೇನೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದು ಕಂಡುಬರುತ್ತದೆ. ಹಾಗೂ ತನಿಖಾಧಿಕಾರಿಯು ದೂರುದಾರರಿಗೆ ಆಪಾದಿತೆಯ ಕೊಠಡಿಗೆ ದೂರುದಾರರು ಹೋಗುವಾಗ ವಾಯ್ಸ್ ರಿಕಾರ್ಡರನ್ನು ಆನ್ ಮಾಡಿಕೊಳ್ಳುವಂತೆ ಹಾಗೂ ಆಪಾದಿತೆ ಹಣ ಕೇಳಿದರೆ ಮಾತ್ರ ಕೊಡುವಂತೆ ತಿಳಿಸಿದ್ದರೆನ್ನುವ ಸಂಗತಿಯನ್ನು ಪ್ರಾ.ಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ದೂರುದಾರರ ಜೊತೆ ಪ್ರಾ.ಸಾ.2 ಪಂಚಸಾಕ್ಷಿಯು ಹೋದರೆ ಆಕೆಗೆ ಅನುಮಾನ ಬರಬಹುದೆಂದು ಪ್ರಾ.ಸಾ.2 ರವರನ್ನು ಕೊಠಡಿಯ ಹೊರಗಡೆ ನಿಂತು ಗಮನಿಸುವಂತೆ ತಿಳಿಸಿದ್ದು ಈ ಎಲ್ಲಾ ಸಂಗತಿಯನ್ನು ಮಹಜರು ನಿ.ಪಿ. 2ರಲ್ಲಿ ನಮೂದಿಸಿರುತ್ತಾರೆ ಹಾಗೂ ಪ್ರಾ.ಸಾ.2 ರವರು ತಮ್ಮ ಸಾಕ್ಷ್ಯದಲ್ಲಿಯು ನುಡಿದಿರುತ್ತಾರೆ. ಇದಲ್ಲದೇ, ದೂರುದಾರರು ಆಪಾದಿತೆಯ ಕೊಠಡಿಯೊಳಗೆ ಹೋದಾಗ ಅವರು ಹಣ ಪಡೆದುಕೊಂಡಾಗ , ಹೊರಗಡೆ ಬಂದು ತಮ್ಮ ಮುಖವನ್ನು ಕರ್ಚಿಫ್‌ನಿಂದ ಒರೆಸಿಕೊಳ್ಳುವಂತೆ ತಿಳಿಸಿದ್ದರಿಂದ , ಅದೇ ರೀತಿ ದೂರುದಾರರು ಆಪಾದಿತೆಯ ಕೊಠಡಿಯ ಒಳಗಡೆ ಹೋದರೆಂದು, ತಾನು ಹೊರಗಡೆ ನಿಂತಿದ್ದೆನೆಂದು ಸುಮಾರು 6.00 ಗಂಟೆಗೆ ದೂರುದಾರರಾದ ಬಸವರಾಜುರವರು ಆಪಾದಿತೆಯ ಕೊಠಡಿಯಿಂದ ಹೊರಗಡೆ ಬಂದು ಕರ್ಚಿಫ್‌ನಿಂದ ಮುಖವನ್ನು ಒರೆಸಿಕೊಂಡರೆಂದು ತಾವುಗಳು ಆಪಾದಿತೆಯ ಕೊಠಡಿಯೊಳಗೆ ಹೋದೆವೆಂದು ಅಲ್ಲಿ ಆಪಾದಿತೆಯು ಕುಳಿತಿದ್ದು ಆಪಾದಿತೆಯ ಎದುರುಗಡೆ ದೂರುದಾರ-ಬಸವರಾಜುರವರನ್ನು ತನಿಖಾಧಿಕಾರಿ ಏನು ನಡೆಯಿತೆಂದು ಕೇಳಿದಾಗ ಬಸವರಾಜುರವರು ತಾನು ಆಪಾದಿತೆಯ ಕೊಠಡಿಯೊಳಗೆ ಹೋದೆನೆಂದು ಅಲ್ಲಿ ಆಪಾದಿತೆಗೆ ತಾನು ತಂದಿದ್ದ ಹಣದ ಲಕೋಟೆಗಳನ್ನು ನೀವು ಹೇಳಿದಂತೆಯೇ ತಂದಿದ್ದೇನೆಂದು ಆಪಾದಿತೆಗೆ ಹೇಳಿ ಹಣದ ಲಕೋಟೆಗಳನ್ನು ಕೊಟ್ಟೆನೆಂದು ತಮ್ಮಗಳ ಎದುರು ದೂರುದಾರರಾದ ಬಸವರಾಜುರವರು ಹೇಳಿದರೆಂದು ಪ್ರಾ.ಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಮತ್ತು ಹಣದ ಲಕೋಟೆಗಳನ್ನು

ಆಪಾದಿತೆಯು ತಮ್ಮ ಟೇಬಲ್ ಡ್ರಾದಲ್ಲಿ ಇಟ್ಟುಕೊಂಡರೆಂದು ನಂತರ ಆಪಾದಿತೆ ಎರಡು ಕಡತಗಳಿಗೆ ಸಹಿ ಮಾಡಿದರೆಂದು, ಒಂದು ಕಡತಕ್ಕೆ ಟಿಪ್ಪಣಿ ಸಹ ಬರೆದರೆಂದು, ನಂತರ ತಾವು ಆಪಾದಿತೆಯ ಕೊಠಡಿಯ ಹೊರಗಡೆ ಬಂದು ಕರ್ಚಿಫ್‌ನಿಂದ ಮುಖವನ್ನು ಒರೆಸಿಕೊಂಡೆನೆಂದು ದೂರುದಾರರು-ಬಸವರಾಜುರವರು ಹೇಳಿದರೆಂದು ಪ್ರಾ.ಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಹಾಗೂ ಟೇಬಲ್ ಡ್ರಾ ನಲ್ಲಿದ್ದ ಒಟ್ಟು 7.00 ಲಕ್ಷರೂಗಳನ್ನು ತನಿಖಾಧಿಕಾರಿಯು ಅಮಾನತ್ತು ಮಾಡಿಕೊಂಡರೆಂದು ನುಡಿದಿರುವುದು ಕಂಡುಬರುತ್ತದೆ.

65) ಇದಲ್ಲದೆ, ಪ್ರಾ.ಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಪೊಲೀಸ್ ಸಿಬ್ಬಂದಿಯವರು ಸಿದ್ಧಪಡಿಸಿದರೆಂದು ಇದನ್ನು 2 ಬೌಲುಗಳಲ್ಲಿ ಹಾಕಿದ್ದು, ಒಂದರಲ್ಲಿ ಆಪಾದಿತೆಯ ಬಲಗೈಯನ್ನು ಅದ್ದಿಸಿದ್ದು, ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಇದನ್ನು ಸೀಸೆಗೆ ಹಾಕಿ ಸೀಲು ಮಾಡಿದರೆಂದು ನುಡಿದಿರುವುದು ಕಂಡುಬರುತ್ತದೆ.

66) ಇವರ ಸಾಕ್ಷ್ಯಕ್ಕೆ **ಪೂರಕವಾಗಿ ಆಪಾದಿತೆಯವರು ದಿ: 25.4.2014 ರಂದು** ನೀಡಿರುವ ನಿ.ಪಿ.13 ಪ್ರಕಾರ ಸಮಜಾಯಿಷಿಯನ್ನು ಪರಿಶೀಲಿಸಿದರೆ, ಇವರು ತಮ್ಮ ಸಮಜಾಯಿಷಿಯಲ್ಲಿ ಶ್ರೀ ಬಸವರಾಜು ಎಂಬುವರು ತಮ್ಮ ಕೊಠಡಿಗೆ ಬಂದಿದ್ದರೆನ್ನುವುದನ್ನು ಒಪ್ಪಿಕೊಳ್ಳುತ್ತಾರೆ ಹಾಗೂ ಅವರು ಶುಕ್ರವಾರ ಮಹಾಲಕ್ಷ್ಮೀ ಎಂದು ಹೇಳಿ ಸಹಿ ತೆಗೆದುಕೊಳ್ಳಬೇಕೆಂದು **ಒಂದು ಪ್ಯಾಕೇಟ್ ರೀತಿಯ ಪೊಟ್ಟಣ ಕೊಟ್ಟರೆಂದು ಅದರೊಂದಿಗೆ ಸಣ್ಣ ಕವರ್ ರೀತಿಯಲ್ಲಿ ಇತ್ತೆಂದು ಹೇಳಿರುತ್ತಾರೆ. ---ಪರಿಚಿತವಾದ ವ್ಯಕ್ತಿಯಾಗಿದ್ದರಿಂದ ಪೊಟ್ಟಣ ತೆಗೆದುಕೊಂಡು ನೋಡಿದೆನೆಂದು ನಮೂದಿಸಿರುತ್ತಾರೆ.**

67) ಆಪಾದಿತೆಯ ಕೊಠಡಿಗೆ ದೂರುದಾರರು ಹೋಗಿದ್ದ ಬಗ್ಗೆ ಹಾಗೂ ಫಿನಾಪ್ತಲೀನ್ **ಸವರಿದ್ದ ಲಕೋಟೆಗಳನ್ನು ಆಪಾದಿತೆಗೆ ನೀಡಿದ್ದ ಬಗ್ಗೆ ಹಾಗೂ ಆಪಾದಿತೆ ಅವುಗಳನ್ನು ತನ್ನ ಕೈಯಿಂದ ಮುಟ್ಟಿದ ಬಗ್ಗೆ, ಆಪಾದಿತೆಯವರು ನೀಡಿರುವ ನಿ.ಪಿ.13ರ ಅವರ ಸಮಜಾಯಿಷಿಯಿಂದ ತಿಳಿದು ಬರುತ್ತದೆ.**

68) **ಈ ಸಮಜಾಯಿಷಿಯಲ್ಲಿ ಆಪಾದಿತೆಯು ದೂರುದಾರ ಶ್ರೀ ಬಸವರಾಜುರವರೇ ಈ ಪ್ಯಾಕೇಟ್‌ಗಳನ್ನು ಅಂದರೆ ಲಕೋಟೆಗಳನ್ನು ಕೊಟ್ಟರೆಂದು ಹೇಳಿದ್ದು, ಇವರ ಸಮಜಾಯಿಷಿಯಲ್ಲಿ** ಎಲ್ಲಿಯೂ ದೂರುದಾರರು ಸೃಷ್ಟಿ ಮಾಡಿ ಹೇಳಿರುವ ಶೀನ @ ಶ್ರೀನಿವಾಸ ಈ ಲಕೋಟೆಯನ್ನು ನೀಡಿದರು ಎಂದೇನೂ ಇರುವುದಿಲ್ಲ. ದೂರುದಾರರು ಕೆಲವು ಅಂಶಗಳನ್ನು ಆಪಾದಿತೆಗೆ ಸಹಾಯ ಮಾಡಲು ತಿರುಚಿ ಹೇಳಿರುತ್ತಾರೆಂದು ಹಾಗೂ ಗೊತ್ತಿಲ್ಲವೆಂಬಂತೆ ಸಾಕ್ಷ್ಯದಲ್ಲಿ ಹೇಳಿರುವುದು ದೂರನ್ನು ಪರಿಶೀಲಿಸಿದರೆ ಕಂಡುಬರುತ್ತದೆ. ಅಂದರೆ, ಶೀನ @ ಶ್ರೀನಿವಾಸ ದೂರು ಕೊಡುವಾಗ ತನ್ನ ಜೊತೆ ಬಂದಿದ್ದರೆಂದು ಹಾಗೂ ಆತ ಸಹ ಆಪಾದಿತೆಯ ಜೊತೆ ತನ್ನ ಎದುರು ಮಾತನಾಡಿದನೆಂದು ಹಾಗೂ ದಿ: 25.4.2014 ರಂದು ತಾನು ಮತ್ತು ಶೀನ @ ಶ್ರೀನಿವಾಸ ಆಪಾದಿತೆಯ ಕೊಠಡಿಗೆ ಹೋಗಿದ್ದೆವೆಂದು ತಾನು ಆಪಾದಿತೆಯ ಎದುರಿಗೆ ರೂ.7,00,000/-ಗಳನ್ನು ಶೀನ @ ಶ್ರೀನಿವಾಸ ಇವರಿಗೆ ಕೊಟ್ಟಿರುತ್ತೇನೆಂದು , ಆತ ಆಪಾದಿತೆಯು ಹೇಳಿದಂತೆ ಈ ಹಣವನ್ನು ಆಕೆಯ ಡ್ರಾನಲ್ಲಿ ಇಟ್ಟಿರುತ್ತೇನೆಂದು ಹೇಳಿದನೆಂದು ದೂರುದಾರರು ತಮ್ಮ ಸಾಕ್ಷ್ಯದಲ್ಲಿ ನುಡಿದಿದ್ದು ಈ ಸಾಕ್ಷಿಯನ್ನು ಮಂಡನಾಧಿಕಾರಿಯು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಿಚಾರಣೆ ಮಾಡಿದಾಗ ಈ ರೀತಿ ನುಡಿದಿರುತ್ತಾರೆ. ಇದರಿಂದ ಈ ದೂರುದಾರರು ಆಪಾದಿತೆಗೆ ಸಹಾಯ ಮಾಡುವುದಕ್ಕಾಗಿ ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ದೂರಿನಲ್ಲಿ ಇಲ್ಲದಿರುವ ಹಾಗೂ ತಮ್ಮ ಹೇಳಿಕೆಯಲ್ಲಿ ಇಲ್ಲದಿರುವ ಸಂಗತಿಗಳನ್ನು ನುಡಿದಿರುವುದು ಕಂಡುಬರುತ್ತದೆ. ಹಾಗೂ ಪ್ರಾ.ಸಾ.2 (ಪಂಚಸಾಕ್ಷಿ) ಶ್ರೀನಿವಾಸ್ ರವರು ತಮ್ಮ ಸಾಕ್ಷ್ಯದಲ್ಲಿ ಎಲ್ಲಿಯೂ ಅಂದರೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಾಗಲೀ ನಂತರ ದೂರುದಾರರು ಆಪಾದಿತೆಯ ಕೊಠಡಿಯ ಒಳಗೆ ಹೋಗುವ ಸಮಯದಲ್ಲಾಗಲೀ ಸದರಿ ಶೀನ @ ಶ್ರೀನಿವಾಸ ಇದ್ದರೆಂದು ಹೇಳಿರುವುದಿಲ್ಲ. ದೂರುದಾರರೇ ತಮ್ಮ ನಿ.ಪಿ.1 ದೂರಿನಲ್ಲಿ ಸದರಿ ಶೀನ @ ಶ್ರೀನಿವಾಸ ಬಗ್ಗೆ ಏನನ್ನು ಹೇಳಿಲ್ಲ. ಇವುಗಳನ್ನು ಪರಿಶೀಲಿಸಿದರೆ, ಆಪಾದಿತೆಯು ತಮ್ಮ ಸಮಜಾಯಿಷಿಯಲ್ಲಿ ಹೇಳಿರುವಂತೆ ದೂರುದಾರರು ದಿ: 25.4.2014ರಂದು ಆಪಾದಿತೆಗೆ ಕೇಳಿದ್ದ ಲಂಚದ ಹಣವನ್ನು ನೀಡಿರುವ ಬಗ್ಗೆ ಹಾಗೂ ಇದನ್ನು ಆಪಾದಿತೆಯು ತನ್ನ ಕೈಯಿಂದಲೇ ಪಡೆದುಕೊಂಡಿದ್ದಾರೆನ್ನುವ ಬಗ್ಗೆ ಈ ಅಂಶಗಳು ಪೂರಕವಾಗಿಯೇ ಇರುತ್ತದೆ. ಇದಲ್ಲದೇ, ಆಪಾದಿತೆಯು

ನಿ.ಪಿ.13ರ ತಮ್ಮ ಸಮಜಾಯಿಷಿಯಲ್ಲಿ ಹೇಳಿರುವಂತೆ ಶ್ರೀ ಬಸವರಾಜು ಎಂಬುವರು ಬಂದ ಕೂಡಲೇ ತಮ್ಮ ಯೋಗಕ್ಷೇಮ ವಿಚಾರಿಸಿದರು. ಹಾಗೂ ಕಳೆದ ವಾರ ನಿಮ್ಮಿಂದ ಉಪಕಾರವಾಗಿದೆ, ಆದ್ದರಿಂದ ಸಿಹಿ ತೆಗೆದುಕೊಳ್ಳಬೇಕೆಂದು ಕೋರಿದರು. ಹಾಗೂ ಶುಕ್ರವಾರ ಒಳ್ಳೆಯದು ತಾವು ಮಹಾಲಕ್ಷ್ಮೀ ಇದ್ದಂತೆ ತೆಗೆದುಕೊಳ್ಳಬೇಕೆಂದು ಸದರಿ ವ್ಯಕ್ತಿ ಕೇಳಿದರು. "ಆಗಾಗ್ಗೆ ಕಛೇರಿಗೆ ಬಂದು ಹೋಗುತ್ತಿದ್ದ ಕಾರಣ" ಈ ಅಂಶಗಳನ್ನು ಹಾಗೂ ಆಪಾದಿತೆಯ ಸಮಜಾಯಿಷಿಯಲ್ಲಿ ನಮೂದಿಸಿರುವ ಇತರ ಅಂಶಗಳನ್ನು ಪರಿಶೀಲಿಸಿದಾಗ ದಿ: 25.4.2014 ರಂದು ಆಪಾದಿತೆ ಮತ್ತು ದೂರುದಾರರ ನಡುವೆ ಸಂಭಾಷಣೆ ನಡೆದಿರುವುದು ಕಂಡುಬರುತ್ತದೆ. ಹಾಗೂ ಈ ಸಂಭಾಷಣೆಯನ್ನು ಲೋಕಾಯುಕ್ತ ಸಿಬ್ಬಂದಿ ಲಿಪಿಕರಣ ಮಾಡಿರುತ್ತಾರೆಂದು ಪ್ರಾ.ಸಾ.2 ಪಂಚಸಾಕ್ಷಿ ಪ್ರಾಸಾ.3 ತನಿಖಾಧಿಕಾರಿಯು ತಮ್ಮ ಸಾಕ್ಷ್ಯದಲ್ಲಿನುಡಿದಿರುತ್ತಾರೆ. ಮೇಲಾಗಿ ದೂರುದಾರರು ಆಪಾದಿತೆಗೆ ಹಣ ಕೊಡುವಾಗ ದಾಖಲು ಮಾಡಿಕೊಂಡಿದ್ದ ಸಂಭಾಷಣೆ ಸಿ.ಡಿ.ಯನ್ನು ಬಿಡಿಎ ಆಯುಕ್ತರು–ಪಿಡಬ್ಲ್ಯು–4 ಇವರಿಗೆ ಕೇಳಿಸಿರುತ್ತಾರೆಂದು, ಪಿಡಬ್ಲ್ಯು–2 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದು ಕಂಡುಬರುತ್ತದೆ, ಇದಲ್ಲದೆ ಆಪಾದಿತೆಯ ಮೇಲಾಧಿಕಾರಿಯಾದ ಪ್ರಾ.ಸಾ.4 ಆಯುಕ್ತರು, ಬಿಡಿಎ ಇವರು ಈ ಸಿ.ಡಿ.ಯನ್ನು ಕೇಳಿಸಿಕೊಂಡನೆಂದು **ಅದರಲ್ಲಿರುವ ಧ್ವನಿಯ ಆಪಾದಿತೆಯೆಂದು ಗುರುತಿಸಿದೆನೆಂದು ಮತ್ತು ಆ ಸಂಭಾಷಣೆಯಲ್ಲಿ ಆಪಾದಿತೆಯು ಲಂಚದ ಹಣವನ್ನು ಸ್ವೀಕರಿಸಿರುವುದು ತಿಳಿದುಬಂದಿರುತ್ತದೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ.** ಪ್ರಾ.ಸಾ.4 ರವರು ತಮ್ಮ ಸಾಕ್ಷ್ಯದಲ್ಲಿ ದೂರುದಾರರು ದೂರಿನ ಜೊತೆ ನೀಡಿದ್ದ ಸಿ.ಡಿಯನ್ನು ಸಹ ತನಗೆ 25.4.2014 ರಂದು ಪೊಲೀಸರು ಕೇಳಿಸಿದ್ದರೆಂದು ತಾವು ಈ ಸಂಭಾಷಣೆಯನ್ನು ಸಹ ಆಲಿಸಿದ್ದು ಇದರಲ್ಲಿ ಆಪಾದಿತೆಯು ನಾಗೇಂದ್ರರವರ ಪ್ರಕರಣಕ್ಕೆ 10,00,000/– ಮತ್ತು ಪಾರ್ವತಮ್ಮನವರ ಪ್ರಕರಣಕ್ಕೆ ರೂ.2,00,000/– ಲಂಚದ ಹಣ ಬೇಡಿಕೆ ಇಟ್ಟಿದ್ದು ಎರಡೂ ಪ್ರಕರಣಕ್ಕೆ ಸೇರಿ ನಾಗೇಂದ್ರರವರ ಪ್ರಕರಣದಲ್ಲಿ ರೂ.6,00,000/– ಮತ್ತು ಪಾರ್ವತಮ್ಮನವರ ಪ್ರಕರಣದಲ್ಲಿ 1,00,000/– ನೀಡುವ ಬಗ್ಗೆ ಮಾತುಕತೆ ಆಗಿರುವ ಸಂಭಾಷಣೆ ಸಿ.ಡಿ.ಯನ್ನು ಕೇಳಿಸಿರುತ್ತಾರೆಂದು ಪ್ರಾ.ಸಾ.4 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಹಾಗೂ ಪ್ರಾ.ಸಾ–4 25.4.2014 ರಂದು ಈ ಬಗ್ಗೆ ವರದಿ

ನೀಡಿರುತ್ತೇನೆಂದು ನುಡಿದಿದ್ದು, ಇವರು ನೀಡಿರುವ ವರದಿಯನ್ನು ನಿ.ಪಿ.12–A ಎಂದು ಗುರುತಿಸಿಕೊಂಡಿದ್ದು, ಅದು ಈ ಕೆಳಗಿನಂತಿರುತ್ತದೆ:

" ಸದರಿ ಫಿರ್ಯಾದಿಯಾದ ಶ್ರೀ ಬಸವರಾಜುರವರಿಂದ ನಾಗೇಂದ್ರರವರ ಪ್ರಕರಣಕ್ಕೆ 10 ಲಕ್ಷ ಪಾರ್ವತಮ್ಮರವರ ಪ್ರಕರಣಕ್ಕೆ 2 ಲಕ್ಷಕ್ಕೆ ಒತ್ತಾಯಿಸಿದ್ದು 2 ಪ್ರಕರಣದಿಂದಲೂ ಅಂದರೆ ನಾಗೇಂದ್ರ ರವರ ಪ್ರಕರಣಕ್ಕೆ 6 ಲಕ್ಷ ಪಾರ್ವತಮ್ಮರವರ ಪ್ರಕರಣಕ್ಕೆ 1 ಲಕ್ಷ ನೀಡಿರುವ ಬಗ್ಗೆ ನಾಗೇಂದ್ರರವರ ಪ್ರಕರಣಕ್ಕೆ 6 ಲಕ್ಷ ಪಾರ್ವತಮ್ಮರವರ ಪ್ರಕರಣಕ್ಕೆ 1 ಲಕ್ಷ ನೀಡಿರುವ ಬಗ್ಗೆ ಮಾತನಾಡಿ 7 ಲಕ್ಷ ಮಾತುಕತೆಯಾಗಿರುವ ಸಂಭಾಷಣೆಯನ್ನು ಫಿರ್ಯಾಧಿಯು , ಫಿರ್ಯಾದಿ ನೀಡುವ ಸಮಯದಲ್ಲಿ ಸಿ.ಡಿ. ಯೊಂದಿಗೆ ನೀಡಿದ್ದು ಸದರಿ ಸಿ.ಡಿ.ಯನ್ನು ನನಗೆ ಈ ದಿನ ಆಲಿಸಲಾಗಿ ಸದರಿ ಸಿಡಿ ಯಲ್ಲಿನ ಸಂಭಾಷಣೆಯಲ್ಲಿ ಆರೋಪಿತರು ಫಿರ್ಯಾದಿಯಿಂದ 7 ಲಕ್ಷದ ಹಣವನ್ನು ಒತ್ತಾಯಿಸಿರುವ ಬಗ್ಗೆ ಅಲ್ಲದೆ ದಿ: 25.4.2014ರಂದು ಫಿರ್ಯಾದುದಾರರು ಆರೋಪಿತರಿಗೆ ಲಂಚದ ಹಣವನ್ನು ನೀಡಲು ಹೋದಾಗ ಅವರಿಬ್ಬರ ನಡುವೆ ನಡೆದಿರುವ ಸಂಭಾಷಣೆಯನ್ನು ಡಿಜಿಟಲ್‌ವಾಯ್ಸ್ ರೆಕಾರ್ಡರಲ್ಲಿ ರೆಕಾರ್ಡಿಂಗ್ ಮಾಡಿದ್ದು ಸದರಿ ರೆಕಾರ್ಡಿಂಗನ್ನು ಲ್ಯಾಪ್ ಟಾಪ್ ಮೂಲಕ ಆಲಿಸಿ ಕೇಳಿಸಿದ್ದು ಸದರಿ ಸಮಯದಲ್ಲಿ ಆರೋಪಿತರು ಫಿರ್ಯಾದಿಯಿಂದ ಲಂಚದ ಹಣವನ್ನು ಸ್ವೀಕರಿಸಿರುವುದು ಸಂಭಾಷಣೆಯಿಂದ ದೃಡಪಡುತ್ತದೆ.

ತನ್ನ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜಮ್ಮ ಚೌಡರೆಡ್ಡಿರವರು 9739908118 ನ್ನು ಉಪಯೋಗಿಸುತ್ತಿರುತ್ತಾರೆ.

ಸದರಿ ಪ್ರಕರಣದ ಸಂಬಂಧ ಕಡತಗಳನ್ನು ಪರಿಶೀಲಿಸಲಾಗಿ ನಾಗೇಂದ್ರರವರಿಗೆ ಸಂಬಂಧಿಸಿದ ಕಡತವು ದಿ ;2.4.2014 ರಂದು ಡಿ.ಎಸ್.–1 ರವರಿಂದ ಮುಂದಿನ ಕ್ರಮದ ಸಲುವಾಗಿ ಕಡತವನ್ನು ಕಾರ್ಯದರ್ಶಿಯವರಿಗೆ ನೀಡಿದ್ದು ಸದರಿಯವರು ಯಾವುದೇ ಕ್ರಮವನ್ನು ಜರುಗಿಸದೇ ತನ್ನ ಬಳಿ ಇಟ್ಟುಕೊಂಡು ಫಿರ್ಯಾದಿಯಿಂದ ಲಂಚದ ಹಣಕ್ಕಾಗಿ ಒತ್ತಾಯಿಸಿ ಈ ದಿನ ಫಿರ್ಯಾದಿಯು ಲಂಚದ ಹಣವನ್ನು ನೀಡಿದ ನಂತರ ಸದರಿ ಕಡತಕ್ಕೆ ಸಹಿ ಮಾಡಿರುವುದು ಕಂಡುಬಂದಿರುತ್ತದೆ.

ಅಲ್ಲದೆ ಶ್ರೀಮತಿ ಪಾರ್ವತಮ್ಮ ರವರ ಪ್ರಕರಣದಲ್ಲಿ ದಿ: 24.4.2014 ರಂದು ಸಹಿ ಮಾಡಿದ್ದು ಸದರಿ ಕಡತವನ್ನು ಡಿ.ಎಸ್.–1 ರವರಿಂದ ದಿ:4.4.14 ರಂದು ಸ್ವೀಕರಿಸಿದ್ದು ಸದರಿ ಪ್ರಕರಣದಲ್ಲೂ ಸಹ ಲಂಚದ ಹಣಕ್ಕಾಗಿ ಒತ್ತಾಯಿಸಿ ಫಿರ್ಯಾದಿಯಿಂದ ಲಂಚದ ಹಣವನ್ನು ಅಪೇಕ್ಷಿಸಿ ಯಾವುದೇ ಕ್ರಮವನ್ನು ಜರುಗಿಸದೇ ಬಾಕಿ ಇಟ್ಟುಕೊಂಡಿದ್ದು ಸದರಿ ಕಡತದ ಟಿಪ್ಪಣಿ ಹಾಳೆಯ ಕಂಡಿಕೆ 32 ರಲ್ಲಿ ಮಾಹಿತಿಯನ್ನು ಫಿರ್ಯಾದಿಗೆ ಆರೋಪಿತರು ತೋರಿಸಿದ್ದು, ಫಿರ್ಯಾದಿಯು ಅವರಿಗೆ ಮನವರಿಕೆ ಮಾಡಿಕೊಟ್ಟ ಮೇರೆಗೆ ಈ ದಿನ ಆರೋಪಿತರು "ಹಾಗೂ

ಅನುಮೋದನೆಗಾಗಿ ಸಲ್ಲಿಸಿದೆ ಎಂದು ಬರೆದು ದಿ: 24.4.2014 ಎಂದು ಸಹಿ ಮಾಡಿರುವುದು ಕಂಡುಬಂದಿರುತ್ತದೆ.

ಸದರಿ ಕಡತಗಳನ್ನು ನೋಡಲಾಗಿ ಸದರಿ ಕಡತದಲ್ಲಿ ಯಾವುದೇ ತಂಟೆ ತಕರಾರುಗಳು ಇಲ್ಲದೆ ಇರುವ ಕಾರಣ 7 ದಿನದೊಳಗೆ ಕಡತವನ್ನು ಮುಂದಿನ ಕ್ರಮದ ಸಲುವಾಗಿ ಆಯುಕ್ತರಾದ ನನಗೆ ಕಡತವನ್ನು ಕಳುಹಿಸುವುದು ವಾಡಿಕೆಯಾಗಿದ್ದು ಅವರು ಲಂಚದ ಹಣದ ಅಪೇಕ್ಷಿಸಿ ಸಂಬಂದ ತಮ್ಮಲ್ಲಿ ಕಡತವನ್ನು ವಿಲೇ ಇಟ್ಟಿರುವುದು ಕಂಡುಬಂದಿರುತ್ತೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

Commissioner,
Bangalore Development Authority,
Bangalore – 560 020"

69) ಪ್ರಾ.ಸಾ.4 ರವರು ಮೇಲೆ ನಮೂದಿಸಿರುವ ನಿ.ಪಿ.12–A ಗುರುತಿಸಿರುವ ವರದಿಯನ್ನು ತನ್ನ ಸಮಕ್ಷಮವೇ ತನಿಖಾಧಿಕಾರಿಯವರು ತಯಾರಿಸಿದ ನಂತರ ಅದರಲ್ಲಿರುವ ಎಲ್ಲಾ ಮಾಹಿತಿಯು ಸರಿಯಾಗಿರುತ್ತದೆಂದು ಓದಿ ತಿಳಿದುಕೊಂಡು ನಂತರ ಆ ವರದಿಗೆ ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ.

70) ಪ್ರಾ.ಸಾ.4 ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿದ್ದು, ಆಪಾದಿತೆ ಇಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಾ.ಸಾ. 4ರವರು ಮೇಲೆ ನಮೂದಿಸಿರುವ ತಮ್ಮ ವರದಿಯಲ್ಲಿ ಸ್ಪಷ್ಟವಾಗಿಯೇ ಈ ಕಡತಗಳನ್ನು ಆಪಾದಿತೆಯು ತಮ್ಮ ಬಳಿಯೇ ಇಟ್ಟುಕೊಂಡು ಫಿರ್ಯಾದಿಯಿಂದ ಲಂಚದ ಹಣಕ್ಕಾಗಿ ಒತ್ತಾಯಿಸಿ ಈ ದಿನ ಅಂದರೆ 25.4.2014 ರಂದು ಲಂಚದ ಹಣ ನೀಡಿದ ನಂತರ ಈ ಕಡತಗಳಿಗೆ ಸಹಿ ಮಾಡಿರುವುದು ಕಂಡುಬರುತ್ತದೆಂದು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ತಮ್ಮ ಮುಖ್ಯ ವಿಚಾರಣೆಯಲ್ಲಿಯೂ ಸಹ ಪ್ರಾ.ಸಾ.4 ರವರು– ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ನುಡಿದಿರುತ್ತಾರೆ.

71) ಆ.ಸ.ನೌ. ರವರು ತಮ್ಮ ಸಾಕ್ಷ್ಯದಲ್ಲಿ ಮುಖ್ಯವಾಗಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ ಎಸ್.ಐ.ಎಲ್. ಸಿ.ಸಿ. 345/2014 ರಲ್ಲಿ ವಿಶೇಷ ನ್ಯಾಯಾಲಯವು ತಮ್ಮನ್ನು ದೋಷಮುಕ್ತಗೊಳಿಸಿರುತ್ತದೆಂದು ಆದ್ದರಿಂದ ದೂರಿನ ಅಂಶಗಳು, ಈ

ದೂರಿನಲ್ಲಿರುವ ಆರೋಪಣೆಗಳು ರುಜುವಾತಾಗಿಲ್ಲವೆಂದು ಅಲ್ಲಿ ನಿಶಾನಿಸಿರುವ ದಾಖಲೆಗಳು ಹಾಗೂ ವಿಶೇಷ ನ್ಯಾಯಾಲಯದ ತೀರ್ಪಿನ ನಕಲು ಹಾಗೂ ಇಲ್ಲಿ ಸಾಕ್ಷ್ಯ ನುಡಿದಿರುವ ಪ್ರಾ.ಸಾ.1, 2, 3, ಮತ್ತು 4ರವರ ಸಾಕ್ಷ್ಯಗಳನ್ನು ನಿಶಾನಿಸಿಕೊಂಡಿರುತ್ತಾರೆ.

72) ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷ್ಯವನ್ನು ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪರಿಗಣಿಸಬೇಕಾದ ರೀತಿಗೂ ಇಲಾಖಾ ವಿಚಾರಣೆಯಲ್ಲಿ ಸಾಕ್ಷ್ಯವನ್ನು ಪರಿಗಣಿಸಬೇಕಾದ ರೀತಿಗೂ ವ್ಯತ್ಯಾಸವಿರುತ್ತದೆ. ಕ್ರಿಮಿನಲ್ ಮೊಕದ್ದಮೆಯಲ್ಲಿ ಕಟ್ಟುನಿಟ್ಟಾಗಿ ಸಾಕ್ಷ್ಯ ಅಧಿನಿಯಮದನ್ವಯ ಆರೋಪಣೆಯನ್ನು ರುಜುವಾತು ಮಾಡಬೇಕಾಗಿದ್ದು, ಸಂಶಯದ ಲಾಭ ಸಹ ಆರೋಪಿಗೆ ದೊರಕುತ್ತದೆ. ಹಾಗೂ ಆರೋಪಣೆಗಳನ್ನು ರುಜುವಾತು ಮಾಡುವ ಹೊಣೆಯು ಪೂರ್ಣವಾಗಿ ಅಭಿಯೋಜನೆಯ ಮೇಲೆ ಇರುತ್ತದೆ. ಇಲಾಖಾ ವಿಚಾರಣೆಯಲ್ಲಿ ಈ ರೀತಿಯಾಗಿ ಕಟ್ಟುನಿಟ್ಟಿನ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಸಾಕ್ಷ್ಯವನ್ನು ನೀಡಬೇಕೆಂದು ಹಾಗೂ ಸಂಶಯದ ಲಾಭ ನೀಡಬೇಕೆಂದೇನು ಇರುವುದಿಲ್ಲ. ಇಲ್ಲಿ ಸಂಭವನೀಯತೆಯ ಪ್ರಾಧಾನ್ಯತೆ ಇರುತ್ತದೆ(prepondarence of probability).

73) ಈ ಬಗ್ಗೆ ಘನ ಸರ್ವೋಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳಲ್ಲಿ ಕ್ರಿಮಿನಲ್ ಪ್ರಕರಣದಲ್ಲಿ ಹಾಗೂ ಇಲಾಖಾ ವಿಚಾರಣೆಯಲ್ಲಿ ಹೇಗೆ ಸಾಕ್ಷ್ಯವನ್ನು ಪರಿಗಣಿಸಬೇಕೆಂದು ಉಲ್ಲೇಖವಿರುತ್ತದೆ. ಇತ್ತೀಚಿನ ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಅಂದರೆ ಶಶಿಭೂಷಣ್ ಪ್ರಸಾದ್ VS Inspector General CISF (1-08-2019, **ಸಿವಿಲ್ ಅಪೀಲ್ ನಂ.7130/2009**) ಈ ತೀರ್ಪಿನಲ್ಲಿ ಈ ಕೆಳಗಿನಂತೆ ಉಲ್ಲೇಖವಿರುತ್ತದೆ:

> "18. The exposition has been further affirmed by a three Judge Bench of this Court in Ajit Kumar Nag Vs. General Manager (PJ), Indian Oil Corporation Limited, Haldia and Others 4, this Court held as under: "As far as acquittal of the appellant by a criminal court is concerned, in our opinion, the said order does not preclude the Corporation from taking an action if it is otherwise permissible. In our judgment, the law is fairly well settled. Acquittal by a criminal court would not debar an employer from exercising power in accordance with the Rules and Regulations in force. The two

proceedings, criminal and departmental, are entirely different. They operate in different fields and have different objectives. Whereas the object of criminal trial is to inflict appropriate punishment on the offender, the purpose of enquiry proceedings is to deal with the delinquent departmentally and to impose penalty in accordance with the service rules. In a criminal trial, incriminating statement made by the accused in certain circumstances or before certain officers is totally inadmissible in evidence. Such strict rules of evidence and procedure would not apply to departmental proceedings. The degree of proof which is necessary to order a conviction is different from the degree of proof necessary to record the commission of delinquency. The rule relating to appreciation of evidence in the two proceedings is also not similar. In criminal law, burden of proof is on the prosecution and unless the prosecution is able to prove the guilt of the accused "beyond reasonable doubt", he cannot be convicted by a court of law. In a departmental enquiry, on the other 4 2005(7) SCC 764 hand, penalty can be imposed on the delinquent officer on a finding recorded on the basis of "preponderance of probability". Acquittal of the appellant by a Judicial Magistrate, therefore, does not ipso facto absolve him from the liability under the disciplinary jurisdiction of the Corporation. We are, therefore, unable to uphold the contention of the appellant that since he was acquitted by a criminal court, the impugned order dismissing him from service deserves to be quashed and set aside." (Emphasis supplied)

19. We are in full agreement with the exposition of law laid down by this Court and it is fairly well settled that two proceedings criminal and departmental are entirely different. They operate in different fields and have different objectives. Whereas the object of criminal trial is to inflict appropriate punishment on an offender, the purpose of enquiry proceedings is to deal with the delinquent departmentally and to impose penalty in accordance with the service Rules. The degree of proof which is necessary to order a conviction is different from the degree of proof necessary to record the commission of delinquency. Even the rule relating to appreciation of evidence in the two proceedings is also not similar. In criminal law, burden of proof is on the prosecution and unless the prosecution is able to prove the guilt of the accused beyond reasonable doubt, he cannot be convicted by a Court of law whereas in the departmental enquiry, penalty can be imposed on the delinquent on a finding recorded on the basis of 'preponderance of probability'. Acquittal by the Court of competent jurisdiction in a judicial proceeding does not ipso facto absolve the delinquent from the liability under the disciplinary jurisdiction of the authority. This what has been considered by the High Court in the impugned judgment in detail and needs no interference by this Court."

74) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988 ರಡಿಯಲ್ಲಿ ಆಪಾದಿತನು ಅಧಿವಿಚಾರಣೆಗೆ ಒಳಪಟ್ಟಂತ ಪ್ರಕರಣಗಳಲ್ಲಿ ಅಂದರೆ ಈ ಅಧಿನಿಯಮದ ಕಲಂ 7, (13) (1) (ಡಿ) ಜೊತೆ ಸೇರಿ 13(2) ರಡಿಯಲ್ಲಿ ದೂರುದಾರರು ದೂರು ನೀಡಿದ ಪ್ರಕರಣಗಳಲ್ಲಿ, **ದೂರುದಾರರು ಪ್ರತಿಕೂಲ ಸಾಕ್ಷಿಯಾಗಿದ್ದಲ್ಲಿ, ಇದರ ಸಾಕ್ಷ್ಯವನ್ನು ವಿಶೇಷ ನ್ಯಾಯಾಲಯವು ಯಾವ ರೀತಿ ಪರಿಗಣಿಸಬೇಕೆಂದು ಇತ್ತೀಚೆಗೆ ತೀರ್ಮಾನವಾಗಿರುವ ಘನ ಸರ್ವೋಚ್ಛ ನ್ಯಾಯಾಲಯದ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 1669/2009 ರ ದಿ: 15.12.2022 ರಂದು ಸಂವಿಧಾನ ಪೀಠದಲ್ಲಿ ತೀರ್ಮಾನವಾಗಿರುವ ನ್ಯಾಯ ನಿರ್ಣಿತ ತೀರ್ಪಿನ ಕಂಡಿಕೆ 69, 70 ಹಾಗೂ 71 ರಲ್ಲಿ ಈ ಕೆಳಗಿನಂತೆ ಉಲ್ಲೇಖವಿರುತ್ತದೆ:**

> 69. In view of the aforesaid discussion and conclusions, we find that there is no conflict in the three judge Bench decisions of this Court in **B. Jayaraj and P. Satyanarayana Murthy** with the three judge Bench decision in **M. Narasinga Rao,** with regard to the nature and quality of proof necessary to sustain a conviction for offences under Sections 7 or 13(1)(d)(i) and (ii) of the Act, when the direct evidence of the complainant or "primary evidence" of the complainant is unavailable owing to his death or any other reason. The position of law when a complainant or prosecution witness turns "hostile" is also discussed and the observations made above would accordingly apply in light of Section 154 of the Evidence Act. In view of the aforesaid discussion, we hold that there is no conflict between the judgments in the aforesaid three cases.
>
> 70. Accordingly, the question referred for consideration of this Constitution Bench is answered as under:
>
> In the absence of evidence of the **complainant (direct/primary, oral/documentary evidence) it is permissible to draw an inferential deduction of culpability/guilt of a public servant under Section 7 and 70 Section 13(1)(d) read with Section 13(2) of the Act based on other evidence adduced by the prosecution.**
>
> 71. We direct that individual cases may be considered before the appropriate Bench after seeking orders of Hon'ble the Chief Justice of India.

Before we conclude, we hope and trust that the complainants as well as the prosecution make sincere efforts to ensure that the corrupt public servants are brought to book and convicted so that the administration and governance becomes unpolluted and free from corruption.

In this regard, we would like to reiterate what has been stated by this Court in **Swatantar Singh vs. State of Haryana (1997) 4 SCC 14:**

"6. ..........Corruption is corroding, like cancerous lymph nodes, the vital veins of the body politic, social fabric of efficiency in the public service and demoralising the honest officers. The efficiency in public service would improve only when the public servant devotes his sincere attention and does the duty diligently, truthfully, honestly and devotes himself assiduously to the performance of the duties of his post. The reputation of corruption would gather thick and unchaseable clouds around the conduct of the officer and gain notoriety much faster than the smoke".

The above has been reiterated in **A.B. Bhaskara Rao vs. CBI (2011) 10 SCC 259** by quoting as under from the case of **State of M.P. vs. Shambhu Dayal (2006) 8 SCC 693:**

"32. It is difficult to accept the prayer of the respondent that a lenient view be taken in this case. The corruption by public servants has become a gigantic problem. It has spread everywhere. No facet of public activity has been left unaffected by the stink of corruption. It has deep and pervasive impact on the functioning of the entire country. Large-scale corruption retards the nation-building activities and everyone has to suffer on that count."

We place on record our appreciation of all learned senior counsel as well as counsel and instructing counsel including learned ASGs who have assisted the Court."

75) ಶಿಸ್ತು ಪ್ರಾಧಿಕಾರದ ನಡವಳಿಗಳಿಗೆ ಸಂಬಂಧಿಸಿದಂತೆ **ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಇತ್ತೀಚೆಗೆ ತೀರ್ಮಾನವಾಗಿರುವ ಸಿವಿಲ್**

**ಅಪೀಲು ನಂ. 1763–1764/2022 State of Karnataka and another VS Umesh -) (2022 LiveLaw (SC) page 304) ದಿ:22.3.2022 ರ ಈ ನ್ಯಾಯ ನಿರ್ಣಿತ ತೀರ್ಪಿನಲ್ಲಿ ದೂರುದಾರರು ಪ್ರತಿಕೂಲ ಸಾಕ್ಷಿಯಾಗಿದ್ದಾಗ, ಇಲಾಖಾ ವಿಚಾರಣೆಯಲ್ಲಿ ಸಾಕ್ಷ್ಯವನ್ನು ಹೇಗೆ ಪರಿಗಣಿಸಬೇಕೆಂದು ಇದ್ದು, ಇದರ ಕಂಡಿಕೆ 11 ರಿಂದ 14, 17 ಮತ್ತು 18 ಕೆಳಗಿನಂತಿರುತ್ತದೆ:**

14. In a judgment of a three judge Bench of this Court in **State of Haryana** v. **Rattan Singh 5**, Justice V R Krishna Iyer set out the principles which govern disciplinary proceedings as follows:

[5] (1977) 2 SCC 491

"4. It is well settled that in a domestic enquiry the strict and sophisticated rules of evidence under the Indian Evidence Act may not apply. **All materials which are logically probative for a prudent mind are permissible. There is no allergy to hearsay evidence provided it has reasonable nexus and credibility.** It is true that departmental authorities and Administrative Tribunals must be careful in evaluating such material and should not glibly swallow what is strictly speaking not relevant under the Indian Evidence Act. For this proposition it is not necessary to cite decisions nor text books, although we have been taken through case-law and other authorities by counsel on both sides. The essence of a judicial approach is objectivity, exclusion of extraneous materials or considerations and observance of rules of natural justice. Of course, fairplay is the basis and if perversity or arbitrariness, bias or surrender of independence of judgment vitiate the conclusions reached, such finding, even though of a domestic tribunal, cannot be held good. However, the courts below misdirected themselves, perhaps, in insisting that passengers who had come in and gone out should be chased and brought before the tribunal before a valid finding could be recorded. The 'residuum' rule to which counsel for the respondent referred, based upon certain passages from American Jurisprudence does not go to that extent nor does the passage from Halsbury insist on such rigid requirement. **The simple point is, was there *some* evidence or was there *no* evidence** — not in the sense of the technical rules governing regular court proceedings but in a fair commonsense way as men of understanding and worldly wisdom will accept. Viewed in this way, sufficiency of evidence in proof of the finding by a domestic tribunal is beyond scrutiny. Absence of *any evidence* in support of a finding is certainly available for the court to look into because it amounts to an error of law apparent on the record. We find, in this case, that the evidence of Chamanlal, Inspector of the Flying Squad, is *some* evidence which has relevance to the charge levelled against the respondent. Therefore, we are unable to hold that the order is invalid on that ground."
(emphasis supplied)

These principles have been reiterated in subsequent decisions of this Court including **State of Rajasthan** v. **B**

**K Meena**6; **Krishnakali Tea Estate** v. **Akhil Bharatiya Chah Mazdoor Sangh**7; **Ajit Kumar Nag** v. **Indian Oil Corporation Ltd.**8; and **CISF** v **Abrar Ali**9.

6 (1966) 6 SCC 417
7 (2004) 8 SCC 200
8 (2005) 7 SCC 764
9 (2017) 4 SCC 507
10 (2009) 12 SCC 78

**15.** In the course of the submissions, the respondents placed reliance on the decision in the **Union of India** v. **Gyan Chand Chattar**10. In that case, six charges were framed against the respondent. One of the charges was that he demanded a commission of 1% for paying the railway staff. The enquiry officer found all the six charges proved. The disciplinary authority agreed with those findings and imposed the punishment of reversion to a lower rank. Allowing the petition under Article 226 of the Constitution, the High Court observed that there was no evidence to hold that he was guilty of the charge of bribery since the witnesses only said that the motive/reason for not making the payment could be the expectation of a commission amount. The respondent placed reliance on the following passages from the decision:

"21. Such a serious charge of corruption requires to be proved to the hilt as it brings both civil and criminal consequences upon the employee concerned. He would be liable to be prosecuted and would also be liable to suffer severest penalty awardable in such cases. Therefore, such a grave charge of quasi-criminal nature was required to be proved beyond the shadow of doubt and to the hilt. It cannot be proved on mere probabilities.
31. [...] wherein it has been held that the punishment should always be proportionate to the gravity of the misconduct. However, in a case of corruption, the only punishment is dismissal from service. Therefore, the charge of corruption must always be dealt with keeping in mind that it has both civil and criminal consequences."

The observations in paragraph 21 are not the ratio decidendi of the case. These observations were made while discussing the judgment of High Court. The ratio of the judgment emerges in the subsequent passages of the judgment, where the test of relevant material and compliance with natural justice as laid down in **Rattan Singh** (supra) was reiterated:

""35. ...an enquiry is to be conducted against any person giving strict adherence to the statutory provisions and principles of natural justice. The charges should be specific, definite and giving details of the incident which formed the basis of charges. No enquiry can be sustained on vague charges. Enquiry has to be conducted fairly, objectively and not subjectively. Finding should not be perverse or unreasonable, nor should the same be based on conjectures and surmises. There is a distinction in proof and suspicion. Every act or omission on the part of the delinquent cannot be misconduct. The

authority must record reasons for arriving at the finding of fact in the context of the statue defining the misconduct."

36. In fact, initiation of the enquiry against the respondent appears to be the outcome of anguish of superior officers as there had been an agitation by the railway staff demanding the payment of pay and allowances and they detained the train illegally and there has been too much hue and cry for several hours on the railway station. **The enquiry officer has taken into consideration the non-existing material and failed to consider the relevant material and finding of all facts recorded by him cannot be sustained in the eye of the law."**

(emphasis supplied)

On the charge of corruption, the Court observed in the above decision that there was no relevant material to sustain the conviction of the respondent since there was only hearsay evidence where the witnesses assumed that the motive for not paying the railway staff "could be" corruption. Therefore, the standard that was applied by the Court for determining the validity of the departmental proceedings was whether (i) there was relevant material for arriving at the finding; and (ii) the principles of natural justice were complied with.

**16.** In **Karnataka Power Transmission Corporation Ltd.** v. **C. Nagaraju**, this Court has held:

"9. Acquittal by a criminal court would not debar an employer from exercising the power to conduct departmental proceedings in accordance with the rules and regulations. The two proceedings, criminal and departmental, are entirely different. They operate in different fields and have different objectives. In the disciplinary proceedings, the question is whether the Respondent is guilty of such conduct as would merit his removal from service or a lesser punishment, as the case may be, whereas in the criminal proceedings, the question is whether the offences registered against him under the PC Act are established, and if established, what sentence should be imposed upon him. The standard of proof, the mode of inquiry and the rules governing inquiry and trial in both the cases are significantly distinct and different."

The Court also held that:

"Having considered the submissions made on behalf of the Appellant and the Respondent No.1, we are of the view that interference with the order of dismissal by the High Court was unwarranted. It is settled law that the acquittal by a Criminal Court does not preclude a Departmental Inquiry against the delinquent officer. The disciplinary authority is not bound by the judgment of the Criminal Court if the evidence that is produced in the Departmental Inquiry is different from that produced during the criminal trial. The object of a Departmental Inquiry is to find out whether the delinquent is guilty of misconduct under the conduct rules for the purpose of determining whether he should be continued in service. The standard of proof in a Departmental Inquiry is not strictly based on the rules of evidence. The order of dismissal which is based on the evidence before the Inquiry Officer in the disciplinary proceedings, which is different from the evidence available to the Criminal Court, is justified and needed no interference by the High Court."

17. In the exercise of judicial review, the Court does not act as an appellate forum over the findings of the disciplinary authority. The court does not re-appreciate the evidence on the basis of which the finding of misconduct has been arrived at in the course of a disciplinary enquiry. The Court in the exercise of judicial review must restrict its review to determine whether: (i) the rules of natural justice have been complied with; (ii) the finding of misconduct is based on some evidence; (iii) the statutory rules governing the conduct of the disciplinary enquiry have been observed; and (iv) whether the findings of the disciplinary authority suffer from perversity; and (vi) the penalty is disproportionate to the proven misconduct. [11] However, none of the above tests for attracting the interference of the High Court were attracted in the present case. The Karnataka Administrative Tribunal having exercised the power of judicial review found no reason to interfere with the award of punishment of compulsory retirement. The Division Bench of the High Court exceeded its jurisdiction under Article 226 and trenched upon a domain which falls within the disciplinary jurisdiction of the employer. The enquiry was conducted in accordance with the principles of natural justice. The findings of the inquiry officer and the disciplinary authority are sustainable with reference to the evidence which was adduced during the enquiry. The acquittal of the respondent in the course of the criminal trial did not impinge upon the authority of the disciplinary authority or the finding of misconduct in the disciplinary proceeding.

[11] **State of Karnataka** v. **N. Gangaraj,** (2020) 3 SCC 423; **Union of India** v. **G. Ganayutham** (1997) 7 SCC 463; **B.C. Chaturvedi** v. **Union of India,** (1995) 6 SCC 749; **R.S. Saini** v **State of Punjab** (1999) 8 SCC 90; and **CISF** v **Abrar Ali** (2017) 4 SCC 507.

**18.** For these reasons, we allow the appeals and set aside the impugned judgment and order of the High Court of Karnataka at the Kalaburagi Bench dated 29 November 2017 in Writ Petition Nos. 202250-251/2016 (S-KAT). The Petition instituted by the respondent under Article 226 of the Constitution shall stand dismissed. **The finding of misconduct and the punishment of compulsory retirement are restored.**

76) ಮೇಲಿನ ಘನ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅಂಶಗಳು, ಪ್ರಸ್ತುತ ಪ್ರಕರಣಕ್ಕೆ ಪೂರ್ಣವಾಗಿ ಅನ್ವಯವಾಗುತ್ತದೆ. ಮೇಲೆ ಉಲ್ಲೇಖಿಸಿರುವ

ತೀರ್ಪಿನಲ್ಲಿ ಇರುವ ಪ್ರಕರಣದಲ್ಲಿ ದೂರುದಾರರು ಆ ಪ್ರಕರಣದ ಆಪಾದಿತರ ವಿರುದ್ಧ ಮಾಡಿರುವ ದೋಷಾರೋಪಣೆಗೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ದೂರುದಾರರು ಆರೋಪಿಗೆ ಕೊಟ್ಟಿದ್ದ ಹಣ ಅಂದರೆ ಆಪಾದಿತನಿಂದ ಟ್ರಾಪ್ ಆದ ದಿನ ವಶಕ್ಕೆ ತೆಗೆದುಕೊಂಡ ಹಣದ ಬಗ್ಗೆ ಆ ದೂರುದಾರರ ತಾನು ಸಾಲ ಪಡೆದುಕೊಂಡಿದ್ದ ಹಣವನ್ನು ಹಿಂದಿರುಗಿಸಿದ್ದ ಎಂದು ಹೇಳಿದ್ದು, ಇದನ್ನು ದೂರಿನಲ್ಲಿ ನಮೂದಿಸಿರುವ ಅಂಶಗಳ ಜೊತೆ ಪರಿಶೀಲಿಸಿ ಹಾಗೂ ನೆರಳುಸಾಕ್ಷಿ ಮತ್ತು ತನಿಖಾಧಿಕಾರಿಯ ಸಾಕ್ಷ್ಯಕ್ಕೆ ಪೂರಕವಾಗಿಲ್ಲವೆಂದು, ದೂರುದಾರರು ಸಲ್ಲಿಸಿರುವ ದೂರಿಗೆ ಸಹ ಇದು ವ್ಯತಿರಿಕ್ತವಾಗಿರುತ್ತದೆಂದು ಆಪಾದಿತರು ತಮ್ಮ ವಿರುದ್ಧ ಇರುವ ದೂರಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಈ ರೀತಿ ಕಥೆ ಸೃಷ್ಟಿಮಾಡಿ ಹೇಳಿದ್ದಾರೆಂದು ಸದರಿ ವಿಚಾರಣಾ ವರದಿಯಲ್ಲಿ ನಮೂದಾಗಿರುತ್ತದೆಂದು ಹಾಗೂ ಆ ಆಪಾದಿತರ ವಿರುದ್ದ ಇರುವ ದುರ್ನಡತೆಯು ಆ ಪ್ರಕರಣದ ಪಿಡಬ್ಲ್ಯು –2 ನೆರಳು ಸಾಕ್ಷಿಯ ಸಾಕ್ಷ್ಯ ಹಾಗೂ ಪಿಡಬ್ಲ್ಯು–3 ತನಿಖಾಧಿಕಾರಿಯ ಸಾಕ್ಷ್ಯದಿಂದ ರುಜುವಾತಾಗಿರುತ್ತದೆಂದು ಹಾಗೂ ಇವರುಗಳ ಸಾಕ್ಷ್ಯವನ್ನು ತಳ್ಳಿ ಹಾಕಲು ಯಾವುದೇ ಸಕಾರಣವಿಲ್ಲವೆಂದು ಹಾಗೂ ಇವರು ಸುಳ್ಳು ನುಡಿಯುತ್ತಿದ್ದಾರೆಂದು ನಂಬಲು ಯಾವುದೇ ಕಾರಣ ಇರುವುದಿಲ್ಲವೆಂದು ಆ ಪ್ರಕರಣದ ವಿಚಾರಣಾಧಿಕಾರಿಯ ವಿಚಾರಣಾ ವರದಿಯಲ್ಲಿ ಇರುತ್ತದೆಂದು ನಮೂದಾಗಿರುತ್ತದೆ. ಮತ್ತು ಆಪಾದಿತರ ವಿರುದ್ಧ ಮಾಡಿರುವ ಆಪಾದನೆ ರುಜುವಾತಾಗಿರುತ್ತದೆಂದು, ಆಪಾದಿತರು ಹೇಳಿರುವ ಅಂಶ ಅಂದರೆ ಸಾಲದ ಹಣವನ್ನು ದೂರುದಾರರು ಹಿಂತಿರುಗಿಸಿದರೆಂದು ಅದನ್ನು ದೂರುದಾರರಿಂದ ಪಡೆದುಕೊಂಡಿದ್ದೇನೆಂದು ಆಪಾದಿತ ಹೇಳಿರುವ ಅಂಶ ನಂಬಲು ಬರುವುದಿಲ್ಲವೆಂದು ಹಾಗೂ **ಆಪಾದಿತರ ವಿರುದ್ಧ ಇರುವ ದುರ್ನಡತೆಯ ಆರೋಪ ರುಜುವಾತಾಗಿದೆಯೆಂದು ವಿಚಾರಣಾ ವರದಿಯಲ್ಲಿ ನಮೂದಾಗಿದ್ದು, ಈ ಅಂಶ ರುಜುವಾತಾಗಿದೆಯೆಂದು ಶಿಸ್ತು ಪ್ರಾಧಿಕಾರವು ಒಪ್ಪಿ ಸಂಬಂಧಪಟ್ಟ ಆಪಾದಿತರಿಗೆ ಕಡ್ಡಾಯ ನಿವೃತ್ತಿಯನ್ನು ನೀಡಿರುತ್ತದೆ,** ಇದನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿ: 25.4.2016 ರ ಆದೇಶದಲ್ಲಿ ಸ್ಥಿರೀಕರಿಸಿದ್ದು, ಆಪಾದಿತರ ಅರ್ಜಿಯನ್ನು ವಜಾ ಮಾಡಿದ್ದು, ಸದರಿ ಆಪಾದಿತರು ಕರ್ನಾಟಕ

ಘನ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 202250/2016 ಮತ್ತು 202251/2016ರಲ್ಲಿ ಪ್ರಶ್ನೆ ಮಾಡಿದ್ದು, ಈ ರಿಟ್ ಅರ್ಜಿಗಳು ಕಲಬುರಗಿ ಪೀಠದಲ್ಲಿ 29.11.2017 ರಲ್ಲಿ ಆಪಾದಿತರ ರಿಟ್ ಅರ್ಜಿಯನ್ನು ಪುರಸ್ಕರಿಸಿದ್ದು, ಸದರಿ ತೀರ್ಪನ್ನು ಶಿಸ್ತು ಪ್ರಾಧಿಕಾರವು (ಸರ್ಕಾರವು) ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು, ಇದನ್ನು ಮೇಲಿನ ಸಿವಿಲ್ ಅಪೀಲಿನ ತೀರ್ಪಿನಲ್ಲಿ ಘನ ಸರ್ವೋಚ್ಛ ನ್ಯಾಯಾಲಯವು ಕರ್ನಾಟಕ ಘನ ಉಚ್ಛ ನ್ಯಾಯಾಲಯವು ಮಾಡಿದ್ದ ಆದೇಶವನ್ನು ರದ್ದುಪಡಿಸಿದ್ದು ಆಪಾದಿತರ ವಿರುದ್ಧ ರುಜುವಾತಾಗಿದ್ದ, ದುರ್ನಡತೆ ಆರೋಪ ಮತ್ತು ಇದಕ್ಕೆ ವಿಧಿಸಿದ್ದ ಕಡ್ಡಾಯ ನಿವೃತ್ತಿಯ ಶಿಕ್ಷೆಯನ್ನು ಪುನರ್‌ಸ್ಥಾಪಿಸಲಾಗಿರುತ್ತದೆಂದು ಮೇಲಿನ ಘನ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿ ಇರುತ್ತದೆ.

77) ಮೇಲೆ ನಮೂದಿಸಿರುವ **ಸಿವಿಲ್ ಅಪೀಲು ನಂ. 1763–1764/2022 ರ ದಿ: 22.3.2022 ರ –(1764/2022 State of Karnataka and another VS Umesh -) (2022 LiveLaw (SC) page 304) ರ ತೀರ್ಪು ಪ್ರಸ್ತುತ ಪ್ರಕರಣಕ್ಕೆ ಸಂಪೂರ್ಣವಾಗಿ ಅನ್ವಯವಾಗುತ್ತದೆ.**

78) ಮೇಲಿನ ತೀರ್ಪಿನ ಅನ್ವಯ ಪ್ರಸ್ತುತ ಪ್ರಕರಣವನ್ನು ಪರಿಶೀಲಿಸಿದಾಗ, ದೂರುದಾರರು ಮತ್ತು ಆಪಾದಿತೆ ನಡುವೆ ನಡೆದಿರುವ ಸಂಭಾಷಣೆಯಲ್ಲಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎನ್ನುವುದಕ್ಕೆ ಸಂಬಂಧಪಟ್ಟಂತೆ ದೂರುದಾರರು ನಿ.ಪಿ.1 ದೂರಿನಲ್ಲಿ ನಮೂದಿಸಿದ್ದು, ದೂರುದಾರರು ಮತ್ತು ಆಪಾದಿತೆ ನಡುವೆ ದೂರು ಕೊಡುವುದಕ್ಕೆ ಪೂರ್ವದಲ್ಲಿ ನಡೆದಿದ್ದ ಸಂಭಾಷಣೆಯನ್ನು ಅಂದರೆ ದಿ:22.4.2014 ರಂದು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರಿಕಾರ್ಡ ಮಾಡಿದ್ದು ಇದನ್ನು ಸಿ.ಡಿಯಲ್ಲಿ ಕಾಪಿ ಮಾಡಿಕೊಂಡಿದ್ದು, ಈ ಸಂಭಾಷಣೆಯ ಲಿಪೀಕರಣವನ್ನು ನಿ.ಪಿ.8 ರ ಪ್ರಕಾರ ಮಾಡಿದ್ದು, ಇದನ್ನು ಪ್ರಾಯೋಗಿಕ ಪಂಚನಾಮೆಯಲ್ಲಿ ಸಹ ನಮೂದಿಸಿರುವುದು ಕಂಡುಬರುತ್ತದೆ. ದೂರುದಾರರು ಮತ್ತು ಆಪಾದಿತೆ ನಡುವೆ ನಡೆದಿರುವ ಸಂಭಾಷಣೆಯ ಧ್ವನಿಮುದ್ರಣದ ಭಾಗವನ್ನು ಆಪಾದಿತೆಯ ಮೇಲಾಧಿಕಾರಿಯಾದ ಬಿ.ಡಿ.ಎ ಆಯುಕ್ತರು– ಪಿಡಬ್ಲ್ಯೂ–4 ಇವರಿಗೆ

ಕೇಳಿಸಿದ್ದು, ಇವರು ಆಪಾದಿತೆಯ ಧ್ವನಿಯನ್ನು ಗುರುತಿಸಿದ್ದು ಸಂಭಾಷಣೆಯನ್ನು ಕೇಳಿದ ನಂತರವೇ ಪಿಡಬ್ಲ್ಯೂ-4 ರವರು ನಿ.ಪಿ.12-A ಪ್ರಕಾರ ವರದಿ ಕೊಟ್ಟಿರುತ್ತೇನೆಂದು ಹೇಳಿರುವುದು ಹಾಗೂ ಪ್ರಾ.ಸಾ.2 ಪಂಚ ಸಾಕ್ಷಿ ಶ್ರೀನಿವಾಸ್ ಸಹ ದೂರುದಾರರು ದೂರು ನೀಡುವಾಗ ಕೊಟ್ಟಿದ್ದ ಸಂಭಾಷಣೆಯ ಸಿ.ಡಿ.ಯನ್ನು ಮತ್ತು ದೂರುದಾರರು ಆಪಾದಿತೆಗೆ ಹಣ ಕೊಡುವಾಗ ದಾಖಲು ಮಾಡಿಕೊಂಡಿದ್ದ ಸಂಭಾಷಣೆಯ ಸಿ.ಡಿಯನ್ನು ಬಿಡಿಎ ಆಯುಕ್ತರು ಪಿಡಬ್ಲ್ಯೂ-4 ಇವರಿಗೆ ಕೇಳಿಸಿರುತ್ತಾರೆಂದು ಪಿಡಬ್ಲ್ಯೂ-2 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದು ಕಂಡುಬರುತ್ತದೆ. ದೂರುದಾರರು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಪ್ರತಿಕೂಲ ಸಾಕ್ಷಿಯಾಗಿದ್ದರೂ ಸಹ ದೂರಿನ ಅಂಶಗಳನ್ನು ಮೇಲೆ ನಮೂದಿಸಿರುವ ತೀರ್ಪಿನನ್ವಯ ಪರಿಶೀಲಿಸಲಾಗಿ ಹಾಗೂ ದೂರುದಾರರು ಆಪಾದಿತೆಗೆ ಆಕೆ ಕೇಳಿದ್ದ ಲಂಚದ ಹಣವನ್ನು ಕೊಡಲು ದಿ: 25.4.2014 ರಂದು ಆಪಾದಿತೆಯ ಕೊಠಡಿಗೆ ಹೋದಾಗ ಆಪಾದಿತೆ ಮತ್ತು ದೂರುದಾರರ ನಡುವೆ ನಡೆದಿರುವ ಸಂಭಾಷಣೆಯನ್ನು ಪಿಡಬ್ಲ್ಯೂ-4 ರವರಿಗೆ ಕೇಳಿಸಿದ್ದು, ಅವರು ಅದನ್ನು ಕೇಳಿ ಸದರಿ ಧ್ವನಿ ಆಪಾದಿತೆಯದೆಂದು ಗುರುತಿಸಿದ್ದೆನೆಂದು ಮತ್ತು ಆ ಸಂಭಾಷಣೆಯಲ್ಲಿ ಆಪಾದಿತೆಯು ಲಂಚದ ಹಣವನ್ನು ಸ್ವೀಕರಿಸಿರುವುದು ತಿಳಿದು ಬಂದಿರುತ್ತದೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಲ್ಲದೇ, ಪ್ರಾ.ಸಾ.4 ರವರು ತಮ್ಮ ಸಾಕ್ಷ್ಯದಲ್ಲಿ ಆಪಾದಿತೆಯು ಈ ಪ್ರಕರಣಕ್ಕೆ ಸಂಬಧಿಸಿದ ಕಡತವನ್ನು 2.4.2014 ಮತ್ತು 4.4.2014 ರಂದು ಉಪ ಕಾರ್ಯದರ್ಶಿಯವರಿಂದ ಸ್ವೀಕರಿಸಿದ್ದರೂ ಸಹ ಯಾವುದೇ ಕ್ರಮವನ್ನು ಜರುಗಿಸದೇ ಕಡತಗಳನ್ನು ಹಾಗೆಯೇ ಇಟ್ಟಿದ್ದು, ಫಿರ್ಯಾದುದಾರರಿಂದ ಲಂಚದ ಹಣಕ್ಕೆ ಒತ್ತಾಯಿಸಿ ದೂರುದಾರರು ಲಂಚದ ಹಣವನ್ನು ಈ ದಿನ ಫಿರ್ಯಾದುದಾರರು ನೀಡಿದ ನಂತರ ಅಂದರೆ ದಿ: 25.4.2014 ರಂದು ನೀಡಿದ ನಂತರ ಸದರಿ ಕಡತಕ್ಕೆ ಸಹಿ ಮಾಡಿರುವುದು ಕಂಡುಬಂದಿರುತ್ತದೆಂದು ಪಿಡಬ್ಲ್ಯೂ-4ರವರು ತಮ್ಮ ಸಾಕ್ಷ್ಯದಲ್ಲಿ ಹಾಗೂ ವರದಿಯಲ್ಲಿ ಹೇಳಿರುವುದು ಕಂಡುಬರುತ್ತದೆ.

79) ಇದಲ್ಲದೇ, ಆಪಾದಿತೆಯ ಸಮಜಾಯಿಷಿಯನ್ನು ಪರಿಶೀಲಿಸಿದರೆ ದಿ: 25.4.2014 ರಂದು ದೂರುದಾರರು ಆಪಾದಿತೆಯ ಕೊಠಡಿಗೆ ಹೋಗಿದ್ದು,

ಆಪಾದಿತೆಯ ಕೇಳಿದ್ದ ಹಣವನ್ನು ಆಪಾದಿತೆಗೆ ರೂ. 7,00,000/-ಗಳನ್ನು ನೀಡಿದ್ದ ಬಗ್ಗೆ ಆಪಾದಿತೆಯು ಕೈಯಿಂದ ತೆಗೆದುಕೊಂಡ ಬಗ್ಗೆ ಹಾಗೂ ಆಪಾದಿತೆ ಮತ್ತು ದೂರುದಾರರ ನಡುವೆ ನಡೆದಿದ್ದ ಸಂಭಾಷಣೆಗಳನ್ನು ಆಪಾದಿತೆ ಒಪ್ಪಿಕೊಂಡಿದ್ದು ಅಂದರೆ, ಶುಕ್ರವಾರ ಮಹಾಲಕ್ಷ್ಮಿ ತೆಗೆದುಕೊಳ್ಳಿ ಎಂದು ದೂರುದಾರರು ಹೇಳಿದರು ಮತ್ತು ಇತರೆ ಅಂಶಗಳನ್ನು ತಮ್ಮ ಸಮಜಾಯಿಷಿಯಲ್ಲಿ ನಮೂದಿಸಿದ್ದು, ಈ ಅಂಶಗಳು ಆಪಾದಿತೆ ಮತ್ತು ದೂರುದಾರರ ನಡುವೆ ಸಂಭಾಷಣೆ ನಡೆದಿರುವುದನ್ನು ಹಾಗೂ ರೂ. 7,00,000/-ಗಳಿದ್ದ ಪ್ಯಾಕೇಟನ್ನು ಆಪಾದಿತೆಯು ತನ್ನ ಕೈಯಲ್ಲಿ ತೆಗೆದುಕೊಂಡಿದ್ದೆ ಎನ್ನುವ ಅಂಶವನ್ನು ತಮ್ಮ ಸಮಜಾಯಿಷಿಯಲ್ಲಿ ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಆಕೆಯು ಇದನ್ನು ಸ್ವೀಟ್ ಪ್ಯಾಕೇಟ್ ಎಂದು ತೆಗೆದುಕೊಂಡೆ ಎಂಬ ಅಂಶವು ಕಥೆ ಕಟ್ಟಿಹೇಳಿರುವ ಸಂಗತಿಯೆಂದು ಗೊತ್ತಾಗುತ್ತದೆ. ಆಪಾದಿತೆಯು ಹಿರಿಯ ಅಧಿಕಾರಿಯಾಗಿದ್ದು, ಇದನ್ನು ಸ್ವೀಟ್ ಪ್ಯಾಕೇಟ್ ಎಂದು ಅಂದುಕೊಂಡೆನು ಎಂದು ಹೇಳಿರುವುದು ಈ ಪ್ರಕರಣದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹೇಳಿರುವ ಸುಳ್ಳು ಸಂಗತಿಯೆಂದು ತಿಳಿದು ಬರುತ್ತದೆ. ಮೇಲಾಗಿ ಪ್ರಾ.ಸಾ.2 ಪಂಚಸಾಕ್ಷಿ ಶ್ರೀನಿವಾಸ, ಪ್ರಾ.ಸಾ.3- ತನಿಖಾಧಿಕಾರಿ ಇವರುಗಳು ಈ ಹಣದ ಲಕೋಟೆ ಸ್ವೀಟ್ ಪೊಟ್ಟಣದಂತೆ ಇತ್ತೆಂದು ಎಲ್ಲಿಯೂ ಹೇಳಿರುವುದಿಲ್ಲ. ಆಪಾದಿತೆಯು ಕ್ರಿಮಿನಲ್ ಪ್ರಕರಣದಲ್ಲಿ ತಮಗೆ ಖುಲಾಸೆಯಾಗಿರುವುದರಿಂದ ಶಿಸ್ತು ಪ್ರಾಧಿಕಾರದ ಈ ಪ್ರಕರಣಕ್ಕೆ ಅನ್ವಯಿಸಬೇಕೆಂದು ದಾಖಲೆಗಳನ್ನು ನಿಶಾನಿಸಿಕೊಂಡಿರುತ್ತಾರೆ. ಮೇಲೆ ನಮೂದಿಸಿರುವ ಘನ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿ ಹೇಳಿರುವಂತೆ ಕ್ರಿಮಿನಲ್ ಪ್ರಕರಣದಲ್ಲಿ ಆರೋಪವನ್ನು ರುಜುವಾತುಪಡಿಸಲು ಕಟ್ಟುನಿಟ್ಟಾದ ಪುರಾವೆ/ಸಾಕ್ಷ್ಯದ ಅಗತ್ಯವಿದ್ದು, ಇಲಾಖಾ ವಿಚಾರಣೆಯಲ್ಲಿ ಸಂಭವನೀತೆಯ ಪ್ರಾಧಾನ್ಯತೆ ಇರುತ್ತದೆ. ಆದ್ದರಿಂದ ಆಪಾದಿತೆಯು ಹೇಳಿರುವ ಅಂಶಗಳನ್ನು ಪರಿಗಣಿಸಲು ಹಾಗೂ ನಂಬಲು ಬರುವುದಿಲ್ಲ.

ಮೇಲಿನ ಅಂಶಗಳಿಂದ ಆಪಾದಿತೆಯು ವಿರುದ್ಧ ಮಾಡಿರುವ ಆಪಾದನೆಗಳು ಅಂದರೆ ಈ ಪ್ರಕರಣದಲ್ಲಿ ನಮೂದಿಸಿದ ಕಡತಗಳು ಆಪಾದಿತೆಯವರಲ್ಲಿ ಇದ್ದು ಹಾಗೂ ಇವುಗಳಿಗೆ ಸಂಬಂಧಿಸಿದಂತೆ ಆಪಾದಿತೆ

ದೂರುದಾರರಿಂದ ದಿ: 22.4.2014 ರಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು ಹಾಗೂ ದಿ: 25.4.2014 ರಂದು ದೂರುದಾರರಿಂದ ರೂ.7.00 ಲಕ್ಷರೂಗಳನ್ನು ಪಡೆದುಕೊಂಡಿರುವುದು, ಇದರಿಂದ ಇವರು ತೀವ್ರತರವಾದ ದುರ್ನಡತೆ ಎಸಗಿರುವುದು ಸಾಬೀತಾಗಿರುತ್ತದೆ. ಇದರ ಪ್ರಕಾರ ಇವರ ನಡವಳಿಕೆಯು ಸಾರ್ವಜನಿಕ ನೌಕರರಿಗೆ ತಕ್ಕದ್ದಲ್ಲದ್ದಾಗಿದ್ದು, ಇವರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ಉಪ ನಿಯಮ 3(1) (i) (ii) ಮತ್ತು (iii) ರ ಉಲ್ಲಂಘನೆಯಾಗಿರುವುದು ಈ ವಿಚಾರಣೆಯಿಂದ ಕಂಡುಬಂದಿರುತ್ತದೆ, ಹಾಗೂ ಶಿಸ್ತು ಪ್ರಾಧಿಕಾರವು ಇದನ್ನು ರುಜುವಾತುಪಡಿಸಿರುತ್ತದೆ. ಆದ್ದರಿಂದ ಮೇಲಿನ ಅಂಶಗಳನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

## ಅಂತಿಮ ವರದಿ

80. ಮೇಲಿನ ಅಂಶಗಳನ್ವಯ ಆಪಾದಿತೆಯ ವಿರುದ್ಧ ಮಾಡಲಾದ ಆಪಾದನೆಯನ್ನು ಶಿಸ್ತುಪ್ರಾಧಿಕಾರವು ರುಜುವಾತುಪಡಿಸಿರುತ್ತದೆ.

ಆದ್ದರಿಂದ ಮೇಲಿನ ವರದಿಯನ್ನು ಗೌರವಾನ್ವಿತ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**(ಎಂ.ಶ್ರೀದೇವಿ)** 23/1/2023
ಅಪರ ನಿಬಂಧಕರು ವಿಚಾರಣೆಗಳು-5
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು

**ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆಗೊಳಪಡಿಸಿದ ಸಾಕ್ಷಿದಾರರು:**

1. ಶ್ರೀ ಬಸವರಾಜು ತಂದೆ ನಂಜುಂಡಪ್ಪ, ಬೆಂಗಳೂರು
2. ಶ್ರೀ ಶ್ರೀನಿವಾಸ, ಸೆಕ್ಷನ್ ಆಫೀಸರ್, ಡಿಪಿಆರ್.(ಆರ.), ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಶ್ರೀ ನಾರಾಯಣ, ಡೆಪ್ಯೂಟಿ ಡೈರೆಕ್ಟರ್, ರಾಜ್ಯ ಗುಪ್ತ ದಳ, ಬೆಂಗಳೂರು

**ಶಿಸ್ತು ಪ್ರಾಧಿಕಾರದ ಪರವಾಗಿ ನಿಶಾನಿಸಿಕೊಂಡಿರುವ ದಾಖಲಾತಿಗಳು.**

ನಿ.ಪಿ.1: ದೂರುದಾರರು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರಿಗೆ ಸಲ್ಲಿಸಿದ ದೂರು.

ನಿ.ಪಿ.2: ಶ್ರೀ ನಾಗೇಂದ್ರ ಇವರು ದೂರುದಾರರಿಗೆ ಕೊಟ್ಟ ಅಧಿಕಾರ ಪತ್ರ

ನಿ.ಪಿ.3: ಶ್ರೀಮತಿ ಬಿ.ಪಾರ್ವತಮ್ಮ ಕೋಂ ಎಂ. ಮಲ್ಲಿಕಾರ್ಜುನಯ್ಯ ಉಲ್ಲಾಳು ಗ್ರಾಮ ಇವರು ದೂರುದಾರರಿಗೆ ಕೊಟ್ಟ ಅಧಿಕಾರ ಪತ್ರ.

ನಿ.ಪಿ.4: ಪ್ರಾಯೋಗಿಕ ಪಂಚನಾಮೆ

ನಿ.ಪಿ.5: ಟ್ರಾಪ್ ಪಂಚನಾಮೆ

ನಿ.ಪಿ.6: ಫಿರ್ಯಾದುದಾರರ ಹೇಳಿಕೆ

ನಿ.ಪಿ.6(ಎ): ನಿ.ಪಿ.6 ರಲ್ಲಿನ ಫಿರ್ಯಾದುದಾರರ ಹೇಳಿಕೆಯ ಭಾಗ

ನಿ.ಪಿ.7: ಫಿರ್ಯಾದುದಾರರು ಹಾಜರು ಪಡಿಸಿದ ನೋಟಿನ ನಂಬರುಗಳ ವಿವರ

ನಿ.ಪಿ.8; ಆಪಾದಿತೆ ಹಾಗೂ ಫಿರ್ಯಾದುದಾರರ ನಡುವೆ ನಡೆದ ಸಂಭಾಷಣೆಯ ಧ್ವನಿ ಮುದ್ರಣವನ್ನು ಲಿಪೀಕರಿಸಿರುವ ಭಾಗ.

ನಿ.ಪಿ.9: ತನಿಖಾಧಿಕಾರಿ, ಪೊಲೀಸ್ ಉಪಾಧೀಕ್ಷರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಾಕ್ಷಿದಾರರನ್ನು ಕಳುಹಿಸಲು ಕೋರಿ ಜಂಟಿ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರಿಗೆ ಬರೆದ ಪತ್ರ.

ನಿ.ಪಿ.10: ತನಿಖಾಧಿಕಾರಿ ಪೊಲೀಸ್ ಉಪಾಧೀಕ್ಷರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಾಕ್ಷಿದಾರರನ್ನು ಕಳುಹಿಸಲು ಕೋರಿ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಬರೆದ ಪತ್ರ.

ನಿ.ಪಿ.11: ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ಸಂಬಂಧಪಟ್ಟ ಕಡತಗಳು.

ನಿ.ಪಿ.12; ಪಾರ್ವತಮ್ಮ ಮತ್ತು ನಾಗೇಂದ್ರರವರಿಗೆ ಸಂಬಂಧಪಟ್ಟ ಕಡತಗಳು.

ನಿ.ಪಿ.12(**A**): ಪ್ರಾ.ಸಾ.4 ರವರು ದಿ:25.4.2014 ರಂದು ಸಲ್ಲಿಸಿದ ವರದಿ

ನಿ.ಪಿ.13: ಆಪಾದಿತೆಯ ಸಮಜಾಯಿಷಿ ದಿ: 25.4.2014

ನಿ.ಪಿ.14: ಶ್ರೀ ಕೆ.ಚಿಕ್ಕಯ್ಯ ಇವರು ನೀಡಿರುವ ಹೇಳಿಕೆ.

ನಿ.ಪಿ.15: ತನಿಖಾಧಿಕಾರಿಯು ಅಡಿಷನಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದಿ: 12.5.2014 ರಲ್ಲಿ ಸಲ್ಲಿಸಿದ ಪತ್ರ.

ನಿ.ಪಿ.16: ಲೋಕೋಪಯೋಗಿ ಇಲಾಖೆಯವರು ತಯಾರಿಸಿರುವ ಕೃತ್ಯ ನಡೆದ ಸ್ಥಳದ ನಕ್ಷೆ

ನಿ.ಪಿ.17: ರಾಸಾಯನಿಕ ವಿಶ್ಲೇಷಣೆಯ ವರದಿ

ನಿ.ಪಿ.18: ಸರ್ಕಾರದಿಂದ ಆಪಾದಿತೆಯನ್ನು ಅಭಿಯೋಜನೆಗೆ ಒಳಪಡಿಸಲು ನೀಡಿರುವ ಅಭಿಯೋಜನಾ ಮಂಜೂರಾತಿ ಆದೇಶ

**<u>ಆಪಾದಿತ ನೌಕರರ ಪರವಾಗಿ ವಿಚಾರಣೆಗೊಳಪಡಿಸಿದ ಸಾಕ್ಷಿದಾರರು:</u>**

1. ಶ್ರೀಮತಿ ರಾಜಮ್ಮ ಎ.ಚೌಡರೆಡ್ಡಿ, ಆಪಾದಿತೆ

**<u>ಆಪಾದಿತ ನೌಕರರ ಪರವಾಗಿ ಪರವಾಗಿ ನಿಶಾನಿಸಿಕೊಂಡಿರುವ ದಾಖಲಾತಿಗಳು.</u>**

ನಿ.ಡಿ.1: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.5ರವರ ಸಾಕ್ಷ್ಯ

ನಿ.ಡಿ–2: ಪ್ರಕರಣದ ಕಚ್ಚಾನಕ್ಷೆ

ನಿ.ಡಿ–3: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.12ರವರ ಸಾಕ್ಷ್ಯ.

ನಿ.ಡಿ–4: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರಲ್ಲಿನ ಪ್ರಾಸಾ.8 ರವರ ಸಾಕ್ಷ್ಯ

ನಿ.ಡಿ.5: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಆಗಿರುವ ನ್ಯಾಯಾಲಯದ ತೀರ್ಪಿನ ದೃಢೀಕೃತ ನಕಲು.

ನಿ.ಡಿ.6: ಪಾರ್ವತಮ್ಮನವರ ಕಡತಕ್ಕೆ ಸಂಬಂಧಿಸಿದಂತೆ ಬಿಡಿಎ ಉಪ ಕಾರ್ಯದಶಿ–4ರವರು ದಿ:26.09.2016ರಂದು ನೀಡಿರುವ ಹಿಂಬರಹ.

ನಿ.ಡಿ.7: ನಾಗೇಂದ್ರರವರ ಕಡತಕ್ಕೆ ಸಂಬಂಧಿಸಿದಂತೆ ಬಿಡಿಎ ಉಪ ಕಾರ್ಯದಶಿ–4 ರವರು ದಿ:17.10.2016ರಂದು ನೀಡಿರುವ ಹಿಂಬರಹ.

ನಿ.ಡಿ.8: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 5 ರವರು (ಚಾ.ಸಾ.2) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.9 : ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ– 9 ರವರು (ಚಾ.ಸಾ.8) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.10: ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 12 ರವರು (ಚಾ.ಸಾ.37) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.11 :- ಗಂಗುಲಪ್ಪ ಇವರ ವಿರುದ್ದ ಕ್ರೈ.ನಂ. 16/2011 ರಲ್ಲಿ ದಾಖಲಾಗಿದ್ದ ದೂರಿನ ಪ್ರತಿ, ಪ್ರ.ವ.ವ. ಪ್ರತಿ ಮತ್ತು ದೋಷಾರೋಪಣೆ ಪಟ್ಟಿಯ ಪ್ರತಿ. ( ಒಟ್ಟು 7 ಹಾಳೆಗಳು).

ನಿ.ಡಿ.12 :- ಚಂದ್ರಶೇಖರ ಇವರ ವಿರುದ್ದ ಕ್ರೈ.ನಂ. 47/2010 ರಲ್ಲಿ ದಾಖಲಾಗಿದ್ದ ದೂರಿನ ಪ್ರತಿ, ಮತ್ತು ದೋಷಾರೋಪಣೆ ಪಟ್ಟಿಯ ಪ್ರತಿ. ( ಒಟ್ಟು 13 ಹಾಳೆಗಳು).

ನಿ.ಡಿ.13 :- ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 1 ರವರು (ಚಾ.ಸಾ.5) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.14 :- ವಿಶೇಷ ನ್ಯಾಯಾಲಯದ ವಿಶೇಷ ಸಿ.ಸಿ.ನಂ. 345 /2014 ರ ಪ್ರಕರಣದಲ್ಲಿ ಪ್ರಾ.ಸಾ. – 3 ರವರು (ಚಾ.ಸಾ.4) ರವರ ನುಡಿದ ಸಾಕ್ಷ್ಯ ಹಾಳೆಯ ಪ್ರತಿ.

ನಿ.ಡಿ.15 :- ದಿ: 27.2.2018ರ ಕರ್ನಾಟಕ ಸರ್ಕಾರದ ನೋಟಿಫಿಕೇಷನ್ ನ ಪ್ರತಿ. ( 4 ಹಾಳೆಗಳು).

ನಿ.ಡಿ.16 :- ವಿಶೇಷ ಸಿಸಿ ನಂ. 345/2014 ರ ಪ್ರಕರಣದ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸದಂತೆ ಸರ್ಕಾರದ ಗೃಹ ಇಲಾಖೆಯು ನಿರ್ಧರಿಸಿ ಅಪರ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಬರೆದಿದ್ದ ದಿ: 31.1.2020 ರ ಪತ್ರದ ಪ್ರತಿ.

(ಎಂ.ಶ್ರೀದೇವಿ) 23/1/2023
ಅಪರ ನಿಬಂಧಕರು ವಿಚಾರಣೆಗಳು-5
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು